ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 3

ರೂ. 5/-

ಜನವರಿ 18, 2009


ಕನ್ನಡ ವಾರಪತ್ರಿಕೆ




ನಿರ್ದಯ ಶೋಷಣೆ ದಮನದ ವಿರುದ್ಧ

ಹೋರಾಟದ ಕಣಕ್ಕೆ ಸಾರಿಗೆ ನೌಕರರು

'ಸತ್ಯಂ ಮಿಥ್ಯಂ ಪಂಗನಾಮಂ'





ಭಯೋತ್ಪಾದನೆ ವಿರುದ್ಧ ಹೋರಾಟ ಬಜೆಪಿ ಗೋಸುಂಬೆತನ

ಪತ್ರಿಕಾ ಸ್ವಾತಂತ್ರ್ಯಕ್ಕೆ ಕೈ ಕೋಳ

ಬೆಂಗಳೂರು : ಕಸಾಯಿಖಾನೆ ಮುಚ್ಚುವುದೇಕೆ ?

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಕಳೆದವಾರದಿಂದ

ಬದ್ಧತೆ (Commitment) ಎಂಬುದು Conviction ಗಿಂತ ಹೆಚ್ಚು ಬಲಶಾಲಿಯಾದ ಪ್ರಬುದ್ಧವಾದ ಪದ. 'ಬದ್ಧತೆ' ಎಂಬುದು ಯಾವುದಾದರೊಂದು ತತ್ವಕ್ಕೆ, ವಾದ ಪ್ರಣಾಳಿಗೆ, ಪಕ್ಷಕ್ಕೆ ಎಂಬಿತ್ಯಾದಿ ಅಭಿಪ್ರಾಯಗಳಿವೆ. ಹೀಗೆ 'ಬದ್ಧ'ವಾದ ಮನೋಧರ್ಮ ಸೋದ್ದೇಶಿತವಾದ ಕೃತಿಯನ್ನು ರಚಿಸುತ್ತದೆ. ಅಥವಾ ಸೋದ್ದೇಶಿತವಾದ ಕೃತಿ–ಕಾರ್ಯ–ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಇದು ಕೇವಲ ಬೇಜವಾಬ್ದಾರಿಯ ವರ್ತನೆಯಂತೂ ಖಂಡಿತಾ ಅಲ್ಲ. ಬದಲಿಗೆ ಆಧುನಿಕ ಯುಗದ ಫ್ಯಾಸಿಸ್ಟ್ ಮನೋವೃತ್ತಿ. ಉದಾತ್ತ Conviction ವುಳ್ಳ ರನ್ನ, ಜನ್ನ, ಪಂಪ, ಕುಮಾರವ್ಯಾಸ ತುಲಸಿದಾಸ ಎಲ್ಲರೂ ಸೋದ್ದೇಶಿತ ಕವಿಗಳೇ. ಅವರರವರು ಅವರರ ಮತಧರ್ಮಗಳಿಗೆ ಬದ್ಧರಾಗಿದ್ದೂ ಶ್ರೇಷ್ಠ ಕೃತಿಗಳನ್ನು ರಚಿಸುವಲ್ಲಿ ಸಮರ್ಥರಾದವರು. ಆದರೆ ಆ ಕೃತಿಗಳನ್ನು ತಮ್ಮ ಯುಗ ಧರ್ಮಕ್ಕೆ ಸೀಮಿತರಾಗಿರುವುದನ್ನು ಪರಿಲಕ್ಷಿಸಿಯೇ ಅವುಗಳನ್ನು ಮಹಾನ್ ಪರಂಪರೆಯ ಬದ್ಧ–ಅಬದ್ಧ ಲೇಖಕರ ಕೃತಿಗಳ ಬಳುವಳಿಯಾಗಿ ಸ್ವೀಕರಿಸಬೇಕು.

ಆದರೆ 'ಅಬದ್ಧ' ಲೇಖಕರನ್ನು ಬಿಟ್ಟರೆ, ಬದ್ಧ ಲೇಖಕರಲ್ಲಿ ಒಳ್ಳೆಯ ಕೃತಿಗಳಂತೆ ಕೆಟ್ಟ ಕೃತಿಗಳನ್ನು ಕೊಟ್ಟವರಿದ್ದಾರೆ. 'ಬದ್ಧತೆ' ಖಂಡಿತವಾಗಿಯೂ ಸರ್ವಮಾನ್ಯವಾದ, ಜವಾಬ್ದಾರಿಯುತವಾದ ಒಂದು ಮಾನದಂಡ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. 'ಅಬದ್ಧತೆ'ಯ ಪರಿಕಲ್ಪನೆ ಬಂದದ್ದು 'ಕಲೆಗಾಗಿ ಕಲೆ' 'ಸ್ವಂತ ಸುಖಾಯ ಸಾಹಿತ್ಯ'–ಎಂಬ ಸ್ವಾರ್ಥ ಜೀವಿ ವಿಕೃತ ಪ್ರಜ್ಞೆಯ ಅಥವಾ ಸ್ಥಗಿತಪ್ರಜ್ಞೆಯ ಕಲಾಕಾರರಿಂದ ಆವಿರ್ಭವಿಸಿದ ಒಂದು ಐತಿಹಾಸಿಕ ಪ್ರಕ್ರಿಯೆ. ಯುರೋಪಿನಲ್ಲಿ ಈ ಸಾಹಿತ್ಯ ಪ್ರಕಾರವು ಸಾಕಷ್ಟು ಅವಾಂತರವನ್ನೇ ಎಬ್ಬಿಸಿತ್ತು. ಇಂಥ ಮಹಾತ್ಮರ ಬಗ್ಗೆ ಸ್ವಲ್ಪ ಗಮನಿಸುವ:–

ವ್ಯಕ್ತಿನಿಷ್ಠ ರಚನಾಕಾರರೆಲ್ಲಾ ಕಲೆಕಲೆಗಾಗಿ ಎಂದು ತಿಳಿಯುವವರು ಇದರ ಸುದೀರ್ಘ ಇತಿಹಾಸವನ್ನು ಪ್ರಸ್ತಾಪಿಸದೇ ಪ್ರಾತಿನಿಧಿಕವಾಗಿ ಕೇವಲ T.S ಎಲಿಯಟ್‌ನನ್ನು ನಾನು ಉದ್ಧರಿಸಲು ಪ್ರಯತ್ನಿಸುತ್ತೇನೆ. ಈತ ಅಸ್ತಿತ್ವವಾದಿ ಚಿಂತಕ ಹಾಗೂ ಕವಿ. ಅಸ್ತಿತ್ವವಾದವು ತತ್ವಶಾಸ್ತ್ರದಲ್ಲಿ ಒಂದು ಪದಭ್ರಷ್ಟ ಸಿದ್ಧಾಂತ.

ಈ T.S ಎಲಿಯಟ್‌ನ ಕವಿತೆಯ ಅಮೃತ ಬಿಂದುಗಳನ್ನು ಗಮನಿಸಿ: **ಕವಿತೆ: 'ಈಸ್ಟ್ ಕೋಕರ್'**

I said to my soul, be still
And wait without hope
For hope would be hope for the wrong things
Wait without love
So the darkness shall be the light
And the stillness-the dancing.

'The Hollow Men' ಎಂಬ ಕವಿತೆಯ **ಸಾಲು:**

Paralysed force, guesture
Without motion
This is the dead land
This is cactus land

ಅತ್ಯಪೂರ್ವ ನಪುಂಸಕ ಪ್ರೇಮ ಗೀತೆ:

Prufrock and Other Observation 1917

And indeed there will be time
To wonder, 'Do I dare? And 'do I dare'
Should I, after tea and cakes and ices
Have strength to force the moment
To its crisis?
And in short I was afraid
It is impossible to say just what I mean
I Could not
Speak, and my eyes failed
I was neither
Living nor dead and I know nothing.

ಈ ಬಗೆಯ ಕಾವ್ಯ, ಹಾಗೂ ಸಾಹಿತ್ಯ ಮಾನವ ವಿರೋಧಿ, ಜೀವ ವಿರೋಧಿ, 'Truth is subjectivity' (ಸತ್ಯವು ಆತ್ಮಗತ, ವ್ಯಕ್ತಿಗತ) ಎಂಬುದಾಗಿ ದಾರ್ಶನಿಕ ಮಾತುಗಳನ್ನು ಆಡುವ ನೀಶೆ ಫ್ಯಾಸಿಸಮ್‌ನ ಪ್ರಬಲ ಸಮರ್ಥಕ. ಹಿಟ್ಲರ್‌ನಂತವರಿಗೆ ಸೈದ್ಧಾಂತಿಕ ನೆಲೆಗಳನ್ನು ಈತನ ಕೃತಿಗಳು ನೀಡುತ್ತವೆ. ಟಿ. ಎಸ್. ಎಲಿಯಟ್ ಈತನಿಗಿಂತ ಭಿನ್ನವೆನ್ನಿಸಿದರೂ ಆತನ ವ್ಯಕ್ತಿವಾದಿ ಚಿಂತನಗಳು ಇಂತಹುದೇ ಪರಿಣಾಮಗಳಿಗೆ ಎಡೆಮಾಡಿ ಕೊಡುತ್ತವೆ. 'Existence preceeds essence' ಎಂದ ಸಾರ್ತ್ರ ಕೂಡಾ ಇದೇ ಜಾತಿಯವನು. ವಸ್ತುಸ್ಥಿತಿಯಲ್ಲಿ ಇವರಿಗೆಲ್ಲಾ ಶಂಕರಾಚಾರ್ಯರ ಹಾಗೆ ಜಗತ್ತು ಮಿಥ್ಯೆ, ಸುಳ್ಳು ಬರೇ ಆಭಾಸ–ಅರ್ಥಹೀನ. ಇವರ ಮನೋಕೋಶದ ಬ್ರಹ್ಮಾಂಡದ ಕಗ್ಗತ್ತಲು ಮಾತ್ರ ಇವರಿಗೆ ಸತ್ಯ. ಇಂಥ 'ಅಬದ್ಧ'–'ಅನುದ್ದೇಶಿತ'–ಕಲೆಗಾಗಿ ಕಲೆ ರಚಿಸುವ, ವ್ಯಕ್ತಿವಾದೀ ಹಳವಂಡಗಳ ದಂತಗೋಪುರಗಳನ್ನು ಸೋದ್ದೇಶಿತ ಕಲಾಕಾರರು ಧ್ವಂಸಗೊಳಿಸಿದ್ದಾರೆ. ಈ ನಿಟ್ಟಿನಲ್ಲಿ ಗೋರ್ಕಿ ಒರ್ವ ಮಹಾನ್ ವ್ಯಕ್ತಿ. 'ತಾಯಿ'ಯಂತಹ ಕೃತಿಯನ್ನು ಈ ಹಿನ್ನೆಲೆಯಲ್ಲಿ ವಿಮರ್ಶಕರು ಸಮೀಕ್ಷಿಸಬೇಕು.

ಇನ್ನು ನಾವು ಹೇಳುವ 'ಸೋದ್ದೇಶಿತತೆ' 'ಬದ್ಧತೆ' ಎಂಬುದು ಹಾಗಿದ್ದರೆ ಯಾವುದರ ಬಗೆಗೆ ಇರಬೇಕು? ಯಾವುದು ಸಮಾಜವನ್ನು ತಿಳಿದು ಅದನ್ನು ಪ್ರಜ್ಞಾಪೂರ್ವಕವಾಗಿ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆಯೋ, ಆ ಸಾಮಾಜಿಕ ವಾಸ್ತವದ ಅರಿವಿನ ಬಗೆಗೆ ನಮ್ಮ ಬದ್ಧತೆ ಇರಬೇಕು.

ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸಬಹುದು. ಸಾಹಿತಿ ಬದ್ಧನಾಗಿರಬೇಕಾದುದು ಯಾವುದಾದರೊಂದು ಎಡ ಪಂಥೀಯ, ಮಾರ್ಕ್ಸ್‌ವಾದಿ ಪಕ್ಷಕ್ಕೊ ಅಥವಾ ಸಿದ್ಧಾಂತಕ್ಕೋ? (ಇಲ್ಲಿ ಸಿದ್ಧಾಂತವೆಂದರೆ ಮಾರ್ಕ್ಸ್‌ವಾದಿ ಸಿದ್ಧಾಂತವೆಂಬುದಷ್ಟೇ ಅರ್ಥ)

ಈ ಪ್ರಶ್ನೆಗೂ ಒಂದು ಟಿಪ್ಪಣಿ ಅಗತ್ಯ: ಮಾರ್ಕ್ಸ್‌ವಾದವು ನೂರಾರು ವಾದಗಳಂತೆ ಒಂದು ವಾದ ಅಲ್ಲ. ಏಕೆಂದರೆ, ಅದ್ವೈತ (Non Dualism), ದ್ವೈತ (Dualism), ಅನಿತ್ಯ–ಶೂನ್ಯವಾದ (Nihilism), ಬಹುಲವಾದ (Pluralism), ಏಕತ್ವವಾದ (Monism), ಹೀಗೆ ನೂರಾರು ವಾದಗಳಂತೆ ಮಾರ್ಕ್ಸ್‌ವಾದವು ಒಂದು Doctrine ಅಲ್ಲ. ಅದೊಂದು ಕಣ್ಣೋಟ; World View -ಎಲ್ಲಕ್ಕಿಂತ ಹೆಚ್ಚಾಗಿ ಅದೊಂದು Methodology. ಅದು ನಿಂತ ನೀರಲ್ಲ. ಬದಲಾಗುತ್ತಿರುವ ದೇಶ ಕಾಲವನ್ನು ಅರ್ಥೈಸುವಲ್ಲಿ ಸಹಾಯಕವಾಗುವ ಒಂದು ದೃಷ್ಟಿಕೋನ. ಆದ್ದರಿಂದ, ನಮ್ಮ ಸಾಕಷ್ಟು ಜನ ಸಾಹಿತಿಗಳು ಬಡಬಡಿಸುವಂತೆ ಮಾರ್ಕ್ಸ್‌ವಾದವೆಂದರೇ 'ಹೀಗೆ' 'ಹೀಗೆ'– ಎಂದು ಒಂದು ಚೌಕಟ್ಟಿನಲ್ಲಿ ಬಂಧಿಸಿ ಹೇಳುವಂತೆಯೇ ಇಲ್ಲ. ವಿಕಾಸ ಪ್ರಕ್ರಿಯೆಯಂತೆಯೇ ಅದು ವಿಕಾಸಮಾನ. ಮಾರ್ಕ್ಸ್, ಎಂಗೆಲ್ಸ್‌ರವರಿಂದ ತೊಡಗಿ ಲೆನಿನ್, ಸ್ಟಾಲಿನ್, ಮಾವೋ, ಹೋಚಿಮಿನ್, ಬಸವ ಪುನ್ನಯ್ಯ, B.T.R, ಇ. ಎಂ. ಎಸ್. ನಂಬೂದಿರಿಪ್ಪಾಡ್..... ಹೀಗೆ ಶ್ರೇಷ್ಠ ಚಿಂತಕರಿಂದ ಅದು ಸೈದ್ಧಾಂತಿಕವಾಗಿ ಬೆಳೆಯುತ್ತಾ ಹಾಗೂ ವಿಕಾಸ ಹೊಂದುತ್ತಾ ಬಂದ, ಬರುತ್ತಿರುವ ಒಂದು ವಿಶಿಷ್ಟ ಕಣ್ಣೋಟ. ಇದನ್ನು ಅರ್ಥ ಮಾಡಿಕೊಳ್ಳದವರಿಗೆ ಸಮಾಜವೂ ಅರ್ಥವಾಗಲಾರದು. ಸಾಮಾಜಿಕ ಯಥಾರ್ಥವೂ ತಿಳಿಯಲಾರದು. ಅಂತೆಯೇ ಬದ್ಧತೆಯ ಪ್ರಶ್ನೆಯಂತೂ ಖಂಡಿತವಾಗಿಯೂ ಅರ್ಥವಾಗಲಾರದು.

ಈ ನಿಟ್ಟಿನಲ್ಲಿ ನೋಡಿದರೆ ಮಾರ್ಕ್ಸ್‌ವಾದಿ ಪಕ್ಷಕ್ಕೆ ಬದ್ಧರಾಗಿರುವುದು ಎಂದರೇನು? ಈ ಪ್ರಶ್ನೆ ಏಕೆಂದರೆ ಮಾರ್ಕ್ಸ್‌ವಾದಿ ಪಕ್ಷಗಳು ಹಲವಾರು ಇವೆ. ಆದರೆ, ಯಾವ ಪಕ್ಷ ಮಾರ್ಕ್ಸ್‌ವಾದದ ನಿಜವಾದ ಕಣ್ಣೋಟವನ್ನು ಗ್ರಹಿಸಿದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಅದನ್ನು ನಿರ್ಣಯಿಸುವವರು ಯಾರು? ಎಂದರೆ ಅದಕ್ಕೆ ಉತ್ತರ ಕಾಲ ಮತ್ತು ದೇಶ. ಈ ನಿಟ್ಟಿನಲ್ಲಿ ಪಕ್ಷಕ್ಕೆ ಬದ್ಧರಾದ ಸಾಹಿತಿಗಳು ಉತ್ತಮ ಕೃತಿಗಳನ್ನು ರಚಿಸಲೂ ಬಹುದು. ಅಂತೆಯೇ ಕೆಟ್ಟ ಕೃತಿಗಳನ್ನೂ ನೀಡಬಹುದು.

(ಮುಂದುವರಿಯುವುದು)

ಸಂಗಾತಿ 'ಆಯಿ' ಅವರಿಗೆ ಅಭಿನಂದನೆ

ಭಾರತ ಜೀವ ವಿಮಾ ನಿಗಮ (ಎಲ್‌ಐಸಿ)ದಲ್ಲಿ 37 ವರ್ಷ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿ ಹೊಂದಿದ ಧಾರವಾಡ ವಿಮಾ ನೌಕರರ ಸಂಘದ ಅಧ್ಯಕ್ಷರೂ ಆಗಿದ್ದ ಸಂಗಾತಿ ಆರ್.ಎಚ್. ಆಯಿ ಅವರಿಗೆ 'ಜನಶಕ್ತಿ' ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಅಖಿಲ ಭಾರತ ವಿಮಾ ನೌಕರರ ಸಂಘದ ಸಮರಶೀಲ ಪರಂಪರೆಯನ್ನು ಮೈಗೂಡಿಸಿಕೊಂಡು ಬೆಳೆದು ಬಂದ ಸಂಗಾತಿ ಆಯಿ ಅವರು ವಿಮಾ ನೌಕರರ ಅಚ್ಚುಮೆಚ್ಚಿನ ನಾಯಕರಾಗಿದ್ದರು, ಮಾತ್ರವಲ್ಲ ಧಾರವಾಡ ಪ್ರದೇಶದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಸಕ್ರಿಯ ಪಾತ್ರವನ್ನು ನಿರ್ವಹಿಸುತ್ತಾ ಬಂದವರಾಗಿರುತ್ತಾರೆ.

ಇದೇ ರೀತಿಯಲ್ಲಿ ಸಂಗಾತಿ ಆಯಿ ಅವರ ನಿವೃತ್ತಿ ಜೀವನವೂ ಫಲಪ್ರದವಾಗಲಿ ಎಂದು ಜನಶಕ್ತಿ ಹಾರೈಸುತ್ತದೆ.

'ಎಲ್‌ಐಸಿ ಯಿಂದ ನಾನು ಸೇವಾ ನಿವೃತ್ತಿಯಾಗುತ್ತಿರುವ ಸಂದರ್ಭದಲ್ಲಿ, ನನ್ನಲ್ಲಿ ಸಾಮಾಜಿಕ ಕಾಳಜಿಯನ್ನು ತುಂಬಲು ಹಾಗೂ ಹೋರಾಟದ ಹಾದಿಯಲ್ಲಿ ಮುನ್ನಡೆಸಲು ನಿರಂತರ ಸ್ಫೂರ್ತಿ ನೀಡುತ್ತಿರುವ 'ಜನಶಕ್ತಿ' ಗೆ ರೂಪಾಯಿ ಒಂದು ಸಾವಿರ (ರೂ.1000) ದೇಣಿಗೆ ನೀಡಿರುವೆ. ಎಂದು ಪತ್ರವೊಂದನ್ನು ಬರೆದು ದೇಣಿಗೆ ನೀಡಿರುವ ಸಂಗಾತಿ ಆಯಿ ಅವರಿಗೆ ನಮ್ಮ ಕೃತಜ್ಞತೆಗಳು.

○ ಸಂಪಾದಕರು

ಸಂಪಾದಕೀಯ

ಕರಾವಳಿ ಅಲೆ ಮೇಲಿನ ದಾಳಿ ಅಸಹನೆಯ ಪರಾಕಾಷ್ಠೆ ದ್ವೇಷ ರಾಜಕಾರಣದ ಭುಗಿಲು !

ಕರಾವಳಿ ಅಲೆ ಪತ್ರಿಕಾ ಸಮೂಹದ ಮೇಲೆ ನಡೆದಿರುವ ಅವ್ಯಾಹತ ಧಾಳಿ ದಿಗ್ಭ್ರಮೆ ಹುಟ್ಟಿಸಿರುವ ಉಗ್ರ ಖಂಡನೀಯ ಕೃತ್ಯಗಳು. ನ್ಯಾಯ ನಿಷ್ಠುರತೆ, ಸಾಮಾಜಿಕ ಬದ್ದತೆ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ಎತ್ತಿಹಿಡಿದು, ಪ್ರತಿಪಾದಿಸುತ್ತಿರುವ ಕರಾವಳಿ ಅಲೆ ಪತ್ರಿಕೆಯನ್ನು ದಮನಿಸಲು ಸಂಘ ಪರಿವಾರ ಇನ್ನಿಲ್ಲದ ತಂತ್ರಗಳನ್ನು ರೂಪಿಸಿರುವುದು ಸ್ಪಷ್ಟ ಗೋಚರ. ಇಂತಹ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ಫ್ಯಾಸಿಸ್ಟ್ ಶಕ್ತಿಗಳು ಜಾರಿಗೊಳಿಸುತ್ತಿವೆ. ಸಂಘ ಪರಿವಾರವು ಯಾವುದೇ ಮೂಲೆಯಲ್ಲಿ ರೂಪಿಸಿದ ಇಂತಹ ಸಂಚುಗಳನ್ನು ಜಾರಿಗೊಳಿಸುವಲ್ಲಿ ನಾಗರೀಕರ ಹಕ್ಕು, ಕಾನೂನು ಆಡಳಿತ ಸಂರಕ್ಷಿಸಬೇಕಾದ ಸರ್ಕಾರದ ಆಡಳಿತ ಯಂತ್ರವೂ ಇದಕ್ಕೆ ಕೈಜೋಡಿಸುತ್ತಿದೆ. ನಾಗರೀಕರ ಹಕ್ಕು, ಕಾನೂನುಬದ್ಧ ಆಡಳಿತವನ್ನು ಎತ್ತಿಹಿಡಿದು, ಸಮರ್ಥಿಸಿ ರಕ್ಷಿಸಬೇಕಾದ ಹೊಣೆಗಾರಿಕೆಯುಳ್ಳ ಆಡಳಿತ ಯಂತ್ರವೇ ಸಂಘ ಪರಿವಾರದ ಅಂಗದಂತೆ ಕಾರ್ಯ ನಿರ್ವಹಿಸುವುದು ಅಪಾಯದ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಿದೆ.

ಕರಾವಳಿ ಅಲೆ ಪತ್ರಿಕೆ ವಹಿಸುತ್ತಿರುವ ಪಾತ್ರದಿಂದಾಗಿ ಸಂಘ ಪರಿವಾರ ಕೆರಳಿದೆ ಎಂಬುದರಲ್ಲಿ ಅನುಮಾನವಿಲ್ಲ. ಗುಜರಾತ್‌ನ ಮಾದರಿಯ ಪೋಗ್ರಾಂ ಜಾರಿಗೆ ಕರಾವಳಿಯನ್ನು ಪರಿವಾರ ಆರಿಸಿಕೊಂಡಿದೆ. ಇದನ್ನು ಎದುರಿಸುವಲ್ಲಿ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆಯಲ್ಲಿ ಕರಾವಳಿ ಅಲೆ ಪತ್ರಿಕೆಯೂ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾ ಬಂದಿದೆ. ಜನರ ಅಜೆಂಡಾಗಳನ್ನೇ ಪರಿವಾರ ಮೂಲೆಗೊತ್ತಿರುವಾಗ ಅದನ್ನು ಪತ್ರಿಕೆ ಮಿತಿಯಲ್ಲಾದರೂ ಹೊರತೆಗೆದಿದೆ. ಧರ್ಮದ ಹೆಸರಿನಲ್ಲಿ ಕೋಮುವಾದ, ಕಂದಾಚಾರ, ಮೂಢನಂಬಿಕೆಗಳನ್ನು ಗಟ್ಟಿಗೊಳಿಸುವುದರ ವಿರುದ್ಧವೂ ವೈಚಾರಿಕವಾಗಿ ಚರ್ಚೆ ಬೆಳೆಸಿದೆ. ಇದು ಕೇಂದ್ರದಲ್ಲಿ ಅಧಿಕಾರ ಹಿಡಿಯುವ ರಾಜ್ಯದಲ್ಲಿ ಹಿಡಿದಿದ್ದನ್ನು ಉಳಿಸಿಕೊಳ್ಳುವ ಆತುರದಲ್ಲಿರುವ ಲೋಕಸಭಾ ಚುನಾವಣೆಯಲ್ಲಿ ಸೋಲಿನ ಭೀತಿಯಲ್ಲಿರುವ ಬಿಜೆಪಿ ಸಂಘ ಪರಿವಾರಗಳು ಕರಾವಳಿ ಅಲೆ ಸಮೂಹದ ಪತ್ರಿಕೆಯ ಧ್ವನಿಯನ್ನೇ ಇಲ್ಲವಾಗಿಸಲು ಹೊರಟಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಧಾಳಿ ಆರಂಭಿಸಿವೆ.

ಇಂತಹ ದಾಳಿಗಳು ಕರಾವಳಿ ಅಲೆಯ ಮೇಲೆ ಅವ್ಯಾಹತವಾಗಿ ನಡೆಯುತ್ತಲೇ ಬಂದಿವೆ. 2006 ರಲ್ಲಿ ಇದೇ ಪರಿವಾರ ಹೂಡಿದ್ದ ಸುಳ್ಳು ಮೊಕದ್ದಮೆಯೊಂದನ್ನೇ ಹಲವು ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಹೂಡಿ ಬಿವಿಸಿ ದಂಪತಿಗಳ ಸತತ ಬಂಧನ, ಕಿರುಕುಳ ಹಿಂಸೆ ನಡೆದಿದ್ದವು. ಈಗ ಪತ್ರಿಕೆಯ ಪ್ರಸಾರವಾಗದಂತೆ, ಜನರಿಗೆ ವಿತರಿಸದಂತೆ ನೇರವಾಗಿ ಬಜರಂಗದಳದ ಕಾರ್ಯಕರ್ತರು ಮಂಗಳೂರು ಇತರೆಡೆಯಲ್ಲಿ ದಾಳಿ ನಡೆಸಿದರು. ಪತ್ರಿಕೆ ಸುಟ್ಟು, ಮಾರಾಟಗಾರರಿಗೆ ಬೆದರಿಕೆ ಒಡ್ಡಿದರು. ಇಷ್ಟೆಲ್ಲಾ ಆದರೂ ಆಡಳಿತ ಯಂತ್ರ ಬಜರಂಗದಳದ ಜೊತೆಗೆ ಕೈಜೋಡಿಸಿತು. ಇಂತಹ ಧಾಳಿಗಳು ಈಗಲೂ ಮುಂದುವರಿದಿವೆ. ಇಂತಹ ಧಾಳಿ ವಿರೋಧಿಸಿದವರ ಮೇಲೆ ಆಕ್ರಮಣಗಳು ನಡೆದಿದ್ದು, ಮಾನವ ಹಕ್ಕುಗಳ ಹೋರಾಟಗಾರ ಪಿ.ಬಿ.ಡೇಸಾ ರ ಪ್ರಕರಣವೇ ಇತ್ತೀಚಿನ ಉದಾಹರಣೆ.

ಹಾಗಿದ್ದರೆ ಕಂದಾಚಾರಗಳನ್ನು ಪ್ರಶ್ನಿಸುವುದು, ಸಾರ್ವಜನಿಕ ಚರ್ಚೆಗಳನ್ನು ಹುಟ್ಟುಹಾಕುವುದು ಅಪರಾಧವೇ? ಯಾರಿಗಾದರೂ ಭಿನ್ನಾಭಿಪ್ರಾಯಗಳಿದ್ದಲ್ಲಿ ಅದನ್ನು ಚರ್ಚೆ ಸಂವಾದಗಳ ಮೂಲಕ ವ್ಯಕ್ತಪಡಿಸಬಹುದು. ಅದು ಬಿಟ್ಟು ಇಂತಹ ಧಾಳಿಗಳು ಫ್ಯಾಸಿಸ್ಟ್ ಪ್ರವೃತ್ತಿಯನ್ನೇ ತೋರಿಸುತ್ತದೆ. ಕರಾವಳಿ ಅಲೆಯ ಮುಖ್ಯಸ್ಥರಾದ ಬಿ.ವಿ.ಸೀತಾರಾಂ ರವರ ಬಂಧನದ ರೀತಿ, ಕೈ ಕೊಳ ಹಾಕಬಾರದೆಂಬ ನ್ಯಾಯಾಲಯದ ನಿರ್ದೇಶನವಿದ್ದರೂ ಕೈ ಕೊಳ, ಸರಪಳಿ ಹಾಕಿರುವ ವಿಧಾನಗಳು, ಅನಾರೋಗ್ಯಪೀಡಿತರಾದರೂ ಚಿಕಿತ್ಸೆಯ ಸೂಕ್ತ ಅವಕಾಶ ಕಲ್ಪಿಸದಿರುವುದು, ಜೈಲಿಯಲ್ಲಿಯೂ ಪ್ರಾಣ ಭೀತಿ ಒಡ್ಡಿರುವುದು, ಇವು ಅಮಾನವೀಯ ಮಾತ್ರವಲ್ಲ. ಅನಾಗರೀಕ, ದುರುದ್ದೇಶದ ವರ್ತನೆಗಳು. ಅದೇ ರೀತಿ ಈಗಲೂ ಪತ್ರಿಕೆಯ ಸಂಪಾದಕರ ಬಂಧನ, ವರದಿಗಾರರು ಪತ್ರಿಕೆ ಬಿಡುವಂತೆ ಬೆದರಿಕೆಯ ವಿಪರೀತ ಒತ್ತಡಗಳು ನಡೆದೇ ಇವೆ. ಇದು ಅಸಹನೆಯ ಪರಾಕಾಷ್ಟೆ ದ್ವೇಷ ರಾಜಕಾರಣದ ಭುಗಿಲು.

ಇಂತಹುದೇ ಆಟಗಳನ್ನು ಸಂಘ ಪರಿವಾರ - ಬಿಜೆಪಿ ರಾಜ್ಯದ ಹಲವೆಡೆ ನಡೆಸಿದೆ. ಕೊಡಗಿನ ಜಿಲ್ಲಾ ಪಂಚಾಯತ್ ಸದಸ್ಯ, ಜಾತ್ಯಾತೀತತೆಯ ಪ್ರಬಲ ಪ್ರತಿಪಾದಕ ವಿ.ಪಿ.ಶಶಿಧರ್‌ರ ಮೇಲೆ ನಡೆದಿರುವ ದಾಳಿಗಳು, ದೌರ್ಜನ್ಯದ ಸುಳ್ಳು ಮೊಕದ್ದಮೆ ಹೂಡಿ ಜೈಲಿಗಟ್ಟಿರುವುದು ರಾಜಕೀಯ ಭಿನ್ನಾಭಿಪ್ರಾಯ ಸಹಿಸದ, ರಾಜಕೀಯವಾಗಿ

ಪುಟ 5 ಕ್ಕೆ

ನಿಮ್ಮೊಂದಿಗಿದೆ ಜನಶಕ್ತಿ....

'ಎಸ್ಮಾ' ಬಡಿಗೆ ಹಿಡಿದಿರುವ ಸರ್ಕಾರಗಳು



ಈ ವಾರಾಂತ್ಯದಲ್ಲಿ ಎಲ್ಲೆಡೆಗಳಲ್ಲಿಯೂ ಪೆಟ್ರೋಲ್, ಡೀಸೆಲ್‌ಗಾಗಿ ಬಂಕ್‌ಗಳ ಮುಂದೆ ಸಾಗದ ಸಾಲುಗಳು. ಒಂದೆಡೆ ತೈಲ ಉತ್ಪನ್ನ ಕಂಪನಿಗಳ ಅಧಿಕಾರಿಗಳ ಮುಷ್ಕರ, ಇನ್ನೊಂದೆಡೆ ಸರಕು ಸಾಗಾಣಿಕೆಯ ಲಾರಿಗಳ ಮಾಲೀಕರ ಮುಷ್ಕರ. ಇದರ ಪರಿಣಾಮ ತೈಲ, ಗ್ಯಾಸ್ ಅಭಾವದ ಚಿಂತೆ. ತರಕಾರಿ ಇತ್ಯಾದಿಗಳ ಬೆಲೆಯೇರಿಕೆ.

ತಾರಕಕ್ಕೇರಿದ್ದ ತೈಲ ಕ್ಷೇತ್ರದ ಮುಷ್ಕರವೀಗ ಭಾಗಶಃ ಹಿಂತೆಗೆಯಲಾಗಿದೆ. ಇಲ್ಲಿ ಕೇಂದ್ರ ಸರ್ಕಾರದ ವರ್ತನೆ ಅತ್ಯಂತ ಖಂಡನೀಯ. ಸರ್ಕಾರ ಬೇಡಿಕೆಗಳನ್ನು ಈಡೇರಿಸದೇ, ಈಡೇರಿಸಲು ಮಾತುಕತೆಯ ಕನಿಷ್ಟ ಕ್ರಮಗಳನ್ನು, ಸೂಕ್ತವಾಗಿ ಅನುಸರಿಸದೇ ಮುಷ್ಕರವನ್ನು ಮುರಿಯುವ ಬೆದರಿಕೆಗಳನ್ನು ಒಡ್ಡಿತು. ಅಗತ್ಯ ಸೇವಾ ನಿಯಂತ್ರಣ ಕಾಯ್ದೆ (ಎಸ್ಮಾ) ಬಳಸುವುದಾಗಿ ಹೇಳಿತು. ಸಾರ್ವಜನಿಕರನ್ನು ಎತ್ತಿಕಟ್ಟುವ ಯತ್ನಗಳೂ ನಡೆದವು. ಇಂತಹ ಬೆದರಿಕೆ ಕುತಂತ್ರಗಳಿಂದಾಗಿ ಒತ್ತಡಕ್ಕೆ ಒಳಗಾದ ನೌಕರರು ಮುಷ್ಕರವನ್ನು ಏನೂ ಪಡೆಯದೇ ಮುಗಿಸಬೇಕಾಯಿತು.

ಹಾಗೆಯೇ ಲಾರಿ ಮುಷ್ಕರದ ವಿಷಯದಲ್ಲಿಯೂ ಕೇಂದ್ರ-ರಾಜ್ಯ ಸರ್ಕಾರಗಳ ಧೋರಣೆ ಹಾಗೆಯೇ ಇದೆ. ಬಹಳ ಹಿಂದಿನಿಂದಲೇ ಬೇಡಿಕೆ ಸಲ್ಲಿಸದ್ದರೂ ಏನೊಂದು ಪ್ರಗತಿಯಾಗಿಲ್ಲ. ಕೇಂದ್ರದಂತೆ ರಾಜ್ಯ ಸರ್ಕಾರವೂ ಎಸ್ಮಾ ಬಳಸುವ ಮಾತನ್ನಾಡುತ್ತಿದೆ.

ಮಾತ್ರವಲ್ಲ ಇಂತಹ ಮುಷ್ಕರ ಬಗ್ಗುಬಡಿಯಲು ರಾಜ್ಯ ಸರ್ಕಾರ 'ಎಸ್ಮಾ' ಕಾಯ್ದೆ ಪ್ರಯೋಗಿಸಲು ಸಂಪುಟ ಸಭೆಯು ನಿರ್ಧರಿಸಿದೆ. ಬೆಳಗಾವಿ ಅಧಿವೇಶನದಲ್ಲಿಯೂ ಇದಕ್ಕೆ ಅಂಗೀಕಾರ ಪಡೆಯಲಾಗುವುದಂತೆ.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯ ಕರ್ನಾಟಕ ಸರ್ಕಾರಿ ಸಾರಿಗೆ ಸಂಸ್ಥೆಗಳ ಎಲ್ಲಾ ವಿಭಾಗಳ ನೌಕರರು ಇದೇ ಜನವರಿ 19 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನಿರ್ಧರಿಸಿದ್ದು ಈ ಸಾರಿಗೆ ಇಲಾಖೆಯಲ್ಲಿನ ಆಡಳಿತ ವರ್ಗದ ದೌರ್ಜನ್ಯ. ಶೋಷಣೆಗೆ ಬೇಸತ್ತಿರುವ ನೌಕರರು ಬೇಡಿಕೆಗಳ ಈಡೇರಿಕೆಗಳಿಗಾಗಿ ಮುಷ್ಕರಕ್ಕಿಳಿಯಲು ಸನ್ನದ್ಧರಾಗಿದ್ದಾರೆ. ಈ ಬೇಡಿಕೆಗಳನ್ನು ಈಡೇರಿಸದೇ ಸರ್ಕಾರ ದಮನದ ಮಾತನ್ನಾಡುತ್ತಿದೆ. ಈ ನೌಕರರ ಮೇಲೆ 'ಎಸ್ಮಾ' ಕಾಯ್ದೆ ಬಳಸಿ, ಜೈಲಿಗಟ್ಟುವ, ಕೆಲಸದಿಂದ ಕಿತ್ತುಹಾಕುವ ಬೆದರಿಕೆ ತಂತ್ರ ಅನುಸರಿಸುತ್ತಿದೆ. ಓಟು ಪಡೆಯುವಾಗ ಇದ್ದ ವಿನಯ ಈಗ ಬಿಜೆಪಿ ಶಾಸಕರಲ್ಲಿ, ಸಚಿವರಲ್ಲಿ ಮಾಯವಾಗಿದೆ. ದುಡಿಯುವವರ ಹೋರಾಟಗಳು ಯಡ್ಡಿ ಸರ್ಕಾರದ ನಿಜ ಮುಖವನ್ನು ಮತ್ತೊಮ್ಮೆ ತೋರಿಸಲಿದೆ.

ಕಾಂಗ್ರೆಸ್ ಆತ್ಮದೊಳಗೆ ಇಣುಕುತ್ತಿರುವುದು

ಶೂನ್ಯ ಸಂಪಾದನೆಯ ಬಳಿಕ ಕಾಂಗ್ರೆಸ್‌ನಲ್ಲೀಗ ಆತ್ಮಾವಲೋಕನ ಆರಂಭಗೊಂಡಿದೆ. ಬೆಂಗಳೂರಿನಿಂದ ದೆಹಲಿಯವರೆಗೂ ಮತ್ತೆ ಬೆಂಗಳೂರಿಗೂ ನಾಯಕರ ನಿಯೋಗಗಳು ಓಡಾಡಿಬಂದಿವೆ. ನಾಯಕರ ಸಮಾಲೋಚನೆ, ಸಭೆಗಳು ನಡೆದಿದ್ದರೂ ಇನ್ನೂ ಆತ್ಮಾವಲೋಕನ ಪೂರ್ಣಗೊಂಡಿಲ್ಲ ಎಂಬುದು ಸೋಜಿಗದ ಸಂಗತಿಯೇ.

ಅಂದಹಾಗೆ ಕಾಂಗ್ರೆಸ್ ಈ ಉಪಚುನಾವಣೆಯಲ್ಲಿ 'ಸೋತು ಹೋಗಿರುವ ಬಗ್ಗೆ ನಾಯಕರಲ್ಲಿ ಒಗ್ಗಟ್ಟು ಇಲ್ಲದಿರುವುದು ಮುಖ್ಯ ಕಾರಣವೆಂದು ಕೇಂದ್ರ ನಾಯಕರ ಗಮನಕ್ಕೆ ತರಲಾಗಿದೆಯಂತೆ!. ಇದು ಒಂದು ಹಂತದಲ್ಲಿ ನಿಜ. ಆದರೆ ಪ್ರತಿ ಚುನಾವಣೆಯಲ್ಲಿಯೂ ಸಹ ಇದೇ ಅಂಶ ಶೋಧನೆಯಲ್ಲಿ ಪತ್ತೆಯಾಗುವುದು ವಿಶೇಷವೇನಲ್ಲ. ಕಾಂಗ್ರೆಸ್ ಮುಖಂಡತ್ವಕ್ಕೆ ಇದರಾಚೆ ನೋಡುವ ಇಚ್ಛೆ ಇದೆಯೋ ಇಲ್ಲವೋ ಅಥವಾ ಅದು ಕಾಣುತ್ತಿಲ್ಲವೋ ಸುಲಭವಾಗಿ ಹೇಳಲಾಗದು. ಸತ್ಯಸಂಧತೆಗೆ ಮನಸ್ಸು, ಧೈರ್ಯ ಬೇಕು ಅಲ್ಲವೇ?

ಬಿಜೆಪಿ ಅಧಿಕಾರಕ್ಕೆ ಬಂದ ನಂತರವಾದರೂ ಬದಲಾದ ಸನ್ನಿವೇಶದ ಗಂಭೀರತೆ ಅರಿತು ಬಿಜೆಪಿ - ಸಂಘ ಪರಿವಾರದ ಕೋಮುವಾದೀ ದಾಳಿಗಳ ವಿರುದ್ಧ ರಾಜಕೀಯವಾಗಿ ಮಧ್ಯಪ್ರವೇಶಿಸಲಿಲ್ಲ. ರೈತರ ಮೇಲಿನ ಗೋಲಿಬಾರ್, ಕೃಷಿಕರ ಸಮುದಾಯದ ಸಂಕಷ್ಟ, ಚರ್ಚ್ ಮೇಲೆ, ಕ್ರೈಸ್ತರು-ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಿರಂತರ ದಾಳಿಗಳು ನಡೆದಾಗಲೂ ಕಾಂಗ್ರೆಸ್ ಗಂಭೀರವಾಗಿ ನೆರವಿಗೆ ಬರಲಿಲ್ಲ. 'ಆಪರೇಷನ್ ಕಮಲ'ದಂತಹ ಅನೈತಿಕ ಅಕ್ರಮ ರಾಜಕಾರಣ, ರಾಜ್ಯದ ಸಂಪತ್ತಿನ ಲೂಟಿ, ಸುಳ್ಳು ಭರವಸೆಗಳು, ಮೋಸದ ಯೋಜನೆಗಳು ಯಾವುದಕ್ಕೂ ಕ್ರಿಯಾಶೀಲತೆ ಕಾಣಲಿಲ್ಲ. ಹೀಗಾದರೆ ಜನ ಹೇಗೆ ಕಾಂಗ್ರೆಸ್‌ನ್ನು ನಂಬುವುದು, ನಿಷ್ಕ್ರಿಯತೆಯನ್ನೇ ಇವಾವೂ ಇವರ ಆತ್ಮಾವಲೋಕನದಲ್ಲಿ ಇಲ್ಲ.

ಈಗ ಕಾಂಗ್ರೆಸ್‌ನಲ್ಲಿಯೇ ಎದ್ದಿರುವ ವಿವಾದದ ಶಮನಕ್ಕೆ ನಾಯಕರು ಆದ್ಯತೆ ನೀಡಿದ್ದಾರೆ. ಚುನಾವಣಾ ಪ್ರಚಾರಕ್ಕೆ ಅಥವಾ ಆತ್ಮಾವಲೋಕನಕ್ಕೆ ಬರದೇ ಉಳಿದ ಸಿದ್ದರಾಮಯ್ಯನವರನ್ನು ಸಂತೈಸಲು ನಿರ್ಧರಿಸಿದ್ದಾರೆ. ಎಲ್ಲವನ್ನು ಸಹಿಸಿಕೊಂಡು ಹೋಗಬೇಕಲ್ಲಾ!. ಇಲ್ಲವಾದರೆ ಲೋಕಸಭೆ ಚುನಾವಣೆ ನಂತರ ಇಂತಹುದೇ ಆತ್ಮಾವಲೋಕನ ಗ್ಯಾರಂಟಿ ಅಂತಾ ಅನ್ನಿಸಿದೆಯಾ?

ಸಿಹಿ ಲಾಡಿನ ಒಳಗೆ ದ್ವೇಷದ ಗುಳಿಗೆ

ಜನತೆಯ ಸೇವೆಯೇ ಜನಾರ್ಧನ ಸೇವೆ ಎಂದೂ ದೇವರ ಕೆಲಸವೆಂದರೆ ಜನರ, ಸರ್ಕಾರದ ಕೆಲಸವೆಂದೂ ಹೇಳಿಯೂ, ಕೇಳಿಯೂ ಆಗಿತ್ತು. ಆದರೆ ಈಗ ಬಿಜೆಪಿ ಸರ್ಕಾರ ಅಂತಹ ವ್ಯಾಖ್ಯಾನಗಳನ್ನು ತನ್ನದೇ ರೀತಿಯಲ್ಲಿ ಹಿಂದುತ್ವದ ಅಜೆಂಡಾ ಜಾರಿಯೇ ಸರ್ಕಾರದ ಕೆಲಸವೆಂದು ಹೊಸ ವ್ಯಾಖ್ಯಾನ ನೀಡುತ್ತಿದ್ದಾರೆ.

ವಿಶೇಷವಾಗಿ ಮುಜರಾಯಿ, ಇಲಾಖೆ, ಇದರ ಅಡಿಯಲ್ಲಿನ ಅಪಾರ ಸಂಪತ್ತು ತರುವ ದೇವಸ್ಥಾನಗಳನ್ನು ಸಂಘ ಪರಿವಾರದ ಕಟ್ಟಾಳು ಮಠಾಧೀಶರಿಗೆ ನೀಡಲಾಗುತ್ತಿರುವುದು. ಇನ್ನೂ ಹಲವು ದೇವಸ್ಥಾನ ನೀಡಲಿರುವುದು ನೋಡಿದ್ದೇವೆ. ಈಗ ಪ್ರಸಾದ ಹಾಗೂ ಉತ್ಪಾದನೆ ಮಾರಾಟದ ಕಂಟ್ರಾಕ್ಟ್ ಸಹ ಈ ಇಲಾಖೆಯೇ ವಹಿಸಿಕೊಳ್ಳಲು ಮಂತ್ರಿ ಕೃಷ್ಣಯ್ಯ ಶೆಟ್ಟಿ ಮುಂದಾಗಿದ್ದಾರೆ. ಏಕಾದಶಿಯಂತಹ ಯಾರೋ ಕೆಲವರು ಮಾತ್ರ ಆಚರಿಸುತ್ತಿದ್ದ ಹಬ್ಬಗಳು ಆಚರಣೆಗಳನ್ನು ಸಂಘ ಪರಿವಾರ ಸಾರ್ವತ್ರಿಕಗೊಳಿಸುತ್ತಿದ್ದರೆ ಕೃಷ್ಣಯ್ಯ ಶೆಟ್ಟಿಯಂತಹವರು ಅವುಗಳನ್ನು ಸರ್ಕಾರಿ ಕಾರ್ಯಕ್ರಮಗಳಾಗಿ ಅಂಗೀಕರಿಸುತ್ತಿದ್ದಾರೆ. ವೈಕುಂಠ ಏಕಾದಶಿಯ ಆಚರಣೆ ದಿನ ಲಡ್ಡು ಪೂರೈಕೆಯನ್ನು ಮುಜರಾಯಿ ಇಲಾಖೆ ವಹಿಸಿಕೊಂಡಿತು. ಆಗ ಸಹಜ ಪ್ರಶ್ನೆಯೆಂದರೆ ಮುಸ್ಲಿಂ, ಕ್ರೈಸ್ತ ಹಬ್ಬಗಳಿಗೂ ಬಿರಿಯಾನಿ ಇತ್ಯಾದಿಗಳನ್ನು ಸರ್ಕಾರ ಪೂರೈಸುತ್ತಿದೆಯೇ ಎಂಬುದು. ಇದನ್ನು ಕೇಳಿದೊಡನೆಯೇ ಸಚಿವರು ಕೆಂಡಮಂಡಲವಾಗುತ್ತಿದ್ದಾರೆ. 'ಜಾತ್ಯಾತೀತ' ವಾದಿಗಳೆಂದು ಬೈಯುತ್ತಾರೆ. ಪ್ರತಿಯೊಂದರಲ್ಲೂ ಧಾರ್ಮಿಕ ವಿಭಜನೆ ತರಲು, ಧರ್ಮ ನಿರಪೇಕ್ಷತೆಯಿಂದ ಸರ್ಕಾರವನ್ನು ದೂರ ತಳ್ಳಲು ಸಂಘ ಪರಿವಾರಿಗಳು ಯಾವ ಒಂದು ಅವಕಾಶವನ್ನು ಬಿಡಲು ಸಿದ್ಧರಿಲ್ಲ. ಧಾರ್ಮಿಕ ಹಕ್ಕನ್ನು ಆಕ್ರಮಿಸಿ ಮನಸ್ಸು ಮಲೀನಗೊಳಿಸುವುದರ ವಿರುದ್ಧ ಗಟ್ಟಿ ದನಿ ಇರಬೇಕು.


ಮಂಡ್ಯ : ಗಾಂಧಿಭವನ, ಮಾದೇಗೌಡರ ಮೇಲೆ ಬಿಜೆಪಿ ದಾಳಿ


ಮದ್ದೂರು ಉಪಚುನಾವಣೆ ಫಲಿತಾಂಶ ಬಿಜೆಪಿಯ ಹೀನಾಯ ಸೋಲನ್ನು ಪ್ರಕಟಿಸುತ್ತಲೇ ಹತಾಶೆಗೊಂಡ ಬಿಜೆಪಿ ಕಾರ್ಯಕರ್ತರು ಜಿಲ್ಲೆಯ ಹಿರಿಯ ರಾಜಕಾರಣಿ 80 ವರ್ಷ ವಯಸ್ಸಾಗಿದ್ದ ಜಿ.ಮಾದೇಗೌಡರ ಮೇಲೆ ಮತ್ತು ಅವರು ಆಸಕ್ತಿ ವಹಿಸಿ ನಿರ್ಮಿಸಿದ್ದ ಗಾಂಧಿಭವನದ ಮೇಲೆ ದಾಂಧಲೆ ನಡೆಸಿ ಬಿಜೆಪಿಯ ಫ್ಯಾಸಿಸ್ಟ್ ನಿಜ ಸ್ವರೂಪವನ್ನು ಬಯಲು ಮಾಡಿದರು.

ಸುಮಾರು 300 ರಷ್ಟು ಬಿಜೆಪಿ ಕಾರ್ಯಕರ್ತರಿದ್ದ ಗುಂಪು ಬಾಲಕರ ಸರ್ಕಾರಿ ಕಾಲೇಜು (ಎಣಿಕೆ ಸ್ಥಳ) ದಿಂದ ಗುಂಪು ಕಟ್ಟಿಕೊಂಡು ವಿ.ವಿ.ರಸ್ತೆ ಮೂಲಕ ಮಾದೇಗೌಡರ ವಿರುದ್ಧ ಧಿಕ್ಕಾರ ಕೂಗುತ್ತಾ ಬಂದು, ಗಾಂಧಿಭವನದ ಒಳಗೆ ಇದ್ದ ಮಾದೇಗೌಡರನ್ನು ಹಿಡಿದು ಎಳೆದು ಕಪಾಳ, ತಲೆಗೆ ತೀವ್ರವಾಗಿ ಥಳಿಸಿ ಅಂಗಿಯನ್ನು ಹರಿದುಹಾಕಿ ದಾಂಧಲೆ ಮಾಡಿತು. ಇವರ ರಕ್ಷಣೆಗೆ ಬಂದ ಗಾಂಧಿಭವನದ ಉಸ್ತುವಾರಿ ನೋಡಿಕೊಳ್ಳುವ ನಿವೃತ್ತ ಮುಖ್ಯೋಪಾಧ್ಯಾಯ, ಹಿರಿಯ ಸಾಹಿತಿ ಲಿಂಗಣ್ಣ ಬಂಧೂಕಾರ್, ಸಿಬ್ಬಂದಿಗಳಾದ ಅವಿನಾಶ, ಮಂಜುಳಾರವರನ್ನು ಹಿಡಿದು ಥಳಿಸಿದ್ದಾರೆ. ಕಲ್ಲು, ಇಟ್ಟಿಗೆಗಳಿಂದ ಗಾಂಧಿಭವನದ ಕಿಟಕಿ, ಬಾಗಿಲು ಗಾಜುಗಳನ್ನು ಒಡೆದು ಚೂರು ಮಾಡಿದ್ದಾರೆ. ಮಾದೇಗೌಡರ ಕಾರನ್ನು ಪೂರ್ಣ ಜಖಂಗೊಳಿಸಿ ಕೇಕೆ ಹಾಕಿ ಕುಣಿದಾಡಿದ್ದಾರೆ. ಮಧ್ಯಾಹ್ನ 1.00 ಗಂಟೆಯಿಂದ 1.30 ರವರೆಗೆ ನಡೆದ ಈ ದಾಂಧಲೆ, ಗಾಂಧಿಭವನದಲ್ಲಿ ಇದ್ದ ಇಬ್ಬರು ಪೊಲೀಸರ ಸಮ್ಮುಖದಲ್ಲಿ ನಡೆದಿದೆ. ಎಣಿಕೆ ದಿನ 144 ಸೆಕ್ಷನ್ ಜಾರಿಯಲ್ಲಿತ್ತು. ಆದರೂ ಮೆರವಣಿಗೆ ಬಂದು ದಾಂಧಲೆ ಮಾಡಲು ಅವಕಾಶ ಕೊಟ್ಟಿರುವುದರಲ್ಲಿ ಪೊಲೀಸರ ನಿರ್ಲಕ್ಷ್ಯವೂ ಇದೆ.

ಗಲಭೆಕೋರರು ಬಿಜೆಪಿ ಕಾರ್ಯಕರ್ತರೋ, ತಮ್ಮಣ್ಣ ಬೆಂಬಲಿಗರೋ

ಘಟನೆ ನಡೆದ ತಕ್ಷಣ ಪಕ್ಷಾತೀತವಾಗಿ ಬಂದ ತೀವ್ರ ವಿರೋಧದಿಂದ ಕಂಗೆಟ್ಟಿರುವ ಬಿಜೆಪಿ ರಾಜ್ಯ ಸರ್ಕಾರ, ಹಲ್ಲೆ ಮಾಡಿದವರು ತಮ್ಮಣ್ಣ ಬೆಂಬಲಿಗರು ಎಂದು ಹೇಳುತ್ತಿದೆ. ಬಿಜೆಪಿಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ತಮ್ಮಣ್ಣದ ಬೆಂಬಲಿಗರು ಬಿಜೆಪಿ ಕಾರ್ಯಕರ್ತರಲ್ಲ ಎನ್ನುವ ದ್ವಂದ್ವ ನಿಲುವನ್ನು ಜಿಲ್ಲಾ ಬಿಜೆಪಿ ಹೇಳುತ್ತಿದೆ. ಅದೇ ಧ್ವನಿಯಲ್ಲಿ ಪಕ್ಷದ್ರೋಹ ಮಾಡಿದ ಮಧು ಮಾದೇಗೌಡ ಎಂಎಲ್‌ಎ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕೇಳುತ್ತಿದ್ದಾರೆ. ಹಲ್ಲೆ ಮಾಡಿದವರನ್ನು ಪಕ್ಷದಿಂದ ಉಚ್ಛಾಟನೆ ಮಾಡಿ ಎಂದು ಮಾದೇಗೌಡರ ಆಗ್ರಹಕ್ಕೆ ಬಿಜೆಪಿ ಜಾಣ ಮೌನ ವಹಿಸಿದೆ.





ತಮ್ಮಣ್ಣ

ಘಟನೆ ಹಿನ್ನೆಲೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಲವರನ್ನು ಪಕ್ಷಾಂತರ ಮಾಡಿಸಿ ಏನೆಲ್ಲಾ ಕಸರತ್ತು ಮಾಡಿದರೂ ಬಿಜೆಪಿ ಮಂಡ್ಯದಲ್ಲಿ ಖಾತೆ ತೆರೆಯಲು ಸಾಧ್ಯವಾಗಿರಲಿಲ್ಲ. ಆಪರೇಷನ್ ಕಮಲದ ಏಳು ಕ್ಷೇತ್ರಗಳ ಜೊತೆ ಜೆಡಿ(ಎಸ್) ಶಾಸಕ ಸಿದ್ದರಾಜು ಅಕಾಲಿಕ ನಿಧನದಿಂದ ಮದ್ದೂರಿನಲ್ಲೂ ಉಪಚುನಾವಣೆ ನಡೆಯುವಂತಾಯಿತು. ಈಗಲಾದರೂ ಏನಾದರೂ ಮಾಡಿ ಮಂಡ್ಯದಲ್ಲಿ ಖಾತೆ ತೆರೆಯಲು ಬಿಜೆಪಿ ಶತಾಯಗತಾಯ ಪ್ರಯತ್ನ ನಡೆಸಿತ್ತು. ಕಳೆದ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ 7 ಸಾವಿರ ಮತಗಳಿಂದ ಸೋತಿದ್ದ ಡಿ.ಸಿ.ತಮ್ಮಣ್ಣನನ್ನು ಬಿಜೆಪಿಗೆ ಸೇರಿಸಿಕೊಂಡು ಟಿಕೆಟ್ ಕೊಟ್ಟರು. ಕಳೆದ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ನಿಂತಿದ್ದ ಮಾಜಿ ಸಂಸದ, ಜಿ.ಮಾದೇಗೌಡರ ಮಗ ಮಧು ಮಾದೇಗೌಡರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿಕೊಂಡು ಹಾವು, ಮುಂಗುಸಿಯಂತೆ ಇದ್ದ ಇಬ್ಬರನ್ನು ಒಂದು ಮಾಡಿದರು. ಮದ್ದೂರು ಕ್ಷೇತ್ರಕ್ಕೆ ಜೋಡೆತ್ತುಗಳು ಎಂದು ಡಿ.ಸಿ.ತಮ್ಮಣ್ಣ ಮಧು ಮಾದೇಗೌಡರನ್ನು ಬಿಜೆಪಿ ವ್ಯಾಖ್ಯಾನಿಸಿ, ಡಿ.ಸಿ.ತಮ್ಮಣ್ಣ ಗೆದ್ದರೆ ಮಂತ್ರಿ ಮಾಡುವುದಾಗಿ ಘೋಷಿಸಿತ್ತು.

ಕೆ.ಐ.ಎ.ಡಿ.ಬಿ.ಯಲ್ಲಿ ಅಧಿಕಾರಿಯಾಗಿದ್ದಾಗ ಡಿ.ಸಿ.ತಮ್ಮಣ್ಣ ಮಾಡಿದ್ದ ಅವ್ಯವಹಾರದ ತನಿಖೆಗೆ ಒತ್ತಾಯಿಸಿ ಜಿ.ಮಾದೇಗೌಡರು ಹೈಕೋರ್ಟಿನಲ್ಲಿ ಕೇಸು ದಾಖಲಿಸಿದ್ದರು. ಈ ಸಂದರ್ಭದಲ್ಲಿ ವಾಪಸ್ಸು ತೆಗೆಯಲು ಬಿಜೆಪಿಯ ನಾಯಕತ್ವ ಕೇಳಿದಾಗ ಜಿ.ಮಾದೇಗೌಡ ನಿರಾಕರಿಸಿ ಕಾನೂನು ಸಮರ ಮುಂದುವರೆಸುವುದಾಗಿ ತಿಳಿಸಿದ್ದರು. ಚುನಾವಣಾ ಪ್ರಚಾರದಲ್ಲಿ ಮಾದೇಗೌಡರ ಆಶೀರ್ವಾದ ಇದೆ ಎಂದು ಕ್ಷೇತ್ರದ ತುಂಬೆಲ್ಲಾ ಡಿ.ಸಿ.ತಮ್ಮಣ್ಣ, ಬಿಜೆಪಿ ಪ್ರಚಾರ ಮಾಡಿದ್ದವು.

ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಬಿಜೆಪಿ ಆಡಳಿತದಿಂದ ಬೇಸತ್ತಿರುವ ಜನ ಬಿಜೆಪಿ ವಿರುದ್ಧ ಮತ ನೀಡಿ 19 ಸಾವಿರಕ್ಕೂ ಹೆಚ್ಚು ಮತಗಳಿಂದ ಜೆಡಿ(ಎಸ್)ನ್ನು ಗೆಲ್ಲಿಸಿದ್ದಾರೆ. ಎಲ್ಲಾ ರೀತಿಯ ದುರ್ಬಳಕೆ, ನೀರಿನಂತೆ ಹಣ ಚೆಲ್ಲಿದರೂ, ಅಕ್ರಮಗಳನ್ನು ನಡೆಸಿದರೂ ಬಿಜೆಪಿ ಜಿಲ್ಲೆಯಲ್ಲಿ ಗೆಲ್ಲಲು ಸಾಧ್ಯವಾಗಿಲ್ಲ. ರೈತ ವಿರೋಧಿ ನೀತಿ, ಬೆಲೆ ಏರಿಕೆ, ಕೋಲುಗಲಭೆಗಳಿಂದಾಗಿ ಜನ ಬಿಜೆಪಿ ವಿರುದ್ಧ ಮತ ನೀಡಿದ್ದಾರೆ. ಇದನ್ನು ಸಹಿಸದ ಬಿಜೆಪಿ ಸೋಲಿಗೆ ಮಾದೇಗೌಡರನ್ನು ಹೊಣೆ ಮಾಡಿ ಹಲ್ಲೆ ಮಾಡಿ ಜನತೆಯ ದಿಕ್ಕುತಪ್ಪಿಸಲು ಪ್ರಯತ್ನ ಮಾಡಿದೆ.

ರಾಜಕೀಯ ಪಕ್ಷಗಳ ಹೊಣೆಗೇಡಿತನ

ಜಿ.ಮಾದೇಗೌಡ ರವರು 3 ಬಾರಿ ಸಂಸತ್ ಸದಸ್ಯರಾಗಿದ್ದರು. ಮಾಜಿ ಮಂತ್ರಿಗಳು ಜಿಲ್ಲೆಯ ಹಿರಿಯ ರಾಜಕಾರಣಿ ಇಂತಹ ವಯೋವೃದ್ಧ ರಾಜಕಾರಣಿಗಳ ಮೇಲೆ ತೀವ್ರ ಸ್ವರೂಪದ ಹಲ್ಲೆ ನಡೆದಾಗಲೂ ಬಿಜೆಪಿಯ ಫ್ಯಾಸಿಸ್ಟ್ ನಡವಳಿಕೆ, ಕೋಮುವಾದಿ ರಾಜಕೀಯ, ಪ್ರಜಾಪ್ರಭುತ್ವದ ಹಕ್ಕುಗಳಿಗೆ ವಿರುದ್ಧವಾದ ಸರ್ವಾಧಿಕಾರಿಶಾಹಿ ನೀತಿಗಳನ್ನು ಬಯಲಿಗೆಳೆದು ಹೋರಾಟ ಮಾಡಿ ಜನರಲ್ಲಿ ಜಾಗೃತಿ ಮೂಡಿಸುವ ರಾಜಕೀಯ ಜವಾಬ್ದಾರಿಗಳಿಂದ ಇಲ್ಲಿನ ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಜೆಡಿ(ಎಸ್) ನುಣುಚಿಕೊಂಡಿವೆ. ಎಸ್.ಪಿ, ಡಿ.ಸಿ.ವರ್ಗಾವಣೆಯಿಂದ ತೃಪ್ತಿಗೊಂಡಿವೆ.

ಸಿಪಿಐ(ಎಂ) ಪಕ್ಷ ಆರ್.ಎಸ್.ಎಸ್, ಬಿಜೆಪಿ ಗೂಂಡಾಧಾಳಿಯನ್ನು ರಸ್ತೆತಡೆ, ಪ್ರತಿಭಟನೆಗಳನ್ನು ನಡೆಸಿ ರಾಜ್ಯದಲ್ಲಿ ನಡೆಯುತ್ತಿರುವ ಕೋಮುವಾದಿ ರಾಜಕೀಯದ ಇನ್ನೊಂದು ಘಟನೆ ಎಂದು ತೀವ್ರವಾಗಿ ಖಂಡಿಸಿದೆ.

■ ಯಶವ

ವಿನಾಶಕಾಲೇ ವಿಪರೀತ ಬುದ್ಧಿ

ಶ್ರೀ

'ಆಹಾ..., ಛಳಿ ಒಳ್ಳೆದಾಯ್ತು ನೋಡು, ಟ್ರಾಫಿಕ್ ಜಾಮಿಲ್ಲ, ವಾಯು ಮಾಲಿನ್ಯ, ಪರಿಸರ ಮಾಲಿನ್ಯ ಇಲ್ಲ, ಜನ ಎಲ್ಲ ನಡೆದುಕೊಂಡು ಓಡಾಡೋದ್ರಿಂದ ಆರೋಗ್ಯವೂ ಸುಧಾರಿಸುತ್ತೆ...,'

'ಏನಪ್ಪ, ಗುರು, ಏನ್ ಹೇಳ್ತಿದೀಯ ಏನ್ನುತೆ, ಒಂದೂ ಗೊತ್ತಾಗ್ತಿಲ್ಲ, ಸ್ವಲ್ಪ ಬಿಡಿಸಿ ಹೇಳಪಾ...,'

'ನೋಡು ಮರೀ, ಈ ಲಾರಿಯೋರು, ಪೆಟ್ರೋಲ್ ಕಂಪನಿಯೋರು ಎಲ್ಲಾ ಮುಷ್ಕರ ಮಾಡ್ತಿರೋದ್ರಿಂದ ಎಷ್ಟು ಒಳ್ಳೆದಾಗಿದೆ'.

'ಅಲ್ಲ ಗುರುವೇ, ಜನ ಹಿಂಗೆ ಪರದಾಡುತ್ತಿರೋದನ್ನ ನೋಡೀನೂ ನೀನು ಒಳ್ಳೆದಾಗಿದೆ ಅಂತಿದೀಯಲ್ಲ, ಜನ ಓಡಾಡೋದು ಹೆಂಗೆ? ಪದಾರ್ಥಗಳ ಬೆಲೆ ಏರಿಕೊಂಡು ಹೋಗ್ತಿದೆ, ದಿನಾ ದುಡಿದುಕೊಂಡು ತಿನ್ನೋರ ಗತಿಯೇನು?'

'ಸರಿ ಮರೀ, ಆದರೆ ನಮ್ಮ ಸರಕಾರ ಅಂತ ಒಂದಿದೆಯಲ್ಲ, ಅದಕ್ಕೆ ಯಾವ ಭಾಷೆಲಿ ಹೇಳಿದರೂ ಅರ್ಥ ಆಗಲ್ವಲ್ಲ. ಪೆಟ್ರೋಲ್, ಡೀಸಲ್, ಗ್ಯಾಸ್ ಬೆಲೆನ ಏರಿಸೋದರಲ್ಲಿ ತೋರಿಸೋ ಆತುರ, ಇಳಿಸೋದಕ್ಕೆ ಯಾಕೆ ಇರಲ್ಲ?'

'ಇದನ್ನೆಲ್ಲ ನೋಡ್ಕೊಂಡು ಸರಕಾರ ಸುಮ್ಮನ್ನಿದೆಯಲ್ಲ, ಅಂದಹಾಗೆ ನೀನು ಹೇಳ್ತಿರೋದು ಯಾವ ಸರಕಾರ? ರಾಜ್ಯ ಸರಕಾರವೋ? ಕೇಂದ್ರ ಸರಕಾರವೋ? '

'ಎಲ್ಲವೂ ಅವೇ ನೋಡು, ಯಾವುದಕ್ಕೂ ಜನಸಾಮಾನ್ಯರ ಸಂಕಟ ಕಣ್ಣಿಗೇ ಕಾಣೋದಿಲ್ಲ. ಕೇಂದ್ರ ಸರಕಾರ ಉಗ್ರರ ವಿಷಯ ಹಿಡಿದುಕೊಂಡು ಸುಳ್ಳೇ ಜಗ್ಗಾಡುತ್ತಿದೆ. ರಾಜ್ಯ ಸರಕಾರ ನಮಗೂ ಈ ಮುಷ್ಕರಕ್ಕೂ ಸಂಬಂಧ ಇಲ್ಲ ಅಂತ ಕೈ ತೊಳೆದು ಕೊಂಡಿದೆ. ಎನ್‌ಎಸ್.ಜಿ.ಗಾಗಿ ಮಾತ್ರ 'ಓರಾಟ' ನಡೀತಿದೆ.'

'ಅದೇನದು ಎನ್.ಎಸ್.ಜಿ. ಅಂದ್ರೆ? ಅದೇನು.

'ಏಂತದ್ದೂ ಇಲ್ಲ ನಮ್ಮ ಖಾಕಿ ಪೋಲೀಸರ ಬದಲು ಮಿಲಿಟರಿಯೋರು ಬಂದೂಕು ಹಿಡಿದುಕೊಂಡು ಮಂತ್ರಿಗಳನ್ನ ಕಾಪಾಡೋದು.'

'ಸತ್ಯವಾದ ಮಾತು ಹೇಳಿದೆ ಗುರು.'

'ಸತ್ಯ ಅಂದ್ರೆ ನೆನಪಾಯ್ತು ನೋಡು 'ಸತ್ಯಂ' ಅನ್ನೋ ಕಂಪನಿ 'ಸತ್ಯ' ಅನ್ನೋ ಪದವನ್ನೇ ಕೊಲೆ ಮಾಡಿದೆ. ಲಕ್ಷಾಂತರ ಜನರಿಗೆ ಸಾವಿರಾರು ಕೋಟಿ ಪಂಗನಾಮ ಆಗಿದೆ. ಸಾವಿರಾರು ನೌಕರರು ಅತಂತ್ರ ಸ್ಥಿತಿಗೆ ಬಿದ್ದಿದ್ದಾರೆ.'

'ಹೌದು ಗುರು, ಭಂಡವಾಳಿಗರ ಭಂಡವಾಳ ಯಾವತ್ತಿದ್ದೂ ಇಷ್ಟೇ ಅಲ್ವೇ?'

'ಈಗ ಎಲ್ಲಾ ಕಡೆನೂ ಇದೇ ಆಗಿದೆ, ಎಷ್ಟೊಂದು ಭಂಡವಾಳಿಗರು ದಿವಾಳಿ ಎದ್ರೂ, ವಿಶ್ವವನ್ನೇ ವಿನಾಶ ಮಾಡುತ್ತಿದ್ದರೂ, ನಮ್ಮ ಸರಕಾರಗಳಿಗೆ ಮಾತ್ರ ಬುದ್ಧಿ ಬರಂಗಿಲ್ಲ, ಇಷ್ಟೆಲ್ಲ ಆಗ್ತಿದ್ರೂನೂವೆ ವಿದೇಶೀ ಬಂಡವಾಳ , ವಿದೇಶೀ ಬಂಡವಾಳ , ಖಾಸಗೀಕರಣ , ಖಾಸಗೀಕರಣ ಅಂತ ಜಪ ಮಾಡೋದು ಬಿಟ್ಟಿಲ್ಲ. '

'ಹೌದು ಗುರು, ವಿನಾಶ ಕಾಲೇ ವಿಪರೀತ ಬುದ್ಧಿ ಅಂತಾರಲ್ಲ ಹಾಗೆ.'

ಕಸಾಯಿಖಾನೆಯನ್ನು ನಗರದ ಹೊರಕ್ಕೆ ಸಾಗಿಸಿ ಎಂದು ಕೋರ್ಟ್ ನಿರ್ದೇಶನ ನೀಡಿದೆ. ಸರ್ಕಾರ ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಲು ಸಿದ್ಧವಿಲ್ಲ. ಈ ನೆಪದಿಂದ ಮುಚ್ಚುವ ಕಾತುರ. ಒಟ್ಟಾರೆ ಜನರ ಆಹಾರದ ಹಕ್ಕಿನ ಬಗೆಗೆ ತಾತ್ಸಾರ. ತಾತ್ಸಾರ ಮಾತ್ರವಲ್ಲ, ಅದನ್ನು ವಿಭಜನೆಯ ರಾಜಕೀಯಕ್ಕೆ ಬಳಸುವ ಹುನ್ನಾರ..

ಕಸಾಯಿಖಾನೆ ಮುಚ್ಚುವುದೇಕೆ?

ಅಪ್ಪು

ಬೆಂಗಳೂರು ನಗರದ ಟ್ಯಾನರಿ ರಸ್ತೆಯ ಕಸಾಯಿಖಾನೆಗೆ 130 ವರ್ಷಗಳ ಇತಿಹಾಸವಿದೆ. ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ತೋರಿದ ಬೇಜವಾಬ್ದಾರಿಯಿಂದಾಗಿ ಕಸಾಯಿಖಾನೆ ಈಗ ಅಳಿವಿನಂಚಿಗೆ ಬಂದು ನಿಂತಿದೆ. ಇದರಿಂದ ಒಂದೆಡೆ ನಗರದ ಸುಮಾರು 50 ಲಕ್ಷ ಮಂದಿಯ ಆಹಾರಕ್ಕೆ ಕುತ್ತುಬಿದ್ದರೆ, ಕಸಾಯಿಖಾನೆಯಲ್ಲಿ ದುಡಿಯುತ್ತಿರುವ ಸುಮಾರು 3 ಸಾವಿರ ಕಾರ್ಮಿಕರ ಕುಟುಂಬಗಳು ಬೀದಿ ಪಾಲಾಗಲಿವೆ. ಈ ಮೂರು ಸಾವಿರ ಕಾರ್ಮಿಕರಲ್ಲಿ ಬಹುತೇಕರು ದಲಿತರು ಮತ್ತು ತುಂಬಾ ಹಿಂದುಳಿದ ಮುಸ್ಲಿಂ ಜನಾಂಗದವರಾಗಿದ್ದಾರೆ. 1880 ರಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿ ಈ ಕಸಾಯಿಖಾನೆಯನ್ನು ಪ್ರಾರಂಭಿಸಲಾಗಿದೆ. ಟ್ಯಾನರಿ ರಸ್ತೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ನೆಲೆಸಿದ್ದ ಆಂಗ್ಲೋಇಂಡಿಯನ್ನರನ್ನು ಗುರಿಯಾಗಿಟ್ಟುಕೊಂಡು ಇದನ್ನು ಆರಂಭಿಸಲಾಗಿದೆ. ಈಗ ಇಡೀನಗರಕ್ಕೆ ಅಗತ್ಯವಾದ ಕುರಿ, ಮೇಕೆ ಮತ್ತು ದನದ ಮಾಂಸ ಇಲ್ಲಿಂದಲೇ ಸರಬರಾಜಾಗುತ್ತಿದೆ.

ನಿಗಮ ನಿರ್ಲಕ್ಷ್ಯ

1852 ರಲ್ಲಿ ಕೇಂದ್ರ ಸರ್ಕಾರ ಈ ಕಸಾಯಿಖಾನೆಯನ್ನು ಅಧಿಕೃತಗೊಳಿಸಿ ಆದೇಶ ಹೊರಡಿಸಿತು. ಇದನ್ನು ನಿರ್ವಹಣೆ ಮಾಡಬೇಕಾಗಿದ್ದ ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಿಂದ ನಣುಚಿಕೊಂಡು ಆ ಜವಾಬ್ದಾರಿಯನ್ನು ಪಶುಸಂಗೋಪನೆ ಇಲಾಖೆ ವ್ಯಾಪ್ತಿಗೆ ಬರುವ ಕರ್ನಾಟಕ ಮಾಂಸ ಮತ್ತುಕೋಳಿ ಮಾರಾಟ ನಿಗಮ ನಿಯಮಿತಕ್ಕೆ ಒಪ್ಪಿಸಿತು.

ಅಂದಿನಿಂದ ಈ ನಿಗಮ ಕುರಿ, ಮೇಕೆ ಮತ್ತು ದನ ವಧೆಗೆ ಪ್ರವೇಶ ಮತ್ತು ವಧೆ ಶುಲ್ಕವನ್ನು ಕಾಂಟ್ರಾಕ್ಟ್ ನೀಡುವ ಮೂಲಕ ನಿರಂತರವಾಗಿ ವಸೂಲಿ ಮಾಡುತ್ತಿದೆಯೇ ಹೊರತು ಅಲ್ಲಿನ ವ್ಯವಸ್ಥೆ ಬಗ್ಗೆ ಒಮ್ಮೆಯೂ ತಲೆಕೆಡಿಸಿಕೊಂಡಿಲ್ಲ. ಹಣ ಬಂದರಾಯಿತು ಯಾರೆಲ್ಲಾದರೂ ಸಾಯಲಿ ಎಂಬನಿಯಮವನ್ನು ಚಾಚೂತಪ್ಪದೆ ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದಿದೆ. ಕನಿಷ್ಟ ಮೂಲಭೂತ ಸೌಲಭ್ಯಗಳನ್ನೂ ಕಲ್ಪಿಸಿಲ್ಲ. ಇನ್ನು ವರ್ತಕರು ತಾನೆ ಏನು ಮಾಡುತ್ತಾರೆ. ಇದ್ದುದರಲ್ಲೇ ಕಾಲ ಹಾಕುತ್ತಾ ಬಂದಿದ್ದಾರೆ.

ಸಾರ್ವಜನಿಕ ಹಿತಾಸಕ್ತಿ

ಹೌಸಿಂಗ್ ಸೊಸೈಟಿ, ಆ ಸೊಸೈಟಿ ಈ ಸೊಸೈಟಿ ಎಂದು ಮಾಡಿಕೊಂಡು ಜನರಿಗೆ ಇದ್ದಲ್ಲಿಯೇ ತಿರುಪತಿ, ಧರ್ಮಸ್ಥಳ ಎಲ್ಲ ತೋರಿಸುವುದರಲ್ಲಿ ಪ್ರವೀಣನಾಗಿರುವ ಕೃಷ್ಣಭಟ್ ಎನ್ನುವ ಆಸಾಮಿ



ಇಂತಹ ಆಧುನಿಕ ಕಸಾಯಿಖಾನೆ ನಿರ್ಮಾಣ ಎಂದು?

1997 ರಲ್ಲಿ ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ. ಕಸಾಯಿಖಾನೆಯಲ್ಲಿ ನೈರ್ಮಲ್ಯ ಕಾಪಾಡುತ್ತಿಲ್ಲ, ಒಳಚರಂಡಿ ವ್ಯವಸ್ಥೆ ಇಲ್ಲ, ವಧೆ ನಂತರ ಬೀಳುವ ಜೈವಿಕ ಗೊಬ್ಬರ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಇಲ್ಲ. ಇದರಿಂದ ಸುತ್ತಮುತ್ತಲ ಜನತೆಗೆ ಹಲವಾರು ರೋಗರುಜಿನಗಳಿಗೆ ಒಳಗಾಗಿದ್ದಾರೆ. ಕಸಾಯಿಖಾನೆಯನ್ನು ಸ್ಥಳಾಂತರಿಸಬೇಕೆಂದು ಪಿಐಎಲ್‌ನಲ್ಲಿ ವಾದಿಸಲಾಗಿದೆ. ಪ್ರವೇಶ ಶುಲ್ಕ ಮತ್ತು ವಧೆ ಶುಲ್ಕ ವಸೂಲಿ ಮಾಡುತ್ತಿರುವ ಸರ್ಕಾರದ್ದೇ ಈ ಎಲ್ಲಾ ಸೌಲಭ್ಯ ಒದಗಿಸುವ ಜವಾಬ್ದಾರಿ ಎಂಬುದು ಕೃಷ್ಣಭಟ್‌ಗೆ ತಿಳಿದಿದೆಯೋ ಇಲ್ಲವೋ ಅದು ಬೇರೆ ವಿಷಯ. ಆದರೆ ಸರ್ಕಾರ ಮತ್ತು ಬಿಬಿಎಂಪಿಗಳು ಇದು ನಮ್ಮ ಜವಾಬ್ದಾರಿಯಲ್ಲ ಎಂದು ಹೇಳಿ ತಪ್ಪಿಸಿಕೊಳ್ಳುವಂತಿಲ್ಲ. ರಾಜ್ಯ ಸರ್ಕಾರ ಮತ್ತು ಮಾಂಸ ಮಾರಾಟ ನಿಗಮ ಸಮರ್ಪಕವಾಗಿ ವಾದ ಮಂಡಿಸಿಲ್ಲ ಎಂದು ಕಾಣುತ್ತದೆ. ಕಸಾಯಿಖಾನೆಯನ್ನು ಸ್ಥಳಾಂತರಿಸಬೇಕೆಂದು 2004 ರಲ್ಲಿ ಹೈಕೋರ್ಟ್ ಆದೇಶ ಹೊರಡಿಸಿತು.

ಅಂದಿನಿಂದ ಸರ್ಕಾರ ಕಸಾಯಿಖಾನೆ ಸ್ಥಾಪನೆಗೆ ನಗರದ ಹೊರವಲಯಗಳಲ್ಲಿ ಜಮೀನು ಖರೀದಿಗೆ ಹುಡುಕಾಟ ನಡೆಸಿತು. ಕಸಾಯಿಖಾನೆ ಸ್ಥಾಪನೆಗೆ ಎಂದು ತಿಳಿದ ತಕ್ಷಣವೇ ಅಲ್ಲಿನ ಜನರೊಂದಿಗೆ ಸೇರಿಕೊಂಡಿರುವ ಸಂಘ ಪರಿವಾರದವರು ವಿರೋಧ ವ್ಯಕ್ತಪಡಿಸಿದ್ದರು. ಆನೇಕಲ್ ಸಮೀಪದ ಇಗ್ಗಲೂರು ಬಳಿ 40 ಎಕರೆ ಭೂಮಿ ಖರೀದಿಸಲಾಗಿದೆ. ಇಲ್ಲಿಯೂ ಸಹ ಸಂಘ ಪರಿವಾರ ಜನರನ್ನು ಎತ್ತಿಕಟ್ಟಿದೆ. ಕಸಾಯಿಖಾನೆ ಇಲ್ಲಿ ನಿರ್ಮಾಣವಾದರೆ ಮುಸ್ಲಿಂ ಸಮುದಾಯ ಬಂದು ನೆಲೆಸುತ್ತದೆ. ಇಲ್ಲಿರುವವರಿಗೆ ಸ್ಥಳ ಇರುವುದಿಲ್ಲ ಎಂದು ಅಲ್ಲಿನ ಜನರ ಕಿವಿಯಲ್ಲಿ ಹುಳ ಬಿಟ್ಟಿದ್ದಾರೆ. ಹೊಸ ಕಸಾಯಿಖಾನೆ ನಿರ್ಮಾಣ ಇನ್ನೂ ಕನಸಾಗಿಯೇ ಉಳಿದಿದೆ.

ಗುಟ್ಟೇಗುಟ್ಟು

ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲಿಸಿರುವುದು, ವಾದ ವಿವಾದ ನಡೆಯುತ್ತಿರುವುದು ಸೇರಿದಂತೆ ಯಾವುದೇ ಬೆಳವಣಿಗೆಗಳ ಬಗ್ಗೆ ಕುರಿ, ಮೇಕೆ ವಧೆ ಮಾಡುವವರಾಗಲಿ ಅಲ್ಲಿನ ಕಾರ್ಮಿಕರಿಗಾಗಲಿ ಕಿಂಚಿತ್ತೂ ಮಾಹಿತಿ ಇಲ್ಲ. ಹೈಕೋರ್ಟ್ ಆದೇಶ ಬಂದ ನಂತರ ಅಲ್ಲಿ ಮಾಂಸ ಮಾರಾಟಗಾರರಿಗೆ ವಿಷಯ ತಿಳಿಯಿತು. ಕುರಿ, ಮೇಕೆ ಮರ್ಚೆಂಟ್ಸ್ ಒಕ್ಕೂಟದ ಇಲಿಯಾಜ್ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಿದರು. ನ್ಯಾಯಾಲಯ ರಿಟ್ ಅನ್ನು ಸಾರಾಸಗಟು ತಿರಸ್ಕರಿಸಿತು. 2008 ರಲ್ಲಿ ಆಗಸ್ಟ್ 20 ರಂದು ಮತ್ತೊಮ್ಮೆ ಆದೇಶ ಹೊರಡಿಸಿದ ಹೈಕೋರ್ಟ್, ಕಾಲಾವಧಿ ವಿಸ್ತರಣೆ ಸಾಧ್ಯವಿಲ್ಲ, ತೆರವುಗೊಳಿಸಲೇಬೇಕೆಂದು ಸರ್ಕಾರಕ್ಕೆ ತಾಕೀತು ಮಾಡಿತು. ಆಗಸ್ಟ್‌ನಿಂದ ಡಿಸೆಂಬರ್‌ವರೆಗೂ ಕೈಯಲ್ಲಿ ಆದೇಶ ಇಟ್ಟುಕೊಂಡು ಸುಮ್ಮನಿದ್ದ ಸರ್ಕಾರ ಮತ್ತು ನಿಗಮ ಡಿಸೆಂಬರ್ 31 ರಂದು ಕಸಾಯಿಖಾನೆ ಖಾಲಿ ಮಾಡಬೇಕೆಂದು ನೋಟಿಸ್ ಜಾರಿ ಮಾಡಿದೆ. ಜನವರಿ 4 ರಿಂದ ಪ್ರಾಣಿ ವಧೆ ನಿಲ್ಲಿಸಬೇಕೆಂದು ಆಗ್ರಹಿಸಿದೆ. ತಮ್ಮದಲ್ಲದ ತಪ್ಪಿಗೆ ಅಲ್ಲಿನ ವರ್ತಕರು ಶಿಕ್ಷೆ ಅನುಭವಿಸುವಂತಾಗಿದೆ. 50 ಲಕ್ಷ ಜನತೆಯ ಆಹಾರ ಮತ್ತು ಮೂರುಸಾವಿರ ಕಾರ್ಮಿಕರ ಉದ್ಯೋಗದ ಪ್ರಶ್ನೆಗಳು ಎದುರಾಗಿವೆ.

ಇಲ್ಲಿ ಪ್ರತಿದಿನ ಮೂರು ಸಾವಿರ ಕುರಿ, ಮೇಕೆ ಸರಿಸುಮಾರು 600 ದನಗಳನ್ನು ವಧೆ ಮಾಡಲಾಗುತ್ತದೆ. ಇಲ್ಲಿ ವಧೆ ಮಾಡಿದ ನಂತರವೇ ನಗರದ ಇತರ ಪ್ರದೇಶಗಳಿಗೆ ಸಾಗಿಸಲಾಗುತ್ತದೆ. ನಗರದಲ್ಲಿ ಸುಮಾರು 5 ಸಾವಿರ ಕುರಿ ಮಾಂಸ ಮಾರಾಟ ಅಂಗಡಿಗಳಿವೆ. ಇವೆಲ್ಲಕ್ಕೂ ಟ್ಯಾನರಿ ರಸ್ತೆ ಸಮೀಪದ ಸ್ಥಳವಾಗಿದೆ.

ಒಂದು ವೇಳೆ ಕಸಾಯಿಖಾನೆಯನ್ನು ಇಗ್ಗಲೂರಿಗೆ ಸ್ಥಳಾಂತರಿಸಿದರು ಎಂದಿಟ್ಟುಕೊಳ್ಳೋಣ, ಸಮಸ್ಯೆ ಪರಿಹಾರ ಕಾಣುವ ಬದಲು ಇನ್ನಷ್ಟು ಹೆಚ್ಚಲಿದೆ. ಕಾರ್ಮಿಕರು ಕೊಡುವ ಕನಿಷ್ಟ ಕೂಲಿಗೆ 30 ಕಿಲೋಮೀಟರ್ ಪ್ರಯಾಣ ಮಾಡಲು ಸಾಧ್ಯವಿಲ್ಲ. ಇಲ್ಲಿ ದೊರೆಯುವ ಕೂಲಿಗೆ ಬಾಡಿಗೆ ಮನೆ ಹಿಡಿದು ಜೀವನ ಸಾಗಿಸುವ ಮಾತೇ ಇಲ್ಲ.

ಸಂಪಾದಕೀಯ....

ಪುಟ 3 ರಿಂದ

ಎದುರಿಸಲಾಗದವರು ಬೆನ್ನು ಹತ್ತಿದ ಬೇಟೆಗೆ ನಿದರ್ಶನ. ಉಪಚುನಾವಣೆ ಫಲಿತಾಂಶದಿಂದ 'ಆಪರೇಷನ್ ಕಮಲ'ದಂತಹ ಅನೈತಿಕ ರಾಜಕಾರಣಕ್ಕೆ ಜನ ಅಂಗೀಕಾರ ನೀಡಿಬಿಟ್ಟಿದ್ದಾರೆ ಎಂದೇ ಭಾವಿಸಿರುವ ಬಿಜೆಪಿ ಪ್ರಜಾಪ್ರಭುತ್ವದ ಕಗ್ಗೊಲೆಗೆ ಸರ್ವಸನ್ನದ್ಧವಾಗುತ್ತಿದೆ.

ಅಲ್ಪಸಂಖ್ಯಾತರ ಮೇಲೆ ಸತತ ಧಾಳಿಗಳನ್ನು ನಡೆಸುತ್ತಾ ಕೋಮುದ್ವೇಷ ಬೆಳೆಸುತ್ತಿರುವ ಸಂಘ ಪರಿವಾರವು ಇದೀಗ ಎರಡನೇ ಹಂತವಾಗಿ ಪ್ರಜಾಪ್ರಭುತ್ವೀಯ, ಪ್ರಗತಿಪರ ಶಕ್ತಿಗಳ ಮೇಲೆ ಧಾಳಿಯನ್ನು ಕೇಂದ್ರೀಕರಿಸಿದೆ. ಇವರ ಅಂತಿಮ ಧಾಳಿಗಳ ಗುರಿ ದುಡಿಯುವ ವರ್ಗ. ಇಂತಹದ್ದನ್ನೇ ರಾಜ್ಯದೆಲ್ಲೆಡೆ ಹಬ್ಬಿಸುವ ಯೋಜನೆಯ ಭಾಗವೂ ಆಗಿದೆ. ಫ್ಯಾಸಿಸ್ಟರಿಗೆ ಅಲ್ಪಸಂಖ್ಯಾತರು ಬಹುಸಂಖ್ಯಾತರು ಎಂಬ ಭಿನ್ನತೆ ಏನಿಲ್ಲ. ಭಿನ್ನ ಅಭಿಪ್ರಾಯ ಸಹಿಸುವುದಿಲ್ಲ ಎಂಬುದೇ ಈ ಧಾಳಿಗಳಲ್ಲಿ ಕಾಣುವುದು

ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಈ ನಗ್ನ ಧಾಳಿಯನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕು. ಪ್ರತಿರೋಧಿಸಬೇಕು. ಮಾಧ್ಯಮ ಕ್ಷೇತ್ರದಲ್ಲಂತೂ ಒಡಕು ಇರಬಾರದು. ಆದರೆ ಸಂಘ ಪರಿವಾರ ಇಲ್ಲಿಯೂ ತನ್ನ ಪರ ವಿರೋಧ ಎಂದು ವಿಭಜನೆಯ ವಾತಾವರಣದ ಸೃಷ್ಟಿಸುತ್ತಿದೆ. ಮಾಧ್ಯಮದಲ್ಲಿ ಒಡಕು ತರುತ್ತಿದೆ. ಇಂದು ಮಂಗಳೂರುಕರಾವಳಿ ಇತರೆಡೆಯಲ್ಲಿ ನಡೆಯುತ್ತಿರುವ ಫ್ಯಾಸಿಸ್ಟ್ ಮನೋಭಾವದ ಕೃತ್ಯಗಳು ಜನರೆದುರು ಇಡಿಯಾಗಿ ಹೊರಬರದೇ, ಮಾಹಿತಿ ಸಿಗದೇ ಇರುವಂತೆ ಇದೇ ಪರಿವಾರ ನೋಡಿಕೊಳ್ಳುತ್ತಿದೆ. ಮಾಧ್ಯಮರಂಗದಲ್ಲಿ ಸಂಘ ಪರಿವಾರದ ಫ್ಯಾಸಿಸ್ಟ್ ಹಿಡಿತ ಹೆಚ್ಚುತ್ತಿರುವುದು ಆತಂಕದ ವಿಷಯವಾಗಿದೆ.

ದಾವಣಗೆರೆ ಚರ್ಚ್‌ಗಳಿಗೆ ಬೀಗ ಹಾಕಿಸಿದ್ದ ಯಡಿಯೂರಪ್ಪನ ಸರ್ಕಾರದ ಕಾನೂನುಬಾಹಿರ, ಸೇಡಿನ ಕೃತ್ಯಗಳ ಬಗ್ಗೆ ನ್ಯಾಯಾಲಯ ಛೀಮಾರಿ ಹಾಕಿದೆ. ಕರಾವಳಿ ಅಲೆ ಪತ್ರಿಕೆಯ ಮೇಲಿನ ಧಾಳಿಗಳಲ್ಲಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ತೀವ್ರವಾಗಿ ಟೀಕಿಸಿದೆ. ಆದರೆ ಇದಕ್ಕೆ ಕಿವಿಗೊಡದಿರುವುದು ಕೋಮುವಾದೀ ಅಜೆಂಡಾಕ್ಕೆ ಅಂಟಿಕೊಂಡಿರುವ ಭಂಡತನದ ಪರಮಾವಧಿಯಾಗಿದೆ. ಸರ್ಕಾರದ ಮೇಲಿನ ಸಾರ್ವಜನಿಕ ವಿಶ್ವಾಸಾರ್ಹತೆಯೂ ಹೊರಟುಹೋಗಿದೆ.

ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಎಲ್ಲಾ ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳ ಜನಾಂದೋಲನವೊಂದೇ ದಾರಿ. ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಿ ಕ್ರಿಯಾಶೀಲವಾಗಬೇಕಿದೆ.

ದಾಳಿಗೀಡಾಗಿರುವ ಕರಾವಳಿ ಅಲೆ ಪತ್ರಿಕೆ ಹಾಗೂ ಅದರ ವ್ಯವಸ್ಥಾಪಕ ಸಂಪಾದಕರೂ, ಪ್ರಕಾಶಕರೂ ಸಿಬ್ಬಂದಿಗಳಿಗೆ ಅವರ ಹೋರಾಟಕ್ಕೆ ಜನಶಕ್ತಿ ತನ್ನ ಸಂಪೂರ್ಣ ಸಕ್ರಿಯ, ಸೌಹಾರ್ದ, ಬೆಂಬಲ ಘೋಷಿಸುತ್ತದೆ. ಈ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸುತ್ತದೆ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಕೊಳ

'ಕರಾವಳಿ ಅಲೆ'ಯ ಕತ್ತು ಹಿಸುಕಿ ಕೊಲ್ಲುವ ಯತ್ನ ಕ್ಲೈಮಾಕ್ಸ್ ಬಂದು ನಿಂತಿದೆ.

ಮಂಗಳೂರಿನ ಪತ್ರಕರ್ತ ಬಿ.ವಿ. ಸೀತಾರಾಮರನ್ನು ಕುಖ್ಯಾತ ಕ್ರಿಮಿನಲ್‌ಗಳ ರೀತಿ ಬೆನ್ನಟ್ಟಿ ಬಂಧಿಸಿ ಜೈಲಿಗೆ ತಳ್ಳಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಸೀತಾರಾಮರ ಕೈಗೆ ಲೀಡಿಂಗ್ ಚೈನ್ ಇರುವ ಕೈಕೋಳ ತೊಡಿಸಲಾಗಿತ್ತು. ಇದು ರಾಜ್ಯಾದ್ಯಂತ ಮಾತ್ರವಲ್ಲದೇ ರಾಷ್ಟ್ರಮಟ್ಟದಲ್ಲಿಯೂ ಆಚ್ಚರಿಯನ್ನು ಮೂಡಿಸಿದೆ. ಆದರೆ ಮಂಗಳೂರಿನ ಮತೀಯ ರಾಜಕಾರಣವನ್ನು ಗಮನಿಸಿದವರಿಗೆ ಇದೊಂದು ಆಚ್ಚರಿಯ ಸಂಗತಿಯಾಗಿ ಕಂಡಿಲ್ಲ. ಬಿ.ವಿ.ಸೀತಾರಾಮರು ಜೈಲು ಪಾಲಾಗುವುದು ತಿಂಗಳ ಹಿಂದೆ ಸಂಘ ಪರಿವಾರ ಕರಾವಳಿ ಅಲೆಯ ಮೇಲೆ ದಾಳಿಗಳನ್ನು ಆರಂಭಿಸಿದಾಗಲೇ ಸ್ಪಷ್ಟವಾಗಿತ್ತು.

ತಿರುಗುಬಾಣಕ್ಕೆ ತಂತ್ರ

ಶೇಖರಾನಂದ ಸ್ವಾಮಿಯ ಬಗ್ಗೆ ಮಾತ್ರವಲ್ಲದೆ ರವಿಶಂಕರ್ ಗುರೂಜಿಯ ಬಗ್ಗೆ ಮಾಲೆಗಾಂವ್ ಸ್ಫೋಟದಲ್ಲಿ ಸಂಬಂಧಿಸಿದಂತೆ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಬಂದ ಸುದ್ದಿಗಳನ್ನು ಕರಾವಳಿ ಅಲೆಯಲ್ಲಿ ಬಿ.ವಿ.ಸೀತಾರಾಮರು ಪ್ರಕಟಿಸಿದ್ದನ್ನೇ ನೆಪವಾಗಿಸಿ ಮಂಗಳೂರಿನ ಆರೇಳು ಪೊಲೀಸ್ ಠಾಣೆಗಳಲ್ಲಿ ಧರ್ಮನಿಂದನೆಯ ಕಾಯ್ದೆಯ ಅಡಿಯಲ್ಲಿ ಕೇಸುಗಳನ್ನು ದಾಖಲಿಸಿಕೊಂಡು ಬಿಜೆಪಿ ಸರಕಾರ ಈ ಕೇಸುಗಳ ಹೆಸರಿನಲ್ಲಿ ಬಿ.ವಿ.ಸಿಯವರನ್ನು ಬಂಧಿಸಿ ತಿಂಗಳುಗಟ್ಟಲೆ ಜೈಲಿನಲ್ಲಿ ಕೂಡಿಹಾಕಲು ಸಂಚು ನಡೆಸಿತ್ತು. ಆದರೆ ಅದೇ ಸಂದರ್ಭದಲ್ಲಿ ವಿಜಯಕರ್ನಾಟಕದ ವಿಶ್ವೇಶ್ವರ ಭಟ್ಟ ಹಾಗೂ ಎಸ್.ಎಲ್. ಬೈರಪ್ಪನವರ ಮೇಲೆ ಕ್ರೈಸ್ತ ಧರ್ಮನಿಂದನೆಯ ದೂರುಗಳು ಮಂಗಳೂರಿನ ಒಂದೆರಡು ಠಾಣೆಗಳಲ್ಲಿ ದಾಖಲಾದವು. ತಾವು ಬಿಟ್ಟ ಬಾಣ ತಮಗೆ ತಿರುಗುಬಾಣವಾದುದನ್ನು ಕಂಡ ಬಿಜೆಪಿಗರು ಆರಂಭದಲ್ಲಿ ಕೈ ಕೈ ಹಿಸುಕಿಕೊಂಡರೂ ಹೊಸ ತಂತ್ರಗಳನ್ನು ರೂಪಿಸತೊಡಗಿದರು. ಧರ್ಮನಿಂದನೆಯ ಕೇಸುಗಳ ಅಡಿಯಲ್ಲಿ ಬಿಜೆಪಿಯವರನ್ನು ಬಂಧಿಸಿದರೆ ವಿಜಯ ಕರ್ನಾಟಕದ ಮೇಲೆ ಕ್ರಮ ಯಾಕಿಲ್ಲ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಬಹುದು ಎಂಬ ಕಾರಣಕ್ಕೆ ಬಿ.ವಿ.ಸಿ.ಯವರ ಮೇಲೆ ಪತ್ರಿಕೆಗೆ ಸಂಬಂಧಿಸಿ ದಾಖಲಾದ ಹಳೆಯ ಕೇಸುಗಳನ್ನು ಕೆದಕುವ ಕೆಲಸಕ್ಕೆ ಇಲ್ಲಿನ ಕೇಸರಿ ಪೊಲೀಸರ ಮೂಲಕ ಸಂಘ ಪರಿವಾರ ಕೈಹಾಕಿತು. ಅದರ ಭಾಗವಾಗಿಯೇ ಉಡುಪಿ ಜಿಲ್ಲೆಯ ಶಿರ್ವ ಠಾಣೆಯಲ್ಲಿ ಎರಡು ವರ್ಷದ ಹಿಂದೆ ದಾಖಲಾಗಿದ್ದ ಖಾಸಗಿ ಮಾನನಷ್ಟ ಮೊಕದ್ದಮೆಯನ್ನು ಕೆದಕಿ, ತಿದ್ದಿ, ವಾರೆಂಟ್ ಹೊರಡಿಸಿ ಕುಖ್ಯಾತ ಕ್ರಿಮಿನಲ್‌ಗಳನ್ನು ಬಂಧಿಸುವ ರೀತಿಯಲ್ಲಿ ಕಳೆದ ಭಾನುವಾರ ಕಾರ್ಕಳದ ಬಳಿಯ ನಿರ್ಜನ ಪ್ರದೇಶದಲ್ಲಿ ಬಿ.ವಿ.ಸಿ. ದಂಪತಿಗಳು ಕಾಡಿನಲ್ಲಿ ಹೋಗುತ್ತಿರುವಾಗ ಬೆನ್ನಟ್ಟಿ ಸುತ್ತುವರಿದು ಬಂಧಿಸಲಾಯಿತು. ಈ ಕೇಸಿಗೆ ಸಂಬಂಧಿಸಿ ನ್ಯಾಯಾಲಯ ತಕ್ಷಣ ಜಾಮೀನು ನೀಡುವುದು ಖಂಡಿತ ಎಂದು ತಿಳಿದ ಪೊಲೀಸರು ಮಂಗಳೂರು ಠಾಣೆಗಳಲ್ಲಿ ದಾಖಲಾಗಿದ್ದ ಸುಳ್ಳು ಕೇಸುಗಳಿಗೆ ಸಂಬಂಧಿಸಿ ವಾರೆಂಟ್‌ನೊಂದಿಗೆ ಬಂಧಿಸಲು ಮಂಗಳೂರಿನ ಕುಖ್ಯಾತ ಜೈಲಿಗೆ ತಳ್ಳಲು ನ್ಯಾಯಾಲಯದ ಹೊರಗೆ ಕಾದು ಕುಳಿತಿದ್ದರು.

ಜಾಮೀನು ತಿರಸ್ಕಾರ

ಮಂಗಳೂರು ಜೈಲಿನ ಕುಖ್ಯಾತ, ಪೊಲೀಸರ ಕ್ರಿಮಿನಲ್ ಬುದ್ಧಿ, ಜೈಲಿನೊಳಗೆ ಸೇಡು ತೀರಿಸಲು ಕಾದು ಕುಳಿತಿರುವ ಸಂಘ ಪರಿವಾರದ ಕ್ರಿಮಿನಲ್‌ಗಳು ಈ ಎಲ್ಲಾ ಅಪಾಯಗಳನ್ನು ಅರಿತ ಬಿ.ವಿ.ಸಿ ಕೋರ್ಟ್ ನೀಡಿದ ಜಾಮೀನನ್ನು ಜೀವ ಭಯದ ಕಾರಣ ನೀಡಿ ತಿರಸ್ಕರಿಸಿದರು. ಹಾಗೂ ತೀವ್ರ ಅಸ್ವಸ್ಥಗೊಂಡು ಉಡುಪಿಯ ಪತ್ರಕರ್ತರ ಕಾಳಜಿಯಿಂದ ಸರಕಾರಿ ಜಿಲ್ಲಾ ಆಸ್ಪತ್ರೆಯ ಖೈದಿಗಳ ವಾರ್ಡಿಗೆ ದಾಖಲುಗೊಂಡರು. ಇದೇ ಸಂದರ್ಭದಲ್ಲಿ



ಅಸ್ವಸ್ಥ ಸ್ಥಿತಿಯಲ್ಲೂ ಪೊಲೀಸರ ಎಳೆದಾಟ

ರಾಜ್ಯಾದ್ಯಂತ ಪ್ರತಿಭಟನೆಗಳು ಆರಂಭಗೊಂಡು ಸೀತಾರಾಮರ ಪರವಾಗಿ ಜನಾಭಿಪ್ರಾಯ ರೂಪುಗೊಳ್ಳುವುದನ್ನು ಕಂಡು ಸ್ವಲ್ಪಮಟ್ಟಿಗೆ ಹಿಂಜರಿದ ಬಿಜೆಪಿಗರು ಪಟ್ಟು ಸಡಿಲಿಸದೆ ಗೃಹಸಚಿವ ಆಚಾರ್ಯರ ನೇರ ಕುಮ್ಮಕ್ಕಿನಿಂದ ವೈದ್ಯಾಧಿಕಾರಿಗಳಿಗೆ ಒತ್ತಡ ಹಾಕಿ ಮಂಗಳೂರು ಸಬ್ ಜೈಲಿಗೆ ಸ್ಥಳಾಂತರಿಸುವ ಹುನ್ನಾರದಲ್ಲಿ ಯಶಸ್ವಿಯಾಗಿದ್ದಾರೆ. ತೀವ್ರ ಅನಾರೋಗ್ಯದ ನಡುವೆಯೂ ಸೀತಾರಾಮರನ್ನು ಉಡುಪಿ ಆಸ್ಪತ್ರೆಯಿಂದ ಎತ್ತಿ ಪೊಲೀಸ್ ವ್ಯಾನಿಗೆ ಹಾಕಿ ಮಂಗಳೂರು ಜೈಲಿಗೆ ಕರೆತರಲಾಗಿದೆ. ಮಂಗಳೂರಿನ ಪತ್ರಕರ್ತರು ಈ ಬಗ್ಗೆ ಧ್ವನಿ ಎತ್ತದಿದ್ದರೂ ರಾಜ್ಯಮಟ್ಟದ ಪತ್ರಕರ್ತರ ಮಧ್ಯಪ್ರವೇಶದಿಂದಾಗಿ ಕೊನೆಗೂ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿರುವ ಖೈದಿಗಳ ಸೆಲ್ಲಿಗೆ ಸೀತಾರಾಮರನ್ನು ಸ್ಥಳಾಂತರಿಸಲಾಗಿದೆ.

ಮೈಸೂರಿಗೆ

ಆನಂತರ ಮಂಗಳೂರಿನಲ್ಲಿಯೂ ನಾಟಕೀಯ ವಿದ್ಯಮಾನಗಳು ನಡೆದು ಸೀತಾರಾಮರನ್ನು ಮಂಗಳೂರಿನಿಂದಲೂ ಎತ್ತಂಗಡಿ ಮಾಡಿ ಮೈಸೂರು ಜೈಲಿಗೆ ದಬ್ಬಲಾಗಿದೆ. ಬಿ.ವಿ.ಸೀತಾರಾಮರ ಜೈಲುವಾಸ ಸದ್ಯಕ್ಕೆ ಮುಗಿಯುವ ಲಕ್ಷಣ ಕಂಡುಬರುತ್ತಿಲ್ಲ. ಸರಣಿ ಕೊಲೆಗಡುಕರು, ಭಯಾನಕ ಅಪರಾಧಿಗಳನ್ನು ನಡೆಸಿಕೊಳ್ಳುವ ರೀತಿಯಲ್ಲಿ ಪೊಲೀಸರು ಅವರನ್ನು ನಡೆಸಿಕೊಳ್ಳುತ್ತಿದ್ದಾರೆ. ಎಂದರೆ ಇಲ್ಲಿನ ಜಿಲ್ಲಾಡಳಿತ ಪೊಲೀಸ್ ಇಲಾಖೆಗಳು ಎಷ್ಟರಮಟ್ಟಿಗೆ ಸಂಘ ಪರಿವಾರದ ಮತೀಯ ಅಜೆಂಡಾಗಳಿಗೆ ಒಗ್ಗಿಕೊಂಡಿದೆ ಎಂಬ ಸತ್ಯ ಅರಿವಾಗುತ್ತದೆ.

ಕಂಪನ

ಬಿ.ವಿ.ಸೀತಾರಾಮರ ಬಂಧನ ಕರಾವಳಿಯಲ್ಲಂತೂ ತೀವ್ರ ಕಂಪನವನ್ನು ಎಬ್ಬಿಸಿದೆ. ಆಶಾದಾಯಕ ನಿರಾಶಾದಾಯಕ ಬೆಳವಣಿಗೆಗಳು ಜೊತೆ ಜೊತೆಯಲ್ಲಿಯೇ ಘಟಿಸುತ್ತಿವೆ. ಕರಾವಳಿ ಅಲೆ ಮಾರಾಟ ಮಾಡದಂತೆ ನಿರ್ಬಂಧ ಬಿ.ವಿ.ಸೀ ಮತ್ತು ಅವರ ಸಂಗಾತಿ ಪತ್ರಕರ್ತರ ಮೇಲೆ ಸುಳ್ಳು ಮೊಕದ್ದಮೆ, ಸೀತಾರಾಮರ ಬಂಧನದ ನಂತರ ಈಗ ಕರಾವಳಿ ಅಲೆ ಪತ್ರಿಕೆಯನ್ನು ಸೀತಾರಾಮರ ಅನುಪಸ್ಥಿತಿಯಲ್ಲಿ ಮುನ್ನಡೆಸುತ್ತಿರುವ ಶಿವಪ್ರಸಾದ್ ಮತ್ತು ನವೀನ್ ಶೆಟ್ಟಿಯವರನ್ನು ಬಂಧಿಸಿ ಜೈಲಿಗೆ ತಳ್ಳಲು ಕೇಸರಿ ಪೊಲೀಸರು ಗೃಹ ಸಚಿವ ಆಚಾರ್ಯರ ಆದೇಶದಂತೆ ರಂಗಕ್ಕಿಳಿದಿದ್ದಾರೆ. ಇನ್ನೂ ಕೆಲವರನ್ನು ಹೆದರಿಸಿ ಪತ್ರಿಕೆಯ ಕೆಲಸಕ್ಕೆ ರಾಜೀನಾಮೆ ಕೊಡಿಸಲಾಗುತ್ತಿದೆ. ಈಗಾಗಲೇ ಮುಖ್ಯ ವರದಿಗಾರ ಹೆಂಡು ಮರಾಕಿ ಸೇರಿದಂತೆ ಮೂರ್ನಾಲ್ಕು ಮಂದಿ ಚಡ್ಡಿಗಳ ಒತ್ತಡ ತಾಳಲಾರದೆ ಪತ್ರಿಕೆಗೆ ರಾಜಿನಾಮೆ ನೀಡಿದ್ದಾರೆ. ಪತ್ರಿಕೆಯನ್ನು ಹೇಗಾದರೂ ನಿಲ್ಲಿಸುವ ಬಿ.ವಿ.ಸೀತಾರಾಮರನ್ನು ನಿಶ್ಶಸ್ತ್ರಗೊಳಿಸುವ ಪ್ರಕ್ರಿಯೆಯನ್ನು ಇಲ್ಲಿನ ಕೇಸರೀಕರಣಗೊಂಡಿರುವ ಪತ್ರಕರ್ತರ ಸಂಘ ಕೈ ಚಪ್ಪಾಳೆಯೊಂದಿಗೆ ಸ್ವಾಗತಿಸುತ್ತಿದೆ. ದುರಂತವೆಂದರೆ ರಾಜ್ಯಾದ್ಯಂತ ಪತ್ರಕರ್ತರು ಬೀದಿಗಿಳಿದು ಪ್ರತಿಭಟಿಸುತ್ತಿರುವ ಸಂದರ್ಭದಲ್ಲಿಯೇ ಇಲ್ಲಿನ ಪತ್ರಕರ್ತರ ಸಂಘ ಸಭೆ ಸೇರಿತ್ತು. ತಮ್ಮ ಸಭೆಯಲ್ಲಿ ಬಿ.ವಿ.ಸೀತಾರಾಮರ ಬಗ್ಗೆ ಕನಿಷ್ಠ ಅನುಕಂಪವನ್ನು ತೋರಿಸದೆ ಇವರು ಪತ್ರಕರ್ತರ ಸಂಘದಲ್ಲಿ ಸದಸ್ಯತ್ವವನ್ನು ಪಡೆದಿರುವ ಕರಾವಳಿ ಅಲೆಯ ಏಕೈಕ ಪತ್ರಕರ್ತರನ್ನು ಸಂಘದಿಂದ ಕೈಬಿಡಬೇಕು ಎಂದು ಚರ್ಚಿಸಿದರಂತೆ. ಕರಾವಳಿಯ ಕೋಮು ಕದನಗಳಿಗೆ ತುಪ್ಪ ಸುರಿಸುತ್ತಾ ಬಂದಿರುವ, ಚರ್ಚ್ ಮೇಲಿನ ದಾಳಿಗಳ ಸಂದರ್ಭದಲ್ಲಿ ಭಜರಂಗ, ಪೊಲೀಸರ ಜೊತೆ ಸೇರಿ ಕ್ರೈಸ್ತರಿಗೆ ಥಳಿಸಿರುವ ಪತ್ರಕರ್ತರೂ ಇರುವ ಇಲ್ಲಿನ ಪತ್ರಕರ್ತರ ಸಂಘದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಸಂಘದ ಇಂತಹ ವರ್ತನೆಯಿಂದ ಅಸಮಾಧಾನಗೊಂಡಿರುವ ಕೆಲ ಪತ್ರಕರ್ತರು ಪ್ರತ್ಯೇಕವಾಗಿ ಸೇರಿ ಬಿ.ವಿ.ಸೀತಾರಾಮರ ಬಂಧನವನ್ನು ಪ್ರತಿಭಟಿಸಲು ನಿರ್ಧರಿಸಿರುವುದು ಕಾರ್ಗತ್ತಲಲ್ಲಿ ಬೆಳ್ಳಿಕಿರಣ ಮೂಡಿದಂತಾಗಿದೆ.

ಆಶಾದಾಯಕ ಅಂಶ

ಇವೆಲ್ಲದರ ನಡುವೆಯೂ ಆಶಾದಾಯಕ ಬೆಳವಣಿಗೆ ಎಂದರೆ ಈ ವಿಷಯದಲ್ಲಿ ಬಿಜೆಪಿಯೇತರ ರಾಜಕೀಯ ಪಕ್ಷಗಳೆಲ್ಲಾ ಸಿಪಿಎಂ ಪಕ್ಷದ ಮುತುವರ್ಜಿಯಿಂದಾಗಿ ಒಂದೆಡೆ ಸೇರಿ ಪ್ರತಿಭಟನೆಗೆ ಇಳಿದಿರುವುದು. ಕಾಂಗ್ರೆಸ್, ಸಿಪಿಐ(ಎಂ), ಸಿಪಿಐ, ಜನತಾದಳ(ಎಸ್) ಜನತಾದಳ (ಯು) ಎಸ್.ಪಿ, ಬಿಎಸ್‌ಪಿ, ಪಕ್ಷಗಳ ಜಿಲ್ಲಾ ನಾಯಕರು ಜಂಟಿ ಪತ್ರಿಕಾಗೋಷ್ಠಿ ನಡೆಸಿ ಸರಕಾರವನ್ನು ಖಂಡಿಸಿದ್ದು ಮಾತ್ರವಲ್ಲದೆ ಜಿಲ್ಲಾಧಿಕಾರಿ ಕಛೇರಿ ಎದುರು ಬೃಹತ್ ಪ್ರತಿಭಟನೆಗೂ ಒಂದಾಗಿ ನಿರ್ಧರಿಸಿವೆ. ಆ ಮೂಲಕ ಬಿಜೆಪಿಯ ಪ್ರಯೋಗಶಾಲೆಯಲ್ಲಿಯೇ ರಾಜಕೀಯ ಸವಾಲನ್ನು ಎಸೆದಿವೆ. ಇಷ್ಟರವರೆಗೆ ಸಂಘ ಪರಿವಾರದ ಇಂತಹ ದಬ್ಬಾಳಿಕೆಗಳ ಸಂದರ್ಭದಲ್ಲಿ ಕಮ್ಯೂನಿಷ್ಟರನ್ನು ಹೊರತುಪಡಿಸಿ ಬೇರೆಲ್ಲಾ ರಾಜಕೀಯ ಪಕ್ಷಗಳು ಮೌನ ವಹಿಸುತ್ತಿದ್ದವು. ಅದರಲ್ಲಿಯೂ ಕಾಂಗ್ರೆಸ್ಸಿನ ಸೋಗಲಾಡಿತನ, ಜಡತ್ವ, ಬಿಜೆಪಿಯ ಬೆಳವಣಿಗೆಗೆ ವರವಾಗುತ್ತ ಬಂದಿತ್ತು. ಈಗ ಸೀತಾರಾಮರ ವಿಷಯದಲ್ಲಾದರೂ ಈ ಎಲ್ಲಾ ಪಕ್ಷಗಳು ಒಮ್ಮತದಿಂದ ಬಿಜೆಪಿಯ ವಿರುದ್ಧ ಬೀದಿಗಿಳಿದಿರುವುದು ಇಲ್ಲಿನ ಜಾತ್ಯಾತೀತರಿಗೆ ಅಲ್ಪಸಂಖ್ಯಾತರಿಗೆ, ಸಂಘ ಪರಿವಾರದ ಪುಂಡಾಟದಿಂದ ಬೇಸತ್ತವರಿಗೆ ಉತ್ಸಾಹ ಮೂಡಿಸಿದೆ. ಇಷ್ಟೆಲ್ಲಾ ಬೆಳವಣಿಗೆಯ ನಡುವೆಯೂ ಸರ್ವವೂ ಕೋಮುವಾದಿಕರಣಗೊಂಡಿರುವ ಕರಾವಳಿಯ ನೆಲದಲ್ಲಿ ಬಿ.ವಿ.ಸೀತಾರಾಮರು ಗೆಲ್ಲುತ್ತಾರ? ಕನಿಷ್ಟ ಉಳಿಯುತ್ತಾರ? ಉತ್ತರ ಸುಲಭವಿಲ್ಲ. ಎಲ್ಲವೂ ಇಲ್ಲಿನ ಬಿಜೆಪಿಯೇತರ ಜಾತ್ಯಾತೀತ ಶಕ್ತಿಗಳ ಹೋರಾಟ, ಬದ್ಧತೆ, ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಇಲ್ಲಿ ಬಿ.ವಿ.ಸೀ ಗೆದ್ದರೆ ಗೆಲುವು ಅವರದಲ್ಲ, ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳದ್ದು. ಸೋತರೆ....?

■ ಸಂಜಯ

“ಸಂಪಾದಕರಿಗೆ ಕಿರುಕುಳ ನಿಲ್ಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಿ”

ದಿಲ್ಲಿ ಪತ್ರಕರ್ತರ ಸಂಘದ ಆಗ್ರಹ

ಕರ್ನಾಟಕದ 'ಕರಾವಳಿ ಅಲೆ' ದೈನಿಕದ ಸಂಪಾದಕ ಬಿ.ವಿ.ಸೀತಾರಾಮ್‌ರವರ ಬಂಧನವನ್ನು ಖಂಡಿಸಿರುವ ದಿಲ್ಲಿ ಪತ್ರಕರ್ತರ ಸಂಘ ಅವರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಿ ಎಂದು ಕರ್ನಾಟಕ ಸರಕಾರವನ್ನು ಆಗ್ರಹಿಸಿದೆ. ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ಸಂಘದ ಸದಸ್ಯರು ಕರಾಳ ದಿನ ಆಚರಿಸುವುದಾಗಿ ಅದು ಹೇಳಿದೆ.

ಸಂಘದ ಅಧ್ಯಕ್ಷರಾದ ಎಸ್.ಕೆ.ಪಾಂಡೆ ಮತ್ತು ಸಂಘದ ಮಾಧ್ಯಮ ನೈತಿಕ ಮಂಡಳಿ ನೀಡಿರುವ ಹೇಳಿಕೆ “ಒಬ್ಬ ಹಿರಿಯ ಪತ್ರಕರ್ತ ಮತ್ತು ಸಂಪಾದಕರನ್ನು ಒಂದು ಮಾನನಷ್ಟ ಮೊಕದ್ದಮೆಯಲ್ಲಿ ಕೈಕೋಳ ಹಾಕಿ ಕೋರ್ಟಿಗೆ ಕರೆತರುವುದು ಇನ್ನಷ್ಟು ಆಘಾತಕಾರಿ. ಈ ಬಗ್ಗೆ ಮಾಹಿತಿ ಪಡೆಯುವ ಹಕ್ಕು ನಮಗಿದೆ ಹಾಗೂ ಇದರಲ್ಲಿ ಶಾಮೀಲಾದ ಪೋಲೀಸ್ ಮತ್ತು ಇತರ ಉನ್ನತ ಅಧಿಕಾರಿಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತೇವೆ. ಸುಪ್ರೀಂ ಕೋರ್ಟ್ ಮಾರ್ಗನಿರ್ದೇಶನಗಳನ್ನು ಉಲ್ಲಂಘಿಸಿದ್ದರೆ ಪೋಲೀಸರೂ ಸೇರಿದಂತೆ ಎಲ್ಲರೂ ನಿಂದನೆಯನ್ನು ಎದುರಿಸಬೇಕಾಗುತ್ತದೆ” ಎಂದು ತಿಳಿಸಿದೆ.

ಮೊನ್ನೆ, ಮೊನ್ನೆ ಪಶ್ಚಿಮ ಬಂಗಾಳದ ಸಿಪಿಐ(ಎಂ) ನ ಹೂಗ್ಲಿ ಜಿಲ್ಲಾ ಸಮಿತಿ ಸದಸ್ಯ ಸುಹೃದ್ ದತ್ತಾ - ಸಿಂಗೂರಿನ ಯುವತಿ ಕೊಲೆಯ ಅಪರಾಧಿ ಅಂತ ಒಂದು ತೀರ್ಪು ಬಂದಿತ್ತು. ಈ ಪ್ರಕರಣವನ್ನು ತನಿಖೆ ಮಾಡಿದ ಸಿಬಿಐ ಅಧಿಕಾರಿಗಳಿಬ್ಬರು ಜನರನ್ನು ಕೊಲೆ ಕೇಸಿನಲ್ಲಿ ಸಿಲುಕಿಸುವುದಾಗಿ ಹೆದರಿಸಿ ದುಡ್ಡು ಕೀಳುವಾಗ ಸಿಕ್ಕಿಬಿದ್ದು ಅಮಾನತ್ ಆಗಿದ್ದಾರೆ. ಇದರ ಅರ್ಥವೇನು? ಓದಿ

ಸಿಬಿಐಗೆ ಏನಾಗಿದೆ?

ಕೊಲ್ಕತಾದಲ್ಲಿ ಲಂಚದ ಆರೋಪದಲ್ಲಿ ಇನ್ನೊಬ್ಬ ಸಿಬಿಐ ಉನ್ನತ ಅಧಿಕಾರಿಯ ಬಂಧನ ಮತ್ತು ದಿಲ್ಲಿಯಲ್ಲಿ ಅದರ ರಾಜಕೀಯ ಬಳಕೆಯ ಅನುಮಾನದ ಹಿನ್ನೆಲೆಯಲ್ಲಿ ಸಿಬಿಐಗೆ ಏನಾಗಿದೆ ಎಂಬ ಈ ಪ್ರಶ್ನೆ ಎದ್ದಿದೆ.

ಪಾರ್ಥಸಾರಥಿ ಬೋಸ್ ಎಂಬಾತ ಕೊಲ್ಕತಾದಲ್ಲಿ ಸಿಬಿಐ ನ ಸ್ಪೆಶಲ್ ಕ್ರೈಮ್ ಬ್ರಾಂಚಿನ ಡಿಎಸ್‌ಪಿ. ಈತನನ್ನು ಡಿಸೆಂಬರ್ 28 ರಂದು ಬಂಧಿಸಲಾಗಿದೆ. ಆತನ ಮೇಲಿನ ಆರೋಪ-ಒಬ್ಬ ಟ್ರಕ್ ಡ್ರೈವರನ್ನು ಕೊಲೆ ಕೇಸಿನಲ್ಲಿ ಸಿಕ್ಕಿಹಾಕಿಸುತ್ತೇನೆ ಎಂದು ಬೆದರಿಸಿ 50000 ರೂ. ಲಂಚ ಕಿತ್ತದ್ದು. ಆತ ಲಂಚ ತೆಗೆದು ಕೊಳ್ಳುವಾಗಲೇ ಸಿಕ್ಕಿಹಾಕಿಕೊಂಡ. ಸಿಬಿಐ ನಂತಹ ಸಂಸ್ಥೆಯ ಒಬ್ಬ ಉನ್ನತ ಅಧಿಕಾರಿ ಇಂತಹ ಕೃತ್ಯಕ್ಕಿಳಿದಿರುವುದು ವ್ಯಾಪಕ ಆತಂಕ ಉಂಟುಮಾಡಿದೆ.

ನಮ್ಮ ಓದುಗರಿಗೆ ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ತೃಣಮೂಲ ಕಾಂಗ್ರೆಸಿಗರು ಹಿಂಸಾಚಾರ ನಡೆಸುತ್ತಿದ್ದಾಗ ನಡೆದ ತಾಪಸಿ ಮಲಿಕ್ ಎಂಬ ಬಾಲಕಿಯ ಹತ್ಯೆ ಮತ್ತು ಕೊಲ್ಕತಾದ ರಿಜ್ವಾನೂರ್ ರಹಮಾನ್ ಆತ್ಮಹತ್ಯೆ ಕೇಸಿನ ಬಗ್ಗೆ ತಿಳಿದಿದೆ. ಈ ಎರಡೂ ಕೇಸುಗಳಲ್ಲಿ ಈತನೇ ತನಿಖಾ ಅಧಿಕಾರಿ. ತಾಪಸಿ ಮಲಿಕ್ ಕೊಲೆ ಕೇಸಿನಲ್ಲಿ ಅಲ್ಲಿನ ಹಿರಿಯ ಸಿಪಿಐ(ಎಂ) ಮುಖಂಡ ಸುಹೃದ್ ದತ್ತರನ್ನು ಬಂಧಿಸಿ ಈತನೇ ತನಿಖೆ ನಡೆಸಿ ಆರೋಪ ಪಟ್ಟಿ ಹಾಕಿದ್ದ. ಅವರಿಗೆ ನಂತರ ಶಿಕ್ಷೆಯಾಗಿದೆ. ಆದರೆ ಅವರನ್ನು ಇದರಲ್ಲಿ ಸಿಲುಕಿಸಲಾಗಿದೆ ಎಂಬ ಅನುಮಾನ ಬಲವಾಗಿದೆ. ರಿಜ್ವಾನೂರ್ ಕೇಸಿನಲ್ಲಿ ಆತನ ಆತ್ಮಹತ್ಯಾ ಪತ್ರದಲ್ಲಿ ಒಬ್ಬ ತೃಣಮೂಲ ಶಾಸಕನ ಹೆಸರು ಪ್ರಸ್ತಾಪಿಸಲಾಗಿದ್ದರೂ ಈ ತನಿಖಾ ಅಧಿಕಾರಿ ಅದನ್ನು ಗಮನಕ್ಕೆ ತಗೊಳ್ಳಲಿಲ್ಲ ಎಂಬ ಆರೋಪವೂ ಇದೆ.

ಇಷ್ಟೇ ಅಲ್ಲ, ಅಗಸ್ಟ್ 2007ರಲ್ಲಿ ಇನ್ನೊಬ್ಬ ಸಿಬಿಐ ಅಧಿಕಾರಿ ಎ.ಕೆ,ಸಹಾಯ್ ನ್ನು ಬಲವಂತದ ವಸೂಲಿ ಮತ್ತು ಆದಾಯವನ್ನು ಮೀರಿದ ಸಂಪತ್ತು ಹೊಂದಿರುವ ಆರೋಪದ ಮೇಲೆ ಬಂಧಿಸಲಾಗಿತ್ತು. ಈತ ಪೋಲೀಸ್ ಸೂಪರಿಂಟೆಂಡೆಂಟ್, ಈ ಎರಡೂ ತನಿಖೆಗಳು ಆತನ ಉಸ್ತುವಾರಿಯಲ್ಲಿಯೇ ನಡೆದದ್ದು!

ಈ ಹಿನ್ನೆಲೆಯಲ್ಲಿ ಸಿಬಿಐಗೆ ಏನಾಗಿದೆ ಎಂಬ ಪ್ರಶ್ನೆ ನಾಗರಿಕರನ್ನು ಕಾಡುತ್ತಿದೆ. ಈ ಅಲ್ಪಾವಧಿಯಲ್ಲಿಯೇ ಇಬ್ಬರು ಉನ್ನತ ಸಿಬಿಐ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಮತ್ತು ಜನಗಳನ್ನು ಬೆದರಿಸಿ ಸಿಕ್ಕಿಹಾಕಿಸುವ ಆರೋಪಗಳು ಬಂದಿರುವುದು ಈ ಕೇಂದ್ರ ತನಿಖಾ ಸಂಸ್ಥೆಯ ವಿಶ್ವಾಸಾರ್ಹತೆಯ ಮುಂದೆ ಪ್ರಶ್ನೆಚಿಹ್ನೆಯಿಟ್ಟಿದೆ.

ಎಡಪಕ್ಷಗಳ ಸಂಸದರ ಒಂದು ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಕೊಲ್ಕತಾದಲ್ಲಿ ಸಿಬಿಐನ ಈ ಪರಿಸ್ಥಿತಿಯತ್ತ ಗಮನ ಸೆಳೆದು ಪಾರ್ಥಸಾರಥಿ ಬೋಸ್ ವಿರುದ್ಧ ಭ್ರಷ್ಟಾಚಾರದ ಆರೋಪದ ಬೆಳಕಿನಲ್ಲಿ ಈ ಕೇಸುಗಳ ಮರು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಸಿಬಿಐ ನ್ನು ಕೇಂದ್ರದಲ್ಲಿ ಆಳುವ ಸರಕಾರ ರಾಜಕೀಯ ಉದ್ದೇಶಗಳಿಗೆ ಬಳಸುತ್ತದೆ ಎಂಬ ಅನುಮಾನ ಅದರ ವಿಶ್ವಾಸಾರ್ಹತೆಗೆ ಇನ್ನಷ್ಟು ಕುಂದು ತಂದಿದೆ. ಇತ್ತೀಚೆಗೆ ಸಿಬಿಐ ವಕೀಲರು ಸುಪ್ರಿಂ ಕೋರ್ಟಿನಲ್ಲಿ ಈ ಹಿಂದೆ ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್ ಮೇಲೆ ಹಾಕಿದ್ದ ಕೇಸನ್ನು ಹಿಂದಕ್ಕೆ ಪಡೆಯುವ ಅರ್ಜಿ ಹಾಕಿದರು. ಅವರು ಮತ್ತು ಅವರ ಕುಟುಂಬದವರು ಆದಾಯಕ್ಕೆ ಮೀರಿದ ಆಸ್ತಿ ಹೊಂದಿದ್ದಾರೆಂಬ ಆಪಾದನೆಯಿದ್ದ ಕೇಸು ಅದು. ಆ ಕೇಸನ್ನು ಹಾಕಿದ್ದ ಸಂದರ್ಭವೇ ವಿವಾದಕ್ಕೆ ಎಡೆ ಮಾಡಿಕೊಟ್ಟಿತ್ತು. ಈಗ ಅವರು ಕಾಂಗ್ರೆಸ್ ಜತೆಗೂಡಿದ್ದರಿಂದ ಅದನ್ನು ಮುಂದುವರೆಸುವ ಅಗತ್ಯವಿಲ್ಲ ಎಂದು ಭಾವಿಸಿದಂತಿದೆ ಹಾಗೂ ಸಿಬಿಐ ಅದರ ಇಚ್ಛೆಯನ್ನು ಪೂರೈಸುತ್ತಿದೆ ಎಂಬ ಸಂದೇಹ ಸಹಜವಾಗಿಯೇ ಮೂಡಿದೆ.

ಸಿಬಿಐ ಯನ್ನು ಬಹಿರಂಗವಾಗಿಯೇ ಒಂದು ರಾಜಕೀಯ ಸಾಧನವಾಗಿ ಬಳಸುವುದು, ಭ್ರಷ್ಟಾಚಾರವೆಂಬುದನ್ನು ಒಂದು ರಾಜಕೀಯ ಫುಟ್ ಬಾಲಿನ ವಿಷಯವಾಗಿ ಮಾಡುವುದು ಈ ಕೇಂದ್ರೀಯ ತನಿಖಾ ಸಂಸ್ಥೆಯನ್ನು ಬುಡಮೇಲು ಮಾಡುತ್ತಿದೆಯೇ? ಬಹುಶಃ ಈ ಬಗ್ಗೆಯೇ ಒಂದು ಗಂಭೀರ ತನಿಖೆಯಾಗಬೇಕಾಗಿದೆ.

ಸದ್ಯಕ್ಕಂತೂ ಕೊಲ್ಕತದಲ್ಲಿನ ಭ್ರಷ್ಟಾಚಾರದ ಪ್ರಕರಣ ಮತ್ತು ದಿಲ್ಲಿಯಲ್ಲಿನ ರಾಜಕೀಯ ಬಳಕೆ ಸಿಬಿಐನ ವಿಶ್ವಾಸಾರ್ಹತೆಗೆ ಕುಂದು ತಂದಿದೆ ಯೆಂಬುದಂತೂ ನಿಜ. ○

800 ಕೇಂದ್ರಗಳಲ್ಲಿ ತಮಿಳುನಾಡು ರೈತರ ಉಪವಾಸ ಮುಷ್ಕರ

ಜನವರಿ 2 ರಂದು ತಮಿಳುನಾಡಿನ ಐದು ಕರಾವಳಿ ಜಿಲ್ಲೆಗಳ 800 ಕೇಂದ್ರಗಳಲ್ಲಿ ಲಕ್ಷಾಂತರ ರೈತರು ಉಪವಾಸ ಮುಷ್ಕರದಲ್ಲಿ ಭಾಗವಹಿಸಿದರು. ಎಡಪಂಥೀಯ ರೈತ ಸಂಘಟನೆಗಳು ಈ ಮುಷ್ಕರಕ್ಕೆ ಕರೆ ನೀಡಿದ್ದವು.

ಕಳೆದ ನವಂಬರ್, ಡಿಸೆಂಬರ್ ತಿಂಗಳಲ್ಲಿ ಕಾವೇರಿ ಮುಖಜ ಪ್ರದೇಶದಲ್ಲಿ ಪ್ರವಾಹದಿಂದ ಬಹಳ ತೊಂದರೆಗಳಾದವು. ಲಕ್ಷಾಂತರ ರೈತರು ತಮ್ಮ ಬೆಳೆಗಳನ್ನು ಕಳಕೊಂಡರು, ಮನೆಮಾರುಗಳನ್ನೂ ಕಳಕೊಂಡರು. ಕಳೆದ ಒಂದು ತಿಂಗಳಿಂದ ಅವರು ಸಾಕಷ್ಟು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಚಳುವಳಿ ನಡೆಯುತ್ತಿದೆ. 1. ಇತ್ತೀಚಿನ ಪ್ರವಾಹ ಪರಿಸ್ಥಿತಿಯನ್ನು ಒಂದು ರಾಷ್ಟ್ರೀಯ ಅನಾಹುತ ಎಂದು ಪ್ರಕಟಿಸಬೇಕು, 2. ಇದು ತಟ್ಟಿರುವ ರೈತರಿಗೆ ಎಕ್ರೆಗೆ 15 ಸಾವಿರ ರೂ.ಗಳಂತೆ ಪರಿಹಾರ ಕೊಡಬೇಕು, 3. ಹಾನಿಗೊಳಗಾದ ಮನೆಗಳನ್ನು ಮತ್ತೆ ಕಟ್ಟಬೇಕು ಹಾಗೂ 4. ನೀರು ಮಾರ್ಗಗಳಲ್ಲಿ ಹೂಳೆತ್ತುವ ದೀರ್ಘಕಾಲದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಇವು ಈ ಚಳುವಳಿಯ ಬೇಡಿಕೆಗಳಾಗಿವೆ.

ರೈತರು ಸ್ವಯಂಸ್ಫೂರ್ತಿಯಿಂದ ಮುಷ್ಕರದಲ್ಲಿ ಭಾಗವಹಿಸಿದರು. ಕೇವಲ ತಿರುವಾರೂರು ಜಿಲ್ಲೆಯಲ್ಲಿಯೇ 500 ಕೇಂದ್ರಗಳಲ್ಲಿ ಉಪವಾಸ ಮುಷ್ಕರ ನಡೆಯಿತು. ನಾಗಪಟ್ಟಣಂ ಜಿಲ್ಲೆಯಲ್ಲಿ 174 ಕೇಂದ್ರಗಳಲ್ಲಿ, ತಂಜಾವೂರು ಜಿಲ್ಲೆಯಲ್ಲಿ 22 ಕೇಂದ್ರಗಳಲ್ಲಿ ಮತ್ತು ಕಡಲೂರು ಹಾಗೂ ಪುದುಕೊಟ್ಟೈ ಜಿಲ್ಲೆಗಳ ಹಲವೆಡೆ ಉಪವಾಸ ಮುಷ್ಕರಗಳು ನಡೆದವು.

ರೈತ ಮುಖಂಡರಾದ ಕೆ ಬಾಲಕೃಷ್ಣನ್, ಎಸ್. ತಿರುನಾವಕ್ಕರಸು ಮತ್ತು ಆರ್. ಮುತ್ತರಸನ್, ಸಿಪಿಐ(ಎಂ) ಶಾಸಕ ವಿ. ಮಾರಿಮುತ್ತು, ಸಿಪಿಐ ಶಾಸಕರಾದ ಕೆ, ಉಳಗನಾಥನ್, ವಿ. ಶಿವಪುನ್ನಿಯಂ ಮತ್ತಿತರ ಮುಖಂಡರು ವಿವಿಧ ಸ್ಥಳಗಳಲ್ಲಿ ಉಪವಾಸ ಮುಷ್ಕರದಲ್ಲಿ ಭಾಗವಹಿಸಿದರು. ○



ಭಯೋತ್ಪಾದನೆಯ ವಿರುದ್ಧ ಕಾನೂನು ಮತ್ತು ಬಿಜೆಪಿಯ ಗೋಸುಂಬೆತನ

ಪಾರ್ಲಿಮೆಂಟಿನಲ್ಲಿ ಕೈ ಎತ್ತಿದವರು ಇಲ್ಲೇಕೆ ಗೊಣಗಿದರು?

ಮುಂಬೈ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಸಂಸತ್ತಿನಲ್ಲಿ ಇತ್ತೀಚೆಗೆ ಎರಡು ಮಸೂದೆಗಳ ಮೇಲೆ ಚರ್ಚೆಗಳು ನಡೆದು ಅವು ಕಾನೂನುಗಳಾದವು. ಅವುಗಳಲ್ಲಿ ಒಂದು, ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯನ್ನು ನಿರ್ಮಿಸುವ ಬಗ್ಗೆ ಹಾಗೂ ಇನ್ನೊಂದು, ಕಾನೂನುಬಾಹಿರ ಚಟುವಟಿಕೆಗಳು(ತಡೆ) ಶಾಸನಕ್ಕೆ ತಿದ್ದುಪಡಿಗಳು.

ಅಖಿಲ ಭಾರತ ವ್ಯಾಪ್ತಿಯಿರುವ ಒಂದು ತನಿಖಾ ಸಂಸ್ಥೆಯ ಅಗತ್ಯ ಇದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಗುರಿಯನ್ನು ಈಡೇರಿಸುವಾಗಲೇ, ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಬಾರದು, ಆಮೂಲಕ ನಮ್ಮ ಸಂವಿಧಾನದ ಒಕ್ಕೂಟ ರಚನೆಯನ್ನು ಉಲ್ಲಂಘಿಸಬಾರದು ಎಂಬ ಗುರಿಯನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ, ಕಾನೂನು-ವ್ಯವಸ್ಥೆ ನಮ್ಮ ಸಂವಿಧಾನದ ಪ್ರಕಾರ ರಾಜ್ಯಪಟ್ಟಿಗೆ ಸೇರಿರುವುದರಿಂದ ಎನ್‌ಐಎ ಕೈಗೊಳ್ಳುವ ಯಾವುದೇ ತನಿಖೆಯಲ್ಲಿ ರಾಜ್ಯ ಸರಕಾರಗಳನ್ನು ಒಳಗೊಳ್ಳುವುದು ಅಗತ್ಯವಾಗುತ್ತದೆ. ಈ ಸಂಸ್ಥೆಯನ್ನು ಸ್ಥಾಪಿಸುವ ಶಾಸನದಲ್ಲಿ ಅದರ ವ್ಯಾಪ್ತಿಯೊಳಗೆ ಬರುವ ಎಂಟು ಶಾಸನಗಳನ್ನು ಪಟ್ಟಿ ಮಾಡಲಾಗಿದೆ. ಈ ಯಾವುದೇ ಶಾಸನದ ಅಡಿಯಲ್ಲಿ ಅಪರಾಧ ಎಸಗಿದರೆ, ಎನ್‌ಐಎ ಅಗತ್ಯವೆನಿಸಿದರೆ, ಸ್ವಯಂಪ್ರೇರಣೆಯಿಂದಲೇ ಅದರ ತನಿಖೆಯನ್ನು ಕೈಗೆತ್ತಿಕೊಳ್ಳಬಹುದು ಎಂದು ಹೇಳಲಾಗಿದೆ. ಅಂದರೆ ರಾಜ್ಯ ಸರಕಾರಗಳನ್ನು ಜತೆ ಸೇರಿಸಿಕೊಳ್ಳುವುದು ಅದರ ಮರ್ಜಿಗೇ ಬಿಟ್ಟಿದ್ದು ಎಂದಾಗುತ್ತದೆ. ಇದನ್ನು ಮುಂದೊಮ್ಮೆ ಕೇಂದ್ರ ಸರಕಾರ ದುರುಪಯೋಗ ಪಡಿಸಿಕೊಳ್ಳುವ, ರಾಜ್ಯ ಸರಕಾರವನ್ನು ಬದಿಗೊತ್ತಿ ಸ್ವತಂತ್ರ ಕಾರ್ಯಾಚರಣೆಗಿಳಿಯುವ ಸಾಧ್ಯತೆಯಿದೆ ಎಂದು ಚರ್ಚೆಯ ವೇಳೆಯಲ್ಲಿ ಎಡಪಕ್ಷಗಳ ಸದಸ್ಯರು ಹೇಳಿದರು.

ಇಂತಹ ದುರುಪಯೋಗದ ಸಾಧ್ಯತೆಯನ್ನು ತಡೆಯಲು, ಸಿಪಿಐ(ಎಂ) ಈ ಪಟ್ಟಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ತಿದ್ದುಪಡಿಗಳನ್ನು ಸೂಚಿಸಿತು. ಇದನ್ನು ಎರಡು ಪಟ್ಟಿಗಳಾಗಿ ಮಾಡಬೇಕು-ಪಟ್ಟಿ ಒಂದರಲ್ಲಿ ಕೇಂದ್ರ ಸರಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಆರು ಶಾಸನಗಳು, ಅಣುಶಕ್ತಿ ಶಾಸನ, ವಿಮಾನಾಪಹರಣ-ನಿರೋಧಕ ಶಾಸನ, ಸಮುದ್ರಯಾನ ಶಾಸನ ಇತ್ಯಾದಿಯನ್ನು ಪಟ್ಟಿ ಮಾಡಬೇಕು, ರಾಜ್ಯ ಸರಕಾರದ ಅಧಿಕಾರ

ಪುಟ 11ಕ್ಕೆ

ತಮ್ಮ ಮೇಲೆ ಹೇರಲಾಗಿರುವ ಅಮಾನವೀಯ ಶೋಷಣೆ, ಒತ್ತಡ, ಕಿರುಕುಳಗಳ ವಿರುದ್ಧ ಪ್ರಜಾಪ್ರಭುತ್ವ ಹಕ್ಕುಗಳ ದಮನದ ವಿರುದ್ಧ ಸಾರಿಗೆ ನೌಕರರು ಹೋರಾಟದ ಹಾದಿ ಹಿಡಿದಿದ್ದಾರೆ. ಎಂಟು ಕಾರ್ಮಿಕ ಸಂಘಗಳ ಜಂಟಿ ಐಕ್ಯತಾ ವೇದಿಕೆಯ ನೇತೃತ್ವದಲ್ಲಿ ಜನವರಿ 19 ರಿಂದ ಅನಿರ್ದಿಷ್ಟ ಮುಷ್ಕರ ನಡೆಸಲು ಸರ್ವಸಿದ್ಧತೆ ನಡೆಯುತ್ತಿದೆ. ಸರ್ಕಾರ ಬೆದರಿಕೆ ತಂತ್ರಕ್ಕಿಳಿದಿದೆ. ನೌಕರರು ಬೆದರೆವು ಎಂದಿದ್ದಾರೆ.

ನಿರ್ದಯ ಶೋಷಣೆ, ಪ್ರಜಾಪ್ರಭುತ್ವ ಹಕ್ಕುಗಳ ದಮನದ ವಿರುದ್ಧ

ಹೋರಾಟದ ಕಣಕ್ಕೆ ಸಾರಿಗೆ ನೌಕರರು

ಜನವರಿ 19 ರಿಂದ ಅನಿರ್ದಿಷ್ಟಾವಧಿ ಮುಷ್ಕರ – ಜ. 13 ಸೌಹಾರ್ದ ಬೆಂಬಲ

ರಾಮಕೃಷ್ಣ.ಆರ್

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್‌ಟಿಸಿ) ಸಂಸ್ಥೆಗಳು ಸಾಕಷ್ಟು ಲಾಭದಲ್ಲಿ ನಡೆಯುತ್ತಿವೆ ಎಂಬುದು ಈಗಾಗಲೇ ಸಾಕಷ್ಟು ಜನಜನಿತವಾದ ವಿಚಾರ.

ಬೆಂಗಳೂರಿನ ರಸ್ತೆಗಳಲ್ಲಿ ಥಳಥಳಿಸುತ್ತಾ ಸಂಚರಿಸುತ್ತಿರುವ ಕೆಂಪಾನೆ ಕೆಂಪಿನ ವೋಲ್ವೋ (ವಜ್ರ) ಬಸ್ಸು ಹಾಗೂ ಈಗೀಗ ಎಲ್ಲೆಂದರಲ್ಲಿ ಎಡತಾಕುತ್ತಿರುವ ಸುವರ್ಣ ಬಸ್‌ಗಳನ್ನು ನೋಡಿದಾಗ ಈ ಸಾರ್ವಜನಿಕ ಸಂಸ್ಥೆಗಳ ಸೇವೆಯೂ ತುಂಬಾ ಚೆನ್ನಾಗಿದೆ ಅಂತ ಜೇಬು ಭದ್ರವಾಗಿರುವ ಜನವರ್ಗಗಳಿಗೆ ಅನಿಸಬಹುದು.

ಪೂರ್ವಪರ ತಿಳಿಯದೇ ದೇಶದ ಎಷ್ಟೋ ನಗರ ಮತ್ತು ರಾಜ್ಯಗಳ ಸಾರ್ವಜನಿಕ ಸಾರಿಗೆ ಸಂಸ್ಥೆಗಳು ಅಷ್ಟು ಲಾಭದಾಯಕವಾಗಿ ನಡೆಯುತ್ತಿಲ್ಲ ಎಂಬ ಅಂಶವನ್ನು ಗಮನಿಸಿದವರು ನಮ್ಮ ಈ ಸಾರಿಗೆ ಸಂಸ್ಥೆಗಳ ದಕ್ಷತೆಯನ್ನು ಕಂಡು ವಿಸ್ಮಯವನ್ನು ಪಡೆಯಬಹುದೇನೋ. ಆದರೆ ಈ ವಿಸ್ಮಯಕಾರಿ ಲಾಭದ ಮೂಲ ಏನು ಎಂಬುದನ್ನು ಗಮನಿಸಿದವರಿಗೆ ಮಾತ್ರ ಆಘಾತವಾಗದಿರದು.

ಕಾರ್ಮಿಕರ ನಿರ್ದಯ ಶೋಷಣೆ

ರಾಜ್ಯದ ನಾಲ್ಕು ಸಾರ್ವಜನಿಕ ಸಾರಿಗೆ ಸಂಸ್ಥೆಗಳಾದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಎನ್‌ಇಕೆಆರ್‌ಸಿ, ಇರುವ 98412 ನೌಕರರು ಹಾಗೂ ಒಟ್ಟು 30,000 ದಷ್ಟು ಅಗಾಧ ಪ್ರಮಾಣದಲ್ಲಿರುವ ಟ್ರೈನಿಗಳ (ತರಬೇತಿ ಅಭ್ಯರ್ಥಿ) ನಿರ್ದಯ ಶೋಷಣೆಯೇ ಸಾರಿಗೆ ಸಂಸ್ಥೆಗಳ ಲಾಭದ ಪ್ರಮುಖ ಆಧಾರವಾಗಿದೆ. ಇದರ ಜೊತೆಗೆ ಬಹುತೇಕ ದೇಶದಲ್ಲಿ ಎಲ್ಲೂ ಇಲ್ಲದ ದುಬಾರಿ ಸಾರಿಗೆ ದರ ಈ ಸಂಸ್ಥೆಯ ಲಾಭದ ಮತ್ತೊಂದು ಮೂಲ.

ಬಟ್ಟೆಯನ್ನು ಹಿಂಡಿ ಬಕೆಟ್‌ಗೆ ನೀರು ಬಸಿಯುವಂತೆ ಸಾರಿಗೆ ಸಂಸ್ಥೆಗಳು ಕಾರ್ಮಿಕರ ಜೀವವನ್ನು ಹಿಂಡಿ ಸಂಸ್ಥೆಯ ಖಜಾನೆಗೆ ಲಾಭವನ್ನು ಬಸಿದುಕೊಳ್ಳುತ್ತಿವೆ.

ಕೆಲಸದ ಭಾರಿ ಒತ್ತಡ

ಸಾರಿಗೆ ಸಂಸ್ಥೆಯ ನೌಕರರು ತೀವ್ರ ಕೆಲಸದ ಒತ್ತಡ ಅನುಭವಿಸುತ್ತಿದ್ದಾರೆ. ಹದಗೆಟ್ಟ ರಸ್ತೆಗಳು ಸಂಚಾರ ದಟ್ಟಣೆ ಮುಂತಾದವುಗಳ ನಡುವೆ ಡ್ರೈವರ್, ಬಸ್ ಓಡಿಸುವುದಾಗಲೀ, ವಿಪರೀತ ಜನಸಂದಣಿ ಟ್ರಾಫಿಕ್ ಜಾಮ್‌ಗಳ ನಡುವೆ ಟಿಕೆಟ್ ಹಂಚುವ ಕಂಡಕ್ಟರ್ ಕೆಲಸವಾಗಲಿ ಅಷ್ಟು ಸುಲಭವಾದದ್ದಲ್ಲ. ತಮ್ಮ ನಿಯಮಿತವಾದ 8 ಗಂಟೆಗಳ ಕೆಲಸಕ್ಕೇ ಕಂಡಕ್ಟರ್, ಡ್ರೈವರ್‌ಗಳು ಹಣ್ಣು ಗಾಯಿ ನೀರುಗಾಯಿ ಆಗಿರುತ್ತಾರೆ.



ಆದರೆ ರೀ ಬುಕ್ಕಿಂಗ್ ಹೆಸರಿನಲ್ಲಿ ಕಂಡಕ್ಟರ್, ಡ್ರೈವರ್‌ಗಳು ಒಂದು ಪಾಳಿ ಮುಗಿಸಿದ ಮೇಲೆ ಹಿಂದೆಯೇ ಮತ್ತೊಂದು ಪಾಳಿಯ ಕೆಲಸಕ್ಕೆ ಅವರನ್ನು ಅಟ್ಟಲಾಗುತ್ತದೆ. ಇಂತಹ ಹೆಚ್ಚುವರಿ ಕೆಲಸಕ್ಕೆ ಚಾಲಕ ನಿರ್ವಾಹಕರು ದೈಹಿಕ, ಮಾನಸಿಕವಾಗಿ ಸಿದ್ಧರಿದ್ದಾರೆಯೇ? ಅದಕ್ಕೆ ಅವರ ಒಪ್ಪಿಗೆ ಇದೆಯೇ? ಇದನ್ನೆಲ್ಲಾ ಪರಿಶೀಲಿಸುವ ಪ್ರಶ್ನೆಯೇ ಇಲ್ಲ. ಎಲ್ಲವೂ ಏಕಪಕ್ಷೀಯ. ಎಷ್ಟೇ ದುಡಿದ ಕೆಲಸ ಅವಧಿ ಸರಿಯಾಗಿ ದಾಖಲಾಗುವುದೇ ಇಲ್ಲ. ಮಾಡಿದ ಕೆಲಸಕ್ಕಿಂತ ಕಮ್ಮಿ ಕೆಲಸ ತೋರಿಸಿ ಕೂಲಿ ಕದಿಯುವ ಕೆಲಸ ನಿರಂತರ ಸಾಗಿದೆ.

ಸತತ ಮೂರು ಶಿಫ್ಟ್ ಕೆಲಸವೂ ಇದೆ :

ಸತತ ಎರಡು ಶಿಫ್ಟ್ (ಪಾಳಿ) ಮಾತ್ರವಲ್ಲ; ಮೂರು ಶಿಫ್ಟ್‌ಗಳನ್ನು ನೌಕರರು ಬಾಯಿ ಮುಚ್ಚಿಕೊಂಡು ಮಾಡಬೇಕಾದ ಪರಿಸ್ಥಿತಿ ಇದೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿಯವರೆಗೆ ಕೆಲಸ ಮಾಡಿ, ರಾತ್ರಿ ಕೆಲಸದ ಭಾಗವಾಗಿ ಕಂಡಕ್ಟರ್, ಡ್ರೈವರ್‌ಗಳು ರಾತ್ರಿ ಬಸ್ ನಲ್ಲಿಯೇ ಮಲಗಿ ಮತ್ತೆ ಬೆಳಿಗ್ಗೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಕೆಲಸ ಮಾಡಬೇಕಾದ ಕ್ರಮ ಇಲ್ಲಿ ಮಾಮೂಲಿ. ಇದು ಎರಡು ಶಿಫ್ಟ್‌ನ ಕೆಲಸ. ಈ ರೀತಿ ಎರಡು ಶಿಫ್ಟ್‌ನ ಕೆಲಸ ಮುಗಿದ ಮೇಲೆ ಎಷ್ಟೋ ಸಾರಿ ಕಂಡಕ್ಟರ್ ಡ್ರೈವರ್‌ಗಳು ಮತ್ತೆ ಹಿಂದೆಯೇ ಮೂರನೇ ಶಿಫ್ಟ್ ಕೆಲಸ ಮಾಡಬೇಕಾಗುತ್ತದೆ. ಅಂದರೆ ಸತತ ಮೂರು ಶಿಫ್ಟ್‌ಗಳ ಕೆಲಸ ಮಾಡಬೇಕಾದ ಪರಿಸ್ಥಿತಿಯೂ ಸಾರಿಗೆ ಸಂಸ್ಥೆಯಲ್ಲಿ ನೌಕರರು ಅನುಭವಿಸುತ್ತಿರುವ ಕೆಲಸದ ಒತ್ತಡಕ್ಕೆ ಸಾಕ್ಷಿಯಾಗಿದೆ.

ಖಾಯಂ ನೌಕರರೇ ಇರಲಿ, ಟ್ರೈನಿಗಳೇ ಇರಲಿ 6 ರಿಂದ 7 ಗಂಟೆ ಹೆಚ್ಚುವರಿ ಕೆಲಸ ಮಾಡಿದರೂ ಅದಕ್ಕೆ 3 ಗಂಟೆ ದಾಖಲಿಸಿಕೊಳ್ಳುವ ಸಮಸ್ಯೆ ಮಾತ್ರ ಸಾಮಾನ್ಯ

ಟ್ರೈನಿಗಳ ಶೋಷಣೆ, ಸುಲಿಗೆಯ ವಿರಾಟ್ ರೂಪ

ಸುಮ್ಮನೆ ನೌಕರರ ಸಂಖ್ಯೆ ಹಾಗೂ ತರಬೇತಿ ಅಭ್ಯರ್ಥಿ(ಟ್ರೈನಿ)ಗಳ ಸಂಖ್ಯೆಯ ಮೇಲೊಮ್ಮೆ ಕಣ್ಣಾಡಿಸಿ. ಕೆಎಸ್‌ಆರ್‌ಟಿಸಿ 6,600, ಬಿಎಂಟಿಸಿ 5,187, ಎನ್‌ಡಬ್ಲ್ಯುಕೆಆರ್‌ಟಿಸಿ 4,837 ಎನ್‌ಇಕೆಆರ್‌ಟಿಸಿ 4,000 ನೌಕರರು. ಆದರೆ ಈ ಸಂಸ್ಥೆಗಳಲ್ಲಿ ಒಟ್ಟಾರೆ ಟ್ರೈನಿಗಳಾಗಿ ದುಡಿಯುತ್ತಿರುವವರ ಸಂಖ್ಯೆ 30,000 ಸಾವಿರ.

ಈ ಟ್ರೈನಿಗಳು ಅನಿಸಿಕೊಂಡ ಉದ್ಯೋಗಿಗಳಿಂದ ಸಂಸ್ಥೆ ದುಡಿಸಿಕೊಳ್ಳುವುದು ಮಾತ್ರ ಅಗಾಧ. ಆದರೆ 'ತರಬೇತಿ ಸಂಭಾವನೆ' ಹೆಸರಿನಲ್ಲಿ ಅವರ ಕೈಗಿಡುವುದು ಮಾತ್ರ ಮೂರು ಕಾಸು. ಈ ಟ್ರೈನಿಗಳಿಗೆ ತಿಂಗಳಿಗೆ ಕೇವಲ 2,000 ತರಬೇತಿ ಸಂಭಾವನೆ ಅಂತ ಕೊಡುತ್ತಾರೆ. 500 ರೂ. ತಿಂಗಳಿಗೆ ಭತ್ಯೆ. ಒಟ್ಟು 2500 ರೂ. ಮಾತ್ರ. ತಿಂಗಳಿಗೆ 22 ದಿನವೂ ಕೆಲಸ ಮಾಡಿದರೆ ಮತ್ತೆ 500 ಮಾತ್ರ ಈ ಕೈಗೆ. ಒಂದು ದಿನ ವ್ಯತ್ಯಾಸವಾದರೂ 500 ರೂ.ಗೆ ಖೋತಾ.

ಬಿಎಂಟಿಸಿಯಲ್ಲಿ ಟ್ರೈನಿಗಳಾಗಿ ದುಡಿಯುತ್ತಿರುವವರಲ್ಲಿ ಧಾರವಾಡ, ಬೆಳಗಾಂ, ಗುಲ್ಬರ್ಗಾ, ಹೀಗೆ ಯಾವುದ್ಯಾವುದೋ ದೂರದ ಜಿಲ್ಲೆಗಳವರಿದ್ದಾರೆ. ಮದುವೆಗಳಾಗಿ ಸಂಸಾರವಂದಿಗರಾಗಿರುವವರಿದ್ದಾರೆ. ಅವರೆಲ್ಲ ಹೆಂಡತಿ ಮಕ್ಕಳನ್ನು (ಪುರುಷ ಉದ್ಯೋಗಿಗಳು) ತಮ್ಮ ತಮ್ಮ ಊರುಗಳಲ್ಲಿ ಬಿಟ್ಟು ಇಲ್ಲಿ ಒಂಟಿ ಜೀವನ ನಡೆಸುತ್ತಿದ್ದಾರೆ. ಸಂಸಾರವನ್ನು ಇಲ್ಲಿಗೆ ಕರೆ ತರಲು ದುಡಿಮೆ ಸಾಲುವುದಿಲ್ಲ. ಹೋಗಲಿ ಆಗಾಗ್ಗೆ ಊರಿಗೆ ಹೋಗಿ ಬರೋಣವೆಂದರೆ ಅದು ಅಷ್ಟು ಸಮೀಪದಲ್ಲಿಲ್ಲ. ಬಿಎಂಟಿಸಿ ನೌಕರರಿಗೆ ಬಿಎಂಟಿಸಿಯಲ್ಲಿ ಮಾತ್ರ ಉಚಿತ ಪ್ರಯಾಣದ ಅವಕಾಶ, ಇತರೆ ಸಂಸ್ಥೆಗಳಲ್ಲಿಲ್ಲ ಎಂಬ ಧೋರಣೆಗೆ ಈಗ ಬರಲಾಗಿದೆ. ಉಚಿತ ಪ್ರಯಾಣವೂ ಇಲ್ಲ. ರಜೆಯೂ ಸುಲಭವಾಗಿ ಸಿಗುವುದಿಲ್ಲ. ದುಬಾರಿ ಬೆಂಗಳೂರಿನಲ್ಲಿ ಮನೆ ಬಾಡಿಗೆ ಕಟ್ಟಲಾರದೆ ಹೊಟ್ಟೆ ತುಂಬಾ ಊಟ ಮಾಡಲಾಗದೆ ಸಾರಿಗೆ ಸಂಸ್ಥೆಯ ಲಾಭಕ್ಕಾಗಿ ದುಡಿಯುತ್ತಿರುವ ಈ ಪ್ರತಿನಿಧಿಗಳ ಬದುಕು ವಜ್ರ, ಸುವರ್ಣ ಬಸ್‌ಗಳಂತಿಲ್ಲ. ಬೆಟ್ಟದಿಂದ ಹತ್ತು ಪಲ್ಟಿ ಹೊಡೆದು ನಿಂತ ಹಳೇ ಗ್ರಾಮೀಣ ಸಾರಿಗೆ ಬಸ್‌ನಂತಿದೆ. ತರಬೇತಿಯ ಅವಧಿ 2 ವರ್ಷ ಎಂದು ಹೇಳಲಾಗಿದ್ದರೂ ಅದು 2 ವರ್ಷಕ್ಕೆ ಮುಗಿಯದೇ ಮತ್ತೆ ಮತ್ತೆ ವಿಸ್ತರಣೆಯಾಗಿ 3ರಿಂದ 4 ವರ್ಷಗಳವರೆಗೆ ಮುಂದೆ ಮುಂದೆ ಹೋಗುವ ಉದಾಹರಣೆಗಳು ಬೇಕಾದಷ್ಟಿವೆ. ಸಣ್ಣ ಪುಟ್ಟ ಅಪಘಾತ, ತಪ್ಪುಗಳಿಗಾಗಿಯೂ ವರ್ಷಗಟ್ಟಲೇ ತರಬೇತಿಯ ಅವಧಿಯನ್ನು ವಿಸ್ತರಿಸುತ್ತಾ ಹೋಗಲಾಗುತ್ತಿದೆ. ತರಬೇತಿಯ ಅವಧಿಯನ್ನು ಹತ್ತು ವರ್ಷಗಳವರೆಗೆ ವಿಸ್ತರಿಸಿದ ಉದಾಹರಣೆಯೂ ಇಲ್ಲಿದೆ. ಖಾಯಂ ನೌಕರರೇ ತಮ್ಮ ಸಮಸ್ಯೆಗಳ ಬಗೆಗೆ ಉಸಿರು ಬಿಡುವಂತಿಲ್ಲ ಎಂದ ಮೇಲೆ ಇನ್ನು ಟ್ರೈನಿಗಳು ಬಾಯಿ ಬಿಚ್ಚುವುದುಂಟೇ. ಊಹುಂ ಅವರು ಬಾಯೇ ತೆರೆಯುವಂತಿಲ್ಲ.

ಇವರು ನಿರಂತರವಾಗಿ 12 ಗಂಟೆಯಿಂದ 15 ಗಂಟೆ ಕೆಲಸ ಮಾಡಿದರೂ ಹಲವಾರು ಬಾರಿ ದಾಖಲಾಗುವುದು ಕೇವಲ 8 ಗಂಟೆಗಳ ಕೆಲಸ. ಕೆಲವೊಮ್ಮೆ 5-6 ಗಂಟೆ ಹೆಚ್ಚುವರಿ (ಓ.ಟಿ) ಕೆಲಸ ಮಾಡಿದರೂ 3 ಗಂಟೆಯ ಓ.ಟಿಯ ಮಾತ್ರ ದಾಖಲಾಗುತ್ತದೆ.

ಸಾಧಾರಣ ತಿಂಗಳಿಗೆ 7500 ರೂ. ಸಂಬಳ ನೀಡಬೇಕಾದ ಕೆಲಸಕ್ಕೆ ಕೇವಲ 2500 ರೂ. ನೀಡುವ ಮೂಲಕವೇ 30 ಸಾವಿರ ಟ್ರೈನಿಗಳ ಮೂಲಕ ಸಾರಿಗೆ ಸಂಸ್ಥೆ ಸುಮಾರು 150 ಕೋಟಿ ರೂಪಾಯಿಗಳನ್ನು ಉಳಿಸುತ್ತಿದೆ. ಮತ್ತೆ ಸಂಸ್ಥೆ ಲಾಭ ಮಾಡದೇ ಇರುತ್ತದೆಯೇ?

ಇದಲ್ಲದೆ ನೌಕರರಿಗೆ ರಜೆ ಬೇಕೆಂದಾಗ ರಜೆ ಸಿಗುವುದಿಲ್ಲ. ರಜೆ ದಕ್ಕಬೇಕಾದರೆ ಲಂಚ ಕಕ್ಕಬೇಕಾದ ಪರಿಸ್ಥಿತಿ ಇದೆ. ಯಾರೂ ಏನೂ ಹೆಚ್ಚು ಮಾತನಾಡುವಂತಿಲ್ಲ. ಏನಾದರೂ ಸಣ್ಣದಾಗಿ ...ಸಿದರೂ ನೌಕರರಿಗೆ 'ಡ್ಯೂಟಿ' ಕೊಡದೆ ನಿರಾಕರಿಸಲಾಗುತ್ತದೆ.



ಉದ್ಯೋಗ ನುಂಗಿದ ಸಾರಿಗೆ ಸಂಸ್ಥೆ:

...ನೌಕರರ ಈ ಕೆಲಸದ ಒತ್ತಡ ಯಾಕೆ ಎಂದು ಪರಿಶೀಲಿಸಲು ಹೊರಟರೆ ಸಾರಿಗೆ ಸಂಸ್ಥೆಯ ಶೋಷಣೆಯ ಇನ್ನೊಂದು ಬೃಹತ್ ಚಿತ್ರವೇ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. 1970ರಲ್ಲಿ ಸಾರಿಗೆ ಸಂಸ್ಥೆಯಲ್ಲಿ ಪ್ರತಿ ಸಾವಿರ ಬಸ್‌ಗಳಿಗೆ ಕಂಡಕ್ಟರ್, ಡ್ರೈವರ್, ತಾಂತ್ರಿಕ ಸಿಬ್ಬಂದಿ, ಕಛೇರಿ ಸಿಬ್ಬಂದಿ ಸೂಪರ್‌ವೈಸರ್‌ಗಳು ಹಾಗೂ ಅಧಿಕಾರಿಗಳು ಈ ಆರೂ ವಿಭಾಗದವರು ಸೇರಿ ಒಟ್ಟು 9,672 ಜನರು ಕೆಲಸ ನಿರ್ವಹಿಸುತ್ತಿದ್ದರು. ಅಂದರೆ 1 ಬಸ್‌ಗೆ ಸರಿ ಸುಮಾರು 9 ರಿಂದ 10 ಜನರು ಸಾರಿಗೆ ಸಂಸ್ಥೆಯಲ್ಲಿ ಉದ್ಯೋಗಿಗಳಿದ್ದರು. ಈಗ ಪ್ರತಿ 1000 ಬಸ್‌ಗಳಿಗೆ 4790 ಜನ ಮಾತ್ರ ಉದ್ಯೋಗಿಗಳಿದ್ದಾರೆ. ಅಂದರೆ ಉದ್ಯೋಗಿಗಳ ಸಂಖ್ಯೆ ಸರಿ ಸುಮಾರು ಅರ್ಧಕ್ಕರ್ಧ ಕಡಿಮೆಯಾಗಿದೆ. ಪ್ರತಿ ಬಸ್‌ಗೆ 9-10 ಜನ ಉದ್ಯೋಗಿಗಳಿದ್ದು ಈಗ 4-5 ರ ಮಟ್ಟಕ್ಕೆ ಬಂದಿದೆ. ...ತಿ ಕಡಿಮೆ ಪ್ರತಿಫಲಕೊಟ್ಟು ತರಬೇತಿ ಹೆಸರಿನಲ್ಲಿ ಅಗಾಧ ಸಂಖ್ಯೆಯ ಜನರನ್ನು ದುಡಿಸಿಕೊಳ್ಳುವುದಲ್ಲದೆ, ...ದಶಕಗಳಲ್ಲಿ ತುಂಬಿಕೊಳ್ಳಬೇಕಾದ ಅರ್ಧಕ್ಕರ್ಧ ಉದ್ಯೋಗಗಳನ್ನೇ ನುಂಗಿ ಹಾಕಿ, ಇರುವ ನೌಕರರ ಮೇಲೆ ತೀವ್ರ ತೆರನಾಗಿ ಒತ್ತಡವನ್ನು ಸೃಷ್ಟಿಸಲಾಗಿದೆ.

ಇರಬೇಕಾದಷ್ಟು ನೌಕರರು ಸಂಸ್ಥೆಯಲ್ಲಿಲ್ಲ. ಸಾರಿಗೆ ಸಂಸ್ಥೆ ಸುಗಮವಾಗಿ ಪ್ರಯಾಣಿಕರ ಉತ್ತಮ ಸೇವೆ ಒದಗಿಸಬೇಕಾಗಿದ್ದಲ್ಲಿ ಅಗತ್ಯ ಪ್ರಮಾಣದ ಸಿಬ್ಬಂದಿ ಇರುವುದಲ್ಲದೆ, 'ಸ್ಟ್ಯಾಂಡರ್ಡ್ ಲೀವ್ ಸ್ಪೇರ್' ಮಾನದಂಡದಂತೆ ಒಟ್ಟು ನೌಕರರ ಸಂಖ್ಯೆಯ ಶೇ.20 -25 ರಷ್ಟು ಜನರು ಹೆಚ್ಚುವರಿ ಬೇಕಾಗುತ್ತದೆ. ಏಕೆಂದರೆ ಅನಾರೋಗ್ಯ, ಯಾವುದೇ ಕಾರಣವಾಗಿ ತಮ್ಮ ನ್ಯಾಯಬದ್ಧ ರಜೆ ಸೌಲಭ್ಯವನ್ನು ನೌಕರರು ಬಳಸುವುದು, ಶಿಸ್ತುಕ್ರಮ ಇತ್ಯಾದಿಗಳಿಂದಾಗಿ ನೌಕರರು ಅವಮಾನತ್ತಿನಲ್ಲಿರುವುದು ಯಾವುದೇ ಸಂಸ್ಥೆಯಲ್ಲಿ ಬರುವ ಸಮಸ್ಯೆ. ಇಂತಹ ಪರಿಸ್ಥಿತಿಯನ್ನು ನಿಬಾಯಿಸಲು ಹೆಚ್ಚುವರಿ ನೌಕರರು ಬೇಕೇಬೇಕಾಗುತ್ತದೆ. ಯಾವುದೇ ಸಂಸ್ಥೆಯಲ್ಲೂ ಈ ಹೆಚ್ಚುವರಿ ನೌಕರರು, ಸಿಬ್ಬಂದಿ ಇರುವುದು ಅತ್ಯಗತ್ಯ. ಆದರೆ ಸಾರಿಗೆ ಸಂಸ್ಥೆಯಲ್ಲಿ ಅಗತ್ಯಕ್ಕಿಂತ ಅರ್ಧದಷ್ಟು ನೌಕರಿರುವಾಗ ಹೆಚ್ಚುವರಿ ನೌಕರರ ಪ್ರಶ್ನೆ ಎಲ್ಲಿಂದ ಬರಬೇಕು. ಹೀಗಾಗಿ ಇರುವ ನೌಕರರ ಮೇಲೆ ಮತ್ತೆ ಮತ್ತೆ ಒತ್ತಡ.

ತಮ್ಮ ಮೇಲೆ ಅಮಾನವೀಯದ ಒತ್ತಡಗಳನ್ನು ಹಾಕಿ ದುಡಿಸಲು ಯತ್ನಿಸುವಾಗ ನೌಕರರು ಆ ಯತ್ನವನ್ನು ವಿರೋಧಿಸುವುದು, ಕೆಲಸ ಮಾಡಲು (ಹೆಚ್ಚುವರಿ)ನಿರಾಕರಿಸುವುದು ಮುಂತಾದವು ಸಹಜವಾಗಿ ನಡೆಯುತ್ತವೆ. ರಜೆಯನ್ನು ಕೊಡದೇ ನಿರಾಕರಿಸುವಾಗ ಅನಧಿಕೃತ ಗೈರು ಹಾಜರಿಯಂತಹ ತಪ್ಪುಗಳ ಘಟಿಸುತ್ತವೆ. ಇಂತಹ ತಪ್ಪುಗಳನ್ನು 'ಹಿಡಿದು' ನೌಕರರನ್ನು ಸಸ್ಪೆಂಡ್ ಮಾಡುವ ಕ್ರಮ ವ್ಯಾಪಕವಾಗಿದೆ. ಸಾರಿಗೆ ಸಂಸ್ಥೆಯಲ್ಲಿ ಶೇಕಡ 20 ರಿಂದ 30 ರಷ್ಟು ಜನ ನೌಕರರು ಈ ರೀತಿ ಅಮಾನತ್ತಿನಲ್ಲಿದ್ದಾರೆಂದು ಅಂದಾಜಿಸಲಾಗಿದೆ. ನ್ಯಾಯಬದ್ಧವಾದ ವೇತನ ಸಿಗದೆ ನಿರ್ದಿಷ್ಟ ವೇತನದಲ್ಲಿ ದುಡಿಯುತ್ತಿರುವ ನೌಕರರಲ್ಲಿ ಕೆಲವರು ಅಕ್ರಮ ವಿಧಾನದಲ್ಲಿ ಹಣಗಳಿಸಲು ಪ್ರಯತ್ನಿಸಿ, ಅದರಲ್ಲಿ ಸಿಕ್ಕಿಬಿದ್ದು ಅಮಾನತ್ತಿಗೆ ಗುರಿಯಾದವರೂ ಇದರಲ್ಲಿ ಇರುತ್ತಾರೆಂಬುದು ನಿಜವೇ. ಆದರೆ ನೌಕರರು ತಪ್ಪು ಮಾರ್ಗಕ್ಕೆ ಇಳಿಯಬೇಕಾದಂತಹ ಅನಿವಾರ್ಯತೆಯನ್ನು ಸೃಷ್ಟಿಸದಿರುವ ಹೊಣೆಗಾರಿಕೆಯೂ ಸಾರಿಗೆ ಸಂಸ್ಥೆಯ ಮೇಲಿದೆ.

ವೇತನದ ವಂಚನೆ

ಅವಿಶ್ರಾಂತ ದುಡಿಮೆ, ವಿಪರೀತ ದುಡಿಮೆ ಮಾಡುತ್ತಿರುವ ನೌಕರರಿಗೆ ಅವರ ದುಡಿಮೆಗೆ ತಕ್ಕ ವೇತನವನ್ನಾದರೂ ನೀಡಲಾಗುತ್ತಿದೆಯೇ ಎಂದರೆ ಅದೂ ಇಲ್ಲ. ವೇತನದಲ್ಲಿ ಸಾರಿಗೆ ಸಂಸ್ಥೆಯ ನೌಕರರಿಗೆ ಬಾರಿ ದೊಡ್ಡ ಅನ್ಯಾಯಕ್ಕೆ ಗುರಿಯಾಗಿದ್ದಾರೆ.

ಜೀವನಾವಶ್ಯಕ ವಸ್ತುಗಳ ಬೆಲೆಗಳು ದಿನೇ ದಿನೇ ತೀವ್ರವಾಗಿ ಏರುತ್ತಿದೆ. ಮಕ್ಕಳ ಶಿಕ್ಷಣ ವೆಚ್ಚ, ಬಾಡಿಗೆ ಆರೋಗ್ಯದ ಖರ್ಚುಗಳು ಈ ಯಾವುದೂ ಕೆಳಮುಖವಾಗಿಲ್ಲ. ಮೇಲ್ ಮುಖವಾಗಿವೆ. ಹಣದುಬ್ಬರ ದುಡಿಯುವ ಜನರ ಬದುಕನ್ನು ಹಿಂಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹಣದುಬ್ಬರ, ಜೀವನವೆಚ್ಚದ ಏರಿಕೆಗೆ ತಕ್ಕಂತೆ ನೌಕರರ ಕಾರ್ಮಿಕರ ವೇತನಗಳನ್ನು ಏರಿಸುವುದು ನ್ಯಾಯಬದ್ಧವಾದ ಕಾನೂನು ಬದ್ಧವಾದ ಕ್ರಮ.

ಆದರೆ ಸಾರಿಗೆ ನೌಕರರ ವೇತನದ ಪ್ರಶ್ನೆಯಲ್ಲಿ ಕಾನೂನುಬದ್ಧತೆಯೂ ಇಲ್ಲ, ನ್ಯಾಯಬದ್ಧತೆಯೂ ಇಲ್ಲ. 1992ಕ್ಕೆ ಮೊದಲು ಸಾರಿಗೆ ನೌಕರರ ವೇತನವು



ರಾಜ್ಯ ಸರಕಾರಿ ನೌಕರರ ವೇತನಕ್ಕಿಂತಲೂ ಮೇಲಟ್ಟದಲ್ಲಿತ್ತು. ಆದರೆ ಈಗ ಅದು ರಾಜ್ಯ ಸರ್ಕಾರಿ ನೌಕರರ ವೇತನಕ್ಕಿಂತ ಶೇ.21.5 ಕಡಿಮೆ ಇದೆ. ಎಷ್ಟೊಂದು ಕುಸಿತ!!

ಇದೀಗ ಸಾರಿಗೆ ಸಂಸ್ಥೆಯು ನೌಕರರಿಗೆ ಏಕಪಕ್ಷೀಯ ತೀರ್ಮಾನದ ಮೂಲಕ 01.01.2008 ರಿಂದ ಅನ್ವಯವಾಗುವಂತೆ ಶೇ.6 ರಷ್ಟು ವೇತನ ಹೆಚ್ಚಳ ಘೋಷಿಸಲಾಗಿದೆ. ಬೆಲೆ ಏರಿಕೆಯ ಅಗಾಧತೆಗೂ, ಜೀವನ ವೆಚ್ಚಗಳ ಏರಿಕೆಯ ತೀವ್ರತೆಗೂ ಹಾಗೂ ವೇತನ ಹೆಚ್ಚಳದ ಪ್ರಮಾಣಕ್ಕೂ ತಾಳ ಮೇಳವಿಲ್ಲದಂತಾಗಿದೆ. ವೇತನ ಹೆಚ್ಚಳವು ಶೇ.6 ರಷ್ಟು ಎಂದು ಹೇಳಲಾಗಿದ್ದರೂ ಕೂಡ 'ಫಿಟ್‌ಮೆಂಟ್' ವಿಧಾನದಂತೆ ಆರಂಭಿಕ ಹಂತದಲ್ಲಿ ವೇತನ ಹೆಚ್ಚಳ ಕೇವಲ ಶೇ. 3.5 ಎಂದು ಲೆಕ್ಕ ಹಾಕಲಾಗಿದೆ.

ಇತ್ತೀಚಿನ ಈ ವೇತನ ಹೆಚ್ಚಳವು ರಾಜ್ಯ ಸರ್ಕಾರಿ ನೌಕರರಿಗೆ ಶೆ.17.5 ರಷ್ಟು ಆಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳ ಬಹುದಾಗಿದೆ. ಮೊನ್ನೆ ತಾನೆ ನಮ್ಮ ರಾಷ್ಟ್ರಪತಿಗಳ ವೇತನ ಒಮ್ಮೆಗೆ 3 ಪಟ್ಟು ಹೆಚ್ಚಳವಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಏನು ದಾಡಿ - ಏನು ತೊಂದರೆ:

ಒಂದು ಸಂಸ್ಥೆ ತೀವ್ರ ನಷ್ಟದಲ್ಲಿರುವಾಗ ತೀವ್ರ ಸಂಕಷ್ಟದಲ್ಲಿರುವಾಗ ನೌಕರರು ವೇತನ ಹೆಚ್ಚಿಸಿ ಎಂದರೆ ಆಗ ಸಂಸ್ಥೆ ಹಿಂದೆ ಮುಂದೆ ನೋಡಿದಲ್ಲಿ ಸ್ವಲ್ಪ ಅರ್ಥವಿರುತ್ತದೆ. ಸಂಸ್ಥೆ ನಷ್ಟದಲ್ಲಿದ್ದಾಕ್ಷಣ ನೌಕರರು, ಕಾರ್ಮಿಕರ ಜೀವನ ವೆಚ್ಚವೇನೂ ಕಡಿಮೆಯಾಗುವುದಿಲ್ಲ. ಹಾಗಾಗಿ ದುಡಿಮೆಗಾರರಿಗೆ ಕೊಡಬೇಕಾದ ನ್ಯಾಯಬದ್ಧವಾದ ಪ್ರತಿಫಲ ನೀಡಬೇಕಾದ ಜವಾಬ್ದಾರಿ ಯಾವುದೇ ಸಂಸ್ಥೆ ಆಡಳಿತ

ಪುಟ 10 ಕ್ಕೆ

ಭ್ರಷ್ಟಾಚಾರ ತಾಂಡವ ನೃತ್ಯ ಕಾಡುವ ಅಧಿಕಾರಿ ವರ್ಗ

ಸರ್ಕಾರ ಹಾಗೂ ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಗಳ ನೀತಿಯ ಪರಿಣಾಮ ನೇಮಕಾತಿ ನಿರ್ಬಂಧ, ಕಡಿಮೆ ವೇತನ ಇಂತಹ ಪರಿಸ್ಥಿತಿ ಇದ್ದರೆ, ಇಂತಹ ಪರಿಸ್ಥಿತಿಯಲ್ಲಿ ನೌಕರರನ್ನು ಕಾಡುವ ಅಧಿಕಾರಿಗಳ ಆಟ ದಬ್ಬಾಳಿಕೆ ಬಗೆ ಬಗೆಯದು. ಭ್ರಷ್ಟಾಚಾರದ್ದು ಇಲ್ಲಿ ತಾಂಡವ ನೃತ್ಯ.

ಮೇಲಾಧಿಕಾರಿಗಳಿಗೆ ಕೊಡಬೇಕಾದ ಲಂಚ ಕೊಡದಿದ್ದರೆ, ಏನಾದರೂ ಪ್ರಶ್ನೆ ಮಾಡಿದರೆ, ಡ್ಯೂಟಿ ಅವಧಿಯನ್ನು ಸರಿಯಾಗಿ ನಮೂದು ಮಾಡಲು ಕೇಳಿದರೆ ರೀ ಬುಕ್ಕಿಂಗ್ ಅಂದರೆ, ಒಂದು ಶಿಫ್ಟ್‌ನ ನಂತರ ಹಿಂದೆಯೇ ಮತ್ತೊಂದು ಶಿಫ್ಟ್ ಮಾಡುವುದು ಕಷ್ಟ ಎಂದರೆ ಅಧಿಕಾರಿಗಳ ಕೆಂಗಣ್ಣು ನೌಕರರ ಮೇಲೆ ಬಿತ್ತು ಅಂತಲೇ ಅರ್ಥ. ಅಂತಹ ನೌಕರರಿಗೆ ಅವರು ಬಂದು ಗಂಟೆ ಗಟ್ಟಲೆಕಾದರೂ 'ಡ್ಯೂಟಿ' ಕೊಡದೇ ನಿರಾಕರಿಸುವುದು, ಮೊದಲ ಪಾಳಿಗೆ ಎಂದು ಬೆಳಿಗ್ಗೆ ಕೆಲಸಕ್ಕೆ ಬಂದವರನನ್ನು ಎರಡನೇ ಪಾಳಿಗೆ ಬರಲು ಹೇಳಿ ವಾಪಸ್ ಕಳಿಸುವುದು. ಹೆಚ್ಚು ಪರಿಚಯವಿಲ್ಲದ ಮಾರ್ಗಗಳಿಗೆ ಹಾಕುವುದು ಹಾಗೂ ಪದೇ ಪದೇ ಮಾರ್ಗ ಬದಲಾವಣೆ ಮಾಡುವುದು ಎಲ್ಲವೂ ಶುರುವಾಗುತ್ತದೆ. ವಾರದ ರಜೆಯನ್ನು ನೌಕರರಿಗೆ ಬೇಕಾದ ದಿನ ನೀಡದೇ ಬೇರೆ ದಿನಕ್ಕೆ ವರ್ಗಾಯಿಸುವುದು. ಇವೆಲ್ಲಾ ಇಲ್ಲಿ ದೈನಂದಿನ ಮಾಮೂಲಿ ಚಟುವಟಿಕೆಗಳು.

ಕೆಲಸ ಒತ್ತಡಗಳು, ಅಧಿಕಾರಿಗಳ ಕಿರುಕುಳ ಇಲ್ಲಿ ಯಾವ ಪ್ರಮಾಣದಲ್ಲಿದೆ ಅಂದರೆ ಬಿಜಾಪುರದ ಗಾಯಕ್‌ವಾಡ್ ಎಂಬ ಚಾಲಕರೊಬ್ಬರು ಡಿಪೋ ಮ್ಯಾನೇಜರ್, ಹಾಗೂ ಡಿವಿಜನಲ್ ಕಂಟ್ರೋಲರ್‌ಗಳು ತನಗೆ ನೀಡದ ಬಗೆ ಬಗೆಯ ಕಿರುಕುಳಗಳ ಬಗೆಗೆ ಪತ್ರ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ವಿಷಾದಕರ ಘಟನೆಯೂ ನಡೆದು ಹೋಗಿದೆ. ಶಿವಮೊಗ್ಗ, ದಾವಣಗೆರೆಯಲ್ಲೂ ನೌಕರರು ಹತಾಶೆಯಿಂದ ಆತ್ಮಹತ್ಯೆಗೆ ಶರಣಾದ ವರದಿಗಳಿವೆ.

ಇತ್ತೀಚಿನ ವರ್ಷಗಳಲ್ಲಿ ಕಂಡಕ್ಟರ್‌ಗಳ ಹುದ್ದೆಗೆ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನು ನೇಮಿಸಿಕೊಳ್ಳಲಾಗಿದೆ. ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ ಇಲ್ಲ ಎನ್ನುವುದು ಬಿಟ್ಟರೆ ಕಿರುಕುಳಗಳು ಅವರಿಗೇನು ಕಡಿಮೆ ಇಲ್ಲ. ತೀವ್ರ ಒತ್ತಡದ ಪರಿಸ್ಥಿತಿ ಇರುವ ಸಾರಿಗೆ ಸಂಸ್ಥೆಯಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಸಹ ನೀಡುತ್ತಿರುವ ಬಗೆಗೆ ಸಹ ದೂರುಗಳಿವೆ.

ಪ್ರಜಾಪ್ರಭುತ್ವಕ್ಕಾಗಿ ಈ ಹೋರಾಟ

'ಕೆ.ಎಸ್.ಆರ್.ಟಿ.ಸಿ. ಯಲ್ಲಿ ಪ್ರಜಾಪ್ರಭುತ್ವ ಇಲ್ಲ. ಅದು ಕಾಂಗ್ರೆಸ್, ಜನತಾದಳ ಇದ್ದಾಗಲೂ ಇರಲಿಲ್ಲ. ಈಗ ಬಿಜೆಪಿ ಆಡಳಿತ ಕಾಲದಲ್ಲೂ ಇಲ್ಲ. ಏಕೆಂದರೆ ಭಾರತ ದೇಶದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಉಂಟಾಗಿದೆ. ಅಂದರೆ ಅದು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಮಾತ್ರ. ಇದು ಕೇವಲ ನೌಕರರ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಉಳಿವಿಗಾಗಿನ ಹೋರಾಟ. ಇದರಲ್ಲಿ ಸಾರ್ವಜನಿಕ ಹಿತ ಕೂಡ ಒಳಗೊಂಡಿದೆ. ಸಾರ್ವಜನಿಕ ಸುರಕ್ಷತೆಯ ಪ್ರಶ್ನೆ ಸಾರ್ವಜನಿಕರ ಹಲವು ಬಗೆಯ ರಿಯಾಯಿತಿಗಳನ್ನು ಮುಂದುವರಿಸುವ ಪ್ರಶ್ನೆಯೂ ಇದರಲ್ಲಿದೆ. ಸಾರಿಗೆ ಸಂಸ್ಥೆ ಖಾಸಗೀಕರಣಗೊಂಡರೆ ರಿಯಾಯಿತಿ ಪಾಸುಗಳು, ಇತ್ಯಾದಿ ಸೌಲಭ್ಯಗಳು ತಪ್ಪಿಹೋಗುವ ಸಾಧ್ಯತೆ ಇದೆ. ನೌಕರಿ ನೇಮಕಾತಿಗಳಲ್ಲಿ ಸಾಮಾಜಿಕ ನ್ಯಾಯಕ್ಕೂ ಧಕ್ಕೆ ಬರಲಿದೆ'



ಎಸ್.ಪ್ರಸನ್ನಕುಮಾರ್
ಗೌರವ ಅಧ್ಯಕ್ಷರು,
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್ (ಸಿಐಟಿಯು).

...ಹೋರಾಟದ ಕಣಕ್ಕೆ ಸಾರಿಗೆ ನೌಕರರು

ಪುಟ 9 ರಿಂದ

ವರ್ಗಕ್ಕೆ ಮಾಲೀಕರಿಗೆ ಇದ್ದ ಇರುತ್ತದೆ.

ಆದರೆ ಇಲ್ಲಿನ ಪರಿಸ್ಥಿತಿ ನೋಡಿ, ಬಿಎಂಟಿಸಿ ಯು 200 ಕೋಟಿ ರೂ.ಗಳ ಲಾಭದಲ್ಲಿದೆ. ಕೆಎಸ್‌ಆರ್‌ಟಿಸಿ ಯು 40.54 ಕೋಟಿ ರೂ. ಲಾಭದಲ್ಲಿದೆ. ಆದರೆ ಈ ಲಾಭವನ್ನು ಸಂಸ್ಥೆಗೆ ದುಡಿದುಕೊಡುತ್ತಿರುವ ನೌಕರರಿಗೆ ಮಾತ್ರ ಹೊಟ್ಟೆ ಬಟ್ಟೆ ಕಟ್ಟಿ ಬದುಕಬೇಕಾದರೆ ದುರವಸ್ಥೆ ಬಂದಿದೆ.

'ದಂಡ ವಸೂಲಿ ?

ಹಲವಾರು ತಪ್ಪುಗಳ ಹೆಸರಿನಲ್ಲಿ ನೌಕರರಿಂದ ಸಾರಿಗೆ ಸಂಸ್ಥೆ ದಂಡ ವಸೂಲಿ ಮಾಡುತ್ತದೆ. ಟ್ರೈನಿಯೊಬ್ಬ ಒಂದು ದಿನ ಕೆಲಸಕ್ಕೆ ತಪ್ಪಿಸಿಕೊಂಡರೆ ಭಾರಿ ದಂಡ ತೆರಬೇಕು.

ಅಪಘಾತ ಹಾನಿ ವಸೂಲಿ

ಆಕ್ಸಿಡೆಂಟ್ ಎಂದರೆ ಆಕಸ್ಮಿಕ ಅಂತ. ಅಂದರೆ ಅಪಘಾತ ಆಗುವುದು ಆಕಸ್ಮಿಕವಾಗಿ, ಅದು ಉದ್ದೇಶಪೂರ್ವಕವಾಗಿ ಮಾಡುವುದಲ್ಲ. ಆದರೆ ಇದರಿಂದ ಆಗುವ ಹಾನಿಯನ್ನು ಚಾಲಕರೇ ತುಂಬಿಕೊಡಬೇಕು ಎನ್ನುತ್ತದೆ ಸಾರಿಗೆ ಸಂಸ್ಥೆ. ಕೆಲವೊಮ್ಮೆ ಚಾಲಕರ ನಿರ್ಲಕ್ಷ್ಯ ಹಾಗೂ ತಪ್ಪುಗಳಿಂದ ಅಪಘಾತ ಆಗುವ ಸಂಭವಗಳು ಇರುತ್ತವೆ. ಅಂತಹದ್ದನ್ನು ಪರಿಶೀಲಿಸಿ, ತಪ್ಪು ನಿಯಂತ್ರಣಕ್ಕೆ ಹಾಗೂ ಶಿಕ್ಷೆಗೆ ಕ್ರಮ ವಹಿಸಬಹುದೇ ಹೊರತು ಸಾರಾಸಗಟಾಗಿ ಅಪಘಾತಕ್ಕೆಲ್ಲ ಚಾಲಕರೇ ಹೊಣೆ, ಅವರೇ ಹಾನಿ ತುಂಬಿ ಕೊಡಬೇಕೆನ್ನುವುದು ಅಮಾನವೀಯ ವಾಗುತ್ತದೆ. ಹಲವು ಬಾರಿ ಅಪಘಾತಕ್ಕೆ ಸಂಬಂಧಿಸಿ ಚಾಲಕರು ದೂರ ದೂರದ ನ್ಯಾಯಾಲಯಗಳಿಗೆ ಅಲೆದಾಡಬೇಕಾದ ಪರಿಸ್ಥಿತಿ ಬರುತ್ತದೆ. ಆವಾಗಲೂ ಸಹ ಸಂಸ್ಥೆ ವಕೀಲರ ನೇಮಕ ಬಿಟ್ಟು ಬೇರೆ ಯಾವುದೇ ಜವಾಬ್ದಾರಿ ತೆಗೆದುಕೊಳ್ಳದೇ ಪ್ರಯಾಣ ವೆಚ್ಚ, ಊಟ, ವಸತಿ ಇತ್ಯಾದಿ ಎಲ್ಲ ಖರ್ಚುಗಳನ್ನು ಚಾಲಕರ ಹೆಗಲಿಗೆ ಹೊರಿಸುವ ನೀತಿ ಅನುಸರಿಸುತ್ತಿದೆ.

ಪ್ರಜಾಪ್ರಭುತ್ವದ ನಿತ್ಯ ಹತ್ಯೆ

ಈ ಮೇಲಿನ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇಲ್ಲಿ ಪ್ರಜಾಪ್ರಭುತ್ವದ ನಿತ್ಯ ಹತ್ಯೆಯಾಗುತ್ತದೆ. ಇಲ್ಲಿ ಕೇವಲ ಸಂಬಳ, ಸೌಲಭ್ಯಗಳ ಪ್ರಶ್ನೆ ಮಾತ್ರವೇ ಇಲ್ಲ. ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳ ನಿರಾಕರಣೆ, ಪ್ರಜಾಪ್ರಭುತ್ವ ಹಕ್ಕುಗಳ ನಿರ್ದಯ ದಮನವನ್ನು ನಡೆಸಲಾಗುತ್ತಿದೆ.

ಇಲ್ಲಿನದು ಉಸಿರುಗಟ್ಟಿಸುವ ವಾತಾವರಣ, ನೌಕರರ ದುಃಖ ದುಮ್ಮಾನಗಳಿಗೆ ಧ್ವನಿ ಕೊಡುವ ಕಾರ್ಮಿಕ ಸಂಘ ತಲೆ ಎತ್ತಲು ಬಿಡಬಾರದು ಎಂಬುದು ಸರ್ಕಾರದ ಮತ್ತು ಆಡಳಿತ ವರ್ಗದ ನಿಲುವು. ಸಂಪೂರ್ಣ ಸರ್ವಾಧಿಕಾರಿ ಧೋರಣೆ. ಯಾರಾದರೂ ಕರಪತ್ರ ಹಂಚಿದರೂ, ಯಾರಾದರೂ ಕರಪತ್ರ ಕೈಗೆ ತೆಗೆದುಕೊಂಡರೂ ಅವರ ಮೇಲೆ ಶಿಸ್ತು ಕ್ರಮ.

ಎಲ್ಲ ಏಕಪಕ್ಷೀಯ

ಇಲ್ಲಿ ವೇತನ ನಿಗದಿಯಾಗುತ್ತಿರುವ ಪರಿಯನ್ನೇ ಗಮನಿಸಿ. 1992 ರಿಂದೀಚೆಗೆ ನೌಕರರ ವೇತನ ಭತ್ಯೆಗಳ ಕುರಿತು ಇಲ್ಲಿಯವರೆಗೆ ಕಾರ್ಮಿಕ ಸಂಘದ ಜೊತೆ ಯಾವುದೇ ಮಾತುಕತೆ ನಡೆದಿಲ್ಲ. ಸರ್ಕಾರಿ ನೌಕರರಿಗಾದರೆ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ವೇತನ ಆಯೋಗವನ್ನು ರಚಿಸಲಾಗುತ್ತದೆ. ಆಯೋಗ ಶಿಫಾರಸ್ಸಿನ ಆಧಾರದಲ್ಲಿ ವೇತನ ಪರಿಷ್ಕರಣೆ ನಡೆಯುತ್ತದೆ ಹಾಗೂ ಆ ಬಗ್ಗೆ ನೌಕರರಿಗೆ ಅಸಮಾಧಾನ ವಿದ್ದಲ್ಲಿ ಕಾನೂನು ಬದ್ಧ ಪ್ರತಿಭಟನೆಗೆ ಅವಕಾಶ ಇದ್ದೇ ಇದೆ. ನೌಕರರ ಸಂಘಗಳ ಮುಖಂಡತ್ವದೊಂದಿಗೆ ಚರ್ಚಿಸಿ ಸಂಧಾನದ ಮೂಲಕ ವೇತನ ನಿಗದಿಪಡಿಸುವುದೂ ಇದೆ.

ಸಾರಿಗೆ ರಂಗವನ್ನು ಒಂದು ಉದ್ದಿಮೆ ಎಂದು ಪರಿಗಣಿಸಲಾಗಿರುವುದರಿಂದ ಇಲ್ಲಿ ಕಾರ್ಮಿಕ ಕಾಯ್ದೆ ಅನ್ವಯವಾಗಬೇಕು. ಅಂದರೆ ಕಾರ್ಮಿಕ ಸಂಘದ ಪ್ರತಿನಿಧಿಗಳು ಹಾಗೂ ಆಡಳಿತ ವರ್ಗದ ನಡುವೆ ಮಾತುಕತೆ, ಸಂಧಾನ ನಡೆದು ವೇತನ ನಿಗದಿಯಾಗಬೇಕು. ಕಳೆದ 16 ವರ್ಷಗಳ ಕಾಲ ಈ ಮಾತುಕತೆ ನಡೆದಿಲ್ಲ. 1996 ನಾಲ್ಕು ವರ್ಷಗಳಿಗೊಮ್ಮೆ ಅಂದರೆ 1996,2000,2004ರಲ್ಲಿ ವೇತನ ಹೆಚ್ಚಳವನ್ನು ಮಾಡಲಾಗಿದೆ. ಆದರೆ ಅದೆಲ್ಲವೂ ಏಕಪಕ್ಷೀಯ ತೀರ್ಮಾನಗಳು. ಈ ಸಂದರ್ಭದಲ್ಲಿ ವೇತನ ಹೆಚ್ಚಳ ಕೇವಲ ಶೇ.3 ಅಥವಾ 4 ಇತ್ತು ಎಂಬುದನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಸಾರಿಗೆ ಸಂಸ್ಥೆಯಲ್ಲಿ ಈಗಲೂ ಮಾನ್ಯತೆ ಪಡೆದ ಸಂಘ ಅಂತ ಇರುವುದು ಎಐಟಿಯುಸಿ. ಈ ಸಂಘಟನೆಯನ್ನು ಸಹ ಆಡಳಿತ ಮಂಡಳಿ ಮಾತನಾಡಿಸುವ ಗೋಜಿಗೆ ಹೋಗಿಲ್ಲ. ಹೀಗಿದೆ ಆಡಳಿತ ಮಂಡಳಿಯ ಧೋರಣೆ.

ಒಂದು ಕಾಲದಲ್ಲಿ ಸಾರಿಗೆ ಸಂಸ್ಥೆಯಲ್ಲಿ ಕಾಂಗ್ರೆಸ್ ನಾಯಕತ್ವದ ಐಎನ್‌ಟಿಯುಸಿ ಸಂಘಟನೆಯ ಪ್ರಾಬಲ್ಯವಿತ್ತು. ಸರ್ಕಾರ ಕಾರ್ಮಿಕರ ನಡುವಿನ ಏಜೆಂಟರಂತೆ ವರ್ತಿಸುವ ಐಎನ್‌ಟಿಯುಸಿ ಧೋರಣೆಯಿಂದಾಗಿ ಅದು ದುರ್ಬಲವಾಗಿ ಎಐಟಿಯುಸಿ ಪ್ರಾಬಲ್ಯಕ್ಕೆ ಬಂತು. ಒಂದು ಕಡೆ ಎಐಟಿಯುಸಿಯ ಸಾಹಸವಾದಿ ಧೋರಣೆ, ಮತ್ತೊಂದೆಡೆ ಸರ್ಕಾರದ ದಮನಕಾರಿ ಧೋರಣೆಗಳಲ್ಲಿ ಕಾರ್ಮಿಕ ವರ್ಗ ನಲುಗಿ ಹೋಗಿದೆ. ಈಗಿನ ಪರಿಸ್ಥಿತಿಗೆ ಬಂದಿದೆ.

ಒಂದು ಸಂಸ್ಥೆಯಾಗಿದ್ದ ಕೆಎಸ್‌ಆರ್‌ಟಿಸಿಯನ್ನು ವಿಭಜಿಸಿ ನಾಲ್ಕು ಸಂಸ್ಥೆಗಳನ್ನಾಗಿ ಮಾಡುವುದರ ಹಿಂದೆ ಕಾರ್ಮಿಕ ಸಂಘವನ್ನು ಮುರಿಯುವ ಸರ್ಕಾರ ಹಾಗೂ ಆಡಳಿತ ಮಂಡಳಿಯ ತಂತ್ರ ಇತ್ತು. ಇದಲ್ಲದ ಸಾರಿಗೆ ಸಂಸ್ಥೆಯನ್ನು ಹೇಗಾದರೂ ಮಾಡಿ ಖಾಸಗಿ ಬಂಡವಾಳಗಾರರ ಕೈಪಾಲು ಮಾಡುವ, ಅಂದರ ಖಾಸಗೀಕರಣ ಮಾಡುವ ಉದ್ದೇಶವೂ ಸರ್ಕಾರಕ ಇತ್ತು ಮತ್ತು ಈಗಲೂ ಇದೆ. ಕಾರ್ಮಿಕ [illegible] ಇದ್ದರೆ, ಇರಲು ಬಿಟ್ಟರೆ ನೌಕರರ ನಿರ್ದಯ ಸುಲಿಗೆ ತಡೆ ಬೀಳುತ್ತದೆ. ಖಾಸಗೀಕರಣದ ಯತ್ನಕ್ಕೆ [illegible] ಬರುತ್ತದೆ. ಸಾರಿಗೆ ಸಂಸ್ಥೆಯಲ್ಲಿ ಪ್ರಜಾಪ್ರಭುತ್ವ[illegible] ಕೊಂದು ಬಿಟ್ಟರೆ ಸರ್ಕಾರ ಯೋಜನ ಸಲೀಸಾಗುತ್ತದೆ. ಹೀಗಿದೆ ಸರ್ಕಾರದ ಚಿಂತನೆ.

ಎಲ್ಲಿಯವರೆಗೆ ಬಗ್ಗುವುದು?

ಸಾರಿಗೆ ಸಂಸ್ಥೆಗಳ ನೌಕರರ ಸಹನೆಗೂ ಒಂದ ಮಿತಿ ಇದೆ. ಅನ್ಯಾಯಗಳ ಸರಣಿ ನಿರಂತ ಎನ್ನುವಂತಾಗುತ್ತಿದ್ದರೆ ಅವರಾದರೂ ಎಷ್ಟು ದಿ ಸಹಿಸಿಕೊಂಡಾರು? ಸಾರಿಗೆ ನೌಕರರೀಗ ಸೆಟೆದ ನಿಲ್ಲಲು ಶುರುಮಾಡಿದ್ದಾರೆ. ಬಗ್ಗು ಎಂದ ಎಲ್ಲಿಯವರೆಗೆ ಬಗ್ಗುವುದು? ನೆಲ ಮಟ್ಟುವವರೆ ಬಗ್ಗಬಹುದು. ನೆಲತೋಡಿ ಬಗ್ಗಲಾದೀತ?

ಸಾರಿಗೆ ರಂಗದ ನೌಕರರ ಸಂಘಟನೆಗಳು ಒಂದ ವೇದಿಕೆಗೆ ಬಂದಿವೆ. ಒಕ್ಕೂಟ ರಚಿಸಿಕೊಂಡಿವೆ. ತ ನ್ಯಾಯಬದ್ಧ ಬೇಡಿಕೆಗಳಿಗಾಗಿ ಅವು ಅನಿರ್ದಿಷ್ಟಾವ ಮುಷ್ಕರದ ಸ್ಪಷ್ಟ ಯೋಜನೆ ರೂಪಿಸಿಕೊಂಡ ರಾಜ್ಯವ್ಯಾಪಿ ಹೋರಾಟಕ್ಕೆ ಮುಂದಾಗಿ ರಾಜ್ಯಾದ್ಯಂತ ಪ್ರಚಾರ, ಸಿದ್ಧತೆಗಳು ಭರ[illegible] ಸಾಗಿವೆ. ಜನವರಿ 19, 2009ರಿಂದ ಅನಿರ್ದಿಷ್ಟಾವ ಮುಷ್ಕರ ಆರಂಭಗೊಳ್ಳಲಿದೆ.

ಸೌಹಾರ್ದ ಬೆಂಬಲ

ಜನವರಿ 19ರ ಮುಷ್ಕರ ಕೇವಲ ಸಾರಿಗೆ ನೌಕರರ ಮುಷ್ಕರ ಆಗಿ ಉಳಿಯುವುದಿಲ್ಲ. ಇದಕ್ಕೆ ಕಾರ್ಖಾನೆಗಳ ಹಾಗೂ ಅಸಂಘಟ[illegible] ವಲಯದ ಕಾರ್ಮಿಕರ ಬೆಂಬಲ ಕ್ರೋಢೀಕರಿಸುವ ಸಲುವಾಗಿ ಸಿಐಟಿಯು ಸಂಘಟನೆ ರಾಜ್ಯಾದ್ಯಂತ ಇರುವ ತನ್ನ ಮಿಕ್ಕಿದ ಲಕ್ಷ ಸದಸ್ಯರ ಬೆಂಬಲ ಕ್ರೋಢೀಕರಿಸುವ ಪ್ರಯತ್ನ ನಡೆಸಿದೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಜನವಾದಿ ಮಹಿಳಾ ಸಂಘಟನೆ(ಜೆಎಂಎಸ್) ಮುಂತಾದವುಗಳು ಸಾರಿಗೆ ನೌಕರರ ಹೋರಾಟಕ್ಕೆ ಬೆಂಬಲವಾಗಿ ಬಂದಿವೆ. ಜನವರಿ 13 ರಂದು ಈ ಸಂಘಟನೆಗಳು ಸಾರಿಗೆ ಸಂಸ್ಥೆಗಳ ವಿವಿಧ ಡಿಪೋಗಳ ಮುಂದೆ ಸೇರಿ 'ನೌಕರರ ಸಂಘಟನೆಗಳೊಂದಿಗೆ ಮಾತನಾಡಿ-ಸ[illegible] ಬಗೆಹರಿಸಿ, ಮುಷ್ಕರಕ್ಕೆ ಹೋಗಲು ಬಿಡಬೇಡಿ' ಎಂದು ಸಾರಿಗೆ ಸಂಸ್ಥೆಯನ್ನು ಒತ್ತಾಯಿಸಿ ಮತ ಪ್ರದರ್ಶನ ನಡೆಸಲಿವೆ.

ಕಾರ್ಮಿಕರ ಐಕ್ಯತೆಯೂ ಸರ್ಕಾರದ ಧಮಕಿಯೂ

ಸಾರಿಗೆ ರಂಗದಲ್ಲಿ ಕ್ರಿಯಾಶೀಲವಾಗಿರುವ ಒಟ್ಟು 8 ಸಂಘಗಳು ಈ ನೌಕರರ ಸಮಸ್ಯೆಗಳ ವಿರುದ್ಧ 'ಐಕ್ಯತಾ ಹೋರಾಟ ಸಮಿತಿ'ಯನ್ನು ರಚಿಸಿಕೊಂಡಿವೆ. ಈ ಐಕ್ಯತೆ ಸಾರಿಗೆ ಕಾರ್ಮಿಕರಲ್ಲಿ ಹೊಸ ಚೈತನ್ಯ, ಭರವಸೆ ಮೂಡಿಸಿದೆ. ಹೀಗೆ ರಚಿಸಿಕೊಳ್ಳಲಾಗಿರುವ ಸಮಿತಿಯ ಹೆಸರು "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರ ಐಕ್ಯತಾ ಹೋರಾಟ ಸಮಿತಿ" ಈ ಸಮಿತಿಗೆ ಎಂಟು ಜನ ಸಂಚಾಲಕರು

ಡಾ. ಕೆ.ಎಸ್.ಶರ್ಮ ಅಧ್ಯಕ್ಷರು

ಬಿ.ಜಯದೇವರಾಜೇ ಅರಸು ಮಹಾಪ್ರಧಾನ ಕಾರ್ಯದರ್ಶಿ (ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿ)

ಎಸ್.ಪ್ರಸನ್ನಕುಮಾರ ಗೌರವಾಧ್ಯಕ್ಷರು, (ಕ.ರಾ.ರ.ಸಾ.ನಿಗಮಗಳ ನೌಕರರ ಫೆಡರೇಷನ್) ಸಿಐಟಿಯು

ಕೆ.ಆರ್.ವಿಜಯಕುಮಾರ ಅಧ್ಯಕ್ಷರು, (ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ಯುನೈಟೆಡ್ ಎಂಪ್ಲಾಯಿಸ್ ಯೂನಿಯನ್)

ಎಂ.ಲಘುಮಯ್ಯ ಪ್ರಧಾನ ಕಾರ್ಯದರ್ಶಿ, (ಕೆ.ಎಸ್.ಆರ್.ಟಿ.ಸಿ., ಎಸ್.ಟಿ. ಎಂಪ್ಲಾಯಿಸ್ ಯೂನಿಯನ್)

ಎಂ.ಮಲ್ಲಿಕಾರ್ಜುನ ಮೂರ್ತಿ ಕಾರ್ಯದರ್ಶಿ, (ಕೆ.ಎಸ್.ಆರ್.ಟಿ.ಸಿ.ಎಸ್.ಸಿ., ಎಸ್.ಟಿ., ಆಫೀಸರ್ಸ್ ಅಂಡ್ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್)

ಎಂ.ಡಿ.ದೊಡ್ಡಗೌಡ್ರು ಉಪಾಧ್ಯಕ್ಷರು, (ಕೆ.ಎಸ್.ಆರ್.ಟಿ.ಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್) ಎಐಟಿಯುಸಿ

ಸಿ.ಗುಂಡಪ್ಪ ಅಧ್ಯಕ್ಷರು (ಅ.ಕ.ರಾ.ರ.ಸಾ ಮತ್ತು ಬೆಂ.ಮ.ಸಾ.ಸಂ. ಕಾರ್ಮಿಕರ ಮಹಾಮಂಡಳಿ)

ಸೈಯದ್ ನೂರ್ ಉಲ್ಲಾ ಹುಸೇನ್ ಪ್ರಧಾನ ಕಾರ್ಯದರ್ಶಿ, (ಕೆ.ಎಸ್.ಆರ್.ಟಿ.ಸಿ. ಮುಸ್ಲಿಂ ನೌಕರರ ಸಂಘ)

ಎ.ಆರ್.ಚೌವ್ಹಾಣ ಅಧ್ಯಕ್ಷರು, (ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘ)

ಕಾರ್ಮಿಕರ ಮುಷ್ಕರದ ಪ್ರಚಾರ ನಡೆದು ಸಂಚಲನ ಮೂಡಿದಂತೆ ಕನಲಿದ ಸಾರಿಗೆ ಸಂಸ್ಥೆ ಆಡಳಿತ ಮಂಡಳಿಯು ಎಂದಿನಂತೆ ತನ್ನ ದಮನಕಾರಿ ದಾರಿ ಹಿಡಿದಿದೆ. ಸಿಐಟಿಯುಗೆ ಸೇರ್ಪಡೆ ಹೊಂದಿದ ಕ.ರಾ.ರ.ಸಾ. ನಿಗಮಗಳ ನೌಕರರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಅವರನ್ನು ಅವರೀಗ ಕೆಲಸ ಮಾಡುತ್ತಿರುವ ಕುಣಿಗಲ್ ಡಿಪೋನಿಂದ ಬೀದರ್ ಜಿಲ್ಲೆಗೆ ವರ್ಗಾವಣೆ ಮಾಡಿದೆ. ಈ ರೀತಿ ಒಟ್ಟು 7 ಜನರನ್ನು ದೂರ ದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಿದೆ. ಕಾರ್ಮಿಕ ಸಂಘಟನೆಗಳಿಗಿಂತ ಮುಂಚೆಯೇ ಡಿಪೋಗಳಲ್ಲಿ ಗೇಟ್ ಮೀಟಿಂಗ್ ಮಾಡಿ ನೌಕರರನ್ನು ಬೆದರಿಸಿ, ಕಾರ್ಮಿಕ ಮುಖಂಡರನ್ನು ದೂರದೂರಿಗೆ ವರ್ಗಾಯಿಸಿ ಬಿಟ್ಟು ಕಾರ್ಮಿಕ ಚಳುವಳಿಯನ್ನು ದಮನ ಮಾಡಬಹುದು ಎಂದು ಆಡಳಿತ ಮಂಡಳಿ ಹಾಗೂ ಸರ್ಕಾರ ಭಾವಿಸಿವೆ. ಆಳುವ ಜನ ಚರಿತ್ರೆಯಿಂದ ಯಾವ ಪಾಠವನ್ನು ಕಲಿಯುವುದಿಲ್ಲ ಎನ್ನುವುದಕ್ಕೆ ಇದೇ ಒಂದು ಒಳ್ಳೆಯ ಉದಾಹರಣೆಯಾಗಿದೆ.


2 ಲಕ್ಷಕ್ಕೂ ಹೆಚ್ಚು ಸರ್ಕಾರಿ ನೌಕರರನ್ನು ವಜಾ ಮಾಡಿದವರು ಕೊನೆಗೆ ಏನಾದರೂ ಎಂದು ಸ್ವಲ್ಪ ಯೋಚಿಸಿದರೆ ಬಿಜೆಪಿ ಸರ್ಕಾರಕ್ಕೂ, ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಗೂ ಒಳ್ಳೆಯದೇನೋ. ಸರ್ಕಾರದ ದಮನಕಾರಿ ನೀತಿಯ ವಿರುದ್ಧ ಕುಣಿಗಲ್‌ನಲ್ಲಿ ಪ್ರತಿಭಟನೆ ನಡೆದಿದೆ. ಇತರೆಡೆಯೂ ಪ್ರತಿಭಟನೆಗಳು ತೀವ್ರಗೊಳ್ಳಲಿವೆ.

'ಸತ್ಯಂ' ಅಧ್ಯಕ್ಷನಿಂದ 8,000 ಕೋಟಿ ಪಂಗನಾಮ

'ಸತ್ಯಂ ಮಿಥ್ಯಂ!'

53,000 ನೌಕರರ ಸ್ಥಿತಿ ಡೋಲಾಯಮಾನ

ಕಾರ್ಪೊರೇಟ್ ವಲಯದ ಕಂಪನಿಗಳ ಅನೀತಿ, ಬಂಡವಾಳಿಗರ ಮೋಸ, ವಂಚನೆಗೆ 'ಸತ್ಯಂ' ಹಗರಣ ಒಂದು ಸಾಕ್ಷಿಯಾಗಿದೆ.



"ನಾನು ಒಂದೂವರೆ ವರ್ಷದ ಹಿಂದೆಯಷ್ಟೆ ಸತ್ಯಂ ಕಂಪನಿಗೆ ಸೇರಿದೆ. ಆಗ ಕಂಪನಿಯು ಎರಡು ವರ್ಷ ಕಾಲ ಕಡ್ಡಾಯ ಸೇವೆ ಸಲ್ಲಿಸಬೇಕೆಂದು ರೂ. 2.0 ಲಕ್ಷ ಬಾಂಡ್ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡಿತು. ನನ್ನ ಲೈಫ್ ಸೆಟ್ಲ್ ಆಯ್ತು ಅಂದ್ಕೊಂಡೆ. ನಂತರ ಕಳೆದ 3-4 ತಿಂಗಳ ಹಿಂದೆ ನನಗೆ ಹಲವಾರು ಒಳ್ಳೆಯ ಉದ್ಯೋಗವಕಾಶಗಳು ಸಿಕ್ಕಿದ್ರೂನೂ, ಬಾಂಡ್ ಒಪ್ಪಂದದಿಂದಾಗಿ ನಾನು ಹೊಸ ಅವಕಾಶಗಳೆಲ್ಲವನ್ನೂ ತಿರಸ್ಕರಿಸಬೇಕಾಯಿತು. ಆದ್ರೆ, ಇವತ್ತು ಹೊಸ ಕೆಲಸ ಎಲ್ಲೂ ಸಿಗ್ದೆ ಇರೋ ಪರಿಸ್ಥಿತಿ ಇದೆ, ಮತ್ತೆ, ಸತ್ಯಂನಿಂದ ಮುಂದಿನ ತಿಂಗಳು ಸಂಬ್ಳ ಬರುತ್ತೇ ಅನ್ನೋ ಭರವಸೆ ಕೂಡ ಇಲ್ಲ. ಮದುವೆಯಾಗೋಣಾಂತ ಹುಡುಗಿ ಹುಡ್ಕ್ತಾ ಇದ್ದೆ. ಈಗ ನನ್ಮುಂದೆ ಇರೋದು ಒಂದು ಕ್ವೆಶ್ಚನ್ ಮಾರ್ಕ್ ಅಷ್ಟೆ...."

- ಸತ್ಯಂ ಉದ್ಯೋಗಿಯೊಬ್ಬನ ಅಳಲು

"ನಮ್ಮ ಬಾಸ್ಸು, ಕಂಪನಿ ದುಡ್ಡೆಲ್ಲಾನೂ ಲೂಟಿ ಮಾಡಿ ತೆಲಂಗಾಣದಲ್ಲಿ ರೈತರ ಭೂಮಿ ಕೊಂಡ್ಕೊಂಡು ರಿಯಲ್ ಎಸ್ಟೇಟ್ ದಂಧೆಗೆ ಹಾಕ್ಕೊಂಡಿದ್ದಾನೆ. ದುಡ್ಡುಗೋಸ್ಕರ ತಾನೇ ಸಾಕಿ ಬೆಳೆಸಿದ ಮಗೂನ ತಾನೇ ಕೊಂದಾಕ್ಬಿಟ್ಟ, ಬಡ್ಡೀಮಗ..

ಯಾರಪ್ಪ ಸಂಪಾದ್ನೆ ಮಾಡಿದ್ರೂ ದುಡ್ಡೆಲ್ಲ. ಸತ್ಯಂ ಎಂಪ್ಲಾಯಿಗಳು, ಸಣ್ಣ ಹೂಡಿಕೆದಾರರು ಬೆವರ್ ಸುರ್ಸಿ ಉಳ್ಸಿದ್ದನ್ನು ನೆಲಸಮ ಮಾಡ್ಬಿಟ್ಟ. . ."

- ಮತ್ತೊಬ್ಬ ಉದ್ಯೋಗಿ.

ಭಾರತೀಯ ಕಾರ್ಪೊರೇಟ್ ಇತಿಹಾಸದಲ್ಲೇ ಅತಿ ದೊಡ್ಡ ವಂಚನೆ:

ಭಾರತದ 4ನೇ ಅತಿ ದೊಡ್ಡ ಮಾಹಿತಿ ತಂತ್ರಜ್ಞಾನ ಕಂಪನಿ ಎಂಬ ಹೆಗ್ಗಳಿಕೆ ಹೊಂದಿದ್ದ ಹಾಗೂ ಇತ್ತೀಚೆಗಷ್ಟೆ ಅತ್ಯುತ್ತಮ ವ್ಯಾಪಾರ ನಿರ್ವಹಣೆಗಾಗಿ 'ಗೋಲ್ಡನ್ ಪಿಕಾಕ್ ಗ್ಲೋಬಲ್' ಪ್ರಶಸ್ತಿಯನ್ನು ಸಹ ಪಡೆದಿದ್ದ ಮೆ: ಸತ್ಯಂ ಕಂಪ್ಯೂಟರ್ ಸರ್ವೀಸಸ್ ಕಂಪನಿಯು ಸುಮಾರು ರೂ. 8,000 ಕೋಟಿ ಸುಳ್ಳು ಲೆಕ್ಕವನ್ನು ತೋರಿಸುತ್ತಾ ಬಂದಿದ್ದೇನೆಂದು ಅಧಿಕೃತವಾಗಿ ಘೋಷಿಸಿಕೊಂಡಿದೆ. ಇದರಿಂದಾಗಿ ಕಂಪನಿಯ 53,000 ಐಟಿ ತಂತ್ರಜ್ಞರು ಮತ್ತು ಲಕ್ಷಾಂತರ ಸಣ್ಣ ಹೂಡಿಕೆದಾರರ ಸ್ಥಿತಿ ಡೋಲಾಯಮಾನದಲ್ಲಿದೆ. ಐಟಿ ಉದ್ಯೋಗಿಗಳು, ಸಣ್ಣ ಹೂಡಿಕೆದಾರರು ಮತ್ತು ಗ್ರಾಹಕರು ತೀವ್ರ ಆಘಾತ ಮತ್ತು ಆಕ್ರೋಶಗೊಂಡಿದ್ದಾರೆ.



ರಾಮಲಿಂಗರಾಜು

ಮುಕ್ತ ವ್ಯಾಪಾರ ಆರ್ಥಿಕ ವ್ಯವಸ್ಥೆಯಲ್ಲಿ ಖಾಸಗಿ ಕಂಪನಿ ಆಡಳಿತ ನಿರ್ವಹಣೆ (Corporate Governance) ಯನ್ನು ಉಘೇ ಉಘೇ ಎನ್ನುವಷ್ಟರ ಮಟ್ಟಿಗೆ ಹೊಗಳಿ ಅಟ್ಟಕ್ಕೇರಿಸಲಾಗಿತ್ತು. ಆದರೀಗ ಖಾಸಗಿ ಕಂಪನಿ ನಿರ್ವಹಣೆಯಲ್ಲಿರುವ ದೊಡ್ಡ ಹುಳುಕುಗಳನ್ನು ಪ್ರಸ್ತುತ ವಂಚನೆಯು ಬಯಲಿಗೆಳೆದಿದೆ. ಅಲ್ಲದೆ, ಭಾರತದ ವ್ಯಾಪಾರ ಇತಿಹಾಸದಲ್ಲೇ ಅತಿ ದೊಡ್ಡ ಮೋಸದ ಹಗರಣ ಇದಾಗಿದೆ. ಒಂದು ಕಂಪನಿ ಮತ್ತು ಉದ್ಯಮ ಕ್ಷೇತ್ರಕ್ಕೆ ಇರಬೇಕಾದ ಪಾರದರ್ಶಕತೆ ಮತ್ತು ಸರ್ಕಾರ ಕೈಗೊಳ್ಳಬೇಕಾದ ನಿಯಂತ್ರಣ ವ್ಯವಸ್ಥೆಯ ಕಟ್ಟುನಿಟ್ಟಿನ ಅಗತ್ಯತೆಗಳನ್ನು ಇದು ಒತ್ತಿ ಹೇಳುತ್ತದೆ.

ಸತ್ಯಂ ಕಂಪನಿಯ ಏಳಿಗೆ;

ರಾಮಲಿಂಗ ರಾಜುರವರು 1987ರಲ್ಲಿ ಸತ್ಯಂ ಕಂಪನಿಯನ್ನು ಸ್ಥಾಪಿಸಿದರು. ಆಗ ಕೇವಲ 20 ಮಂದಿ ಉದ್ಯೋಗಿಗಳನ್ನು ಹೊಂದಿದ್ದ ಕಂಪನಿಯು ಪ್ರಸ್ತುತದಲ್ಲಿ, 53,000 ಉದ್ಯೋಗಿಗಳನ್ನು ಹೊಂದಿದ್ದು, ಭಾರತ, ಅಮೇರಿಕ, ಕೆನಡಾ, ಬ್ರೆಜಿಲ್, ಬ್ರಿಟನ್, ಚೀನಾ, ಹಂಗೇರಿ, ಈಜಿಪ್ಟ್, ಯುಎಇ, ಮಲೇಷ್ಯಾ, ಸಿಂಗಪುರ ಮತ್ತು ಆಸ್ಟ್ರೇಲಿಯಾಗಳಲ್ಲಿ ತನ್ನ ನೆಲೆಗಳನ್ನು ಹೊಂದಿದೆ.

ಫಾರ್ಚ್ಯೂನ್ 500 ಕಂಪನಿಗಳ ಪಟ್ಟಿಯಲ್ಲಿರುವ ಸುಮಾರು 180ಕ್ಕೂ ಹೆಚ್ಚು ಕಂಪನಿಗಳೂ ಸೇರಿದಂತೆ ಒಟ್ಟು 700 ಕಂಪನಿಗಳಿಗೆ ಕನ್ಸಲ್ಟಿಂಗ್, ಹೊರಗುತ್ತಿಗೆ ಸೇವೆಯನ್ನು ಸತ್ಯಂ ಕಂಪನಿ ಒದಗಿಸುತ್ತಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ವಿಪ್ರೋ, ಇನ್ಫೋಸಿಸ್‌ನಂತೆ ಸದಾ ಒಳ್ಳೆಯ ಲಾಭಾಂಶಗಳನ್ನು ಕಂಪನಿಯು ಘೋಷಿಸುತ್ತಿತ್ತು. ಈಗ, ಕಂಪನಿ ಮುಖ್ಯಸ್ಥನ ಆಘಾತಕಾರಿ ಹೇಳಿಕೆಯಿಂದ ಇವೆಲ್ಲ ಗ್ರಾಹಕರು ಎಚ್ಚೆತ್ತುಕೊಂಡಿದ್ದಾರೆ.

ಕಳೆದ ತಿಂಗಳು, ವಿಶ್ವ ಬ್ಯಾಂಕಿನಲ್ಲಿ ತನ್ನ ಕಂಪನಿಗೆ ಕಂಟ್ರಾಕ್ಟ್ ಗಿಟ್ಟಿಸಲು ವಿಶ್ವಬ್ಯಾಂಕಿನ ಅಧಿಕಾರಿಗಳಿಗೆ ಸತ್ಯಂ ಕಂಪನಿಯ ಷೇರುಗಳನ್ನು ಲಂಚವಾಗಿ ನೀಡಿರುವುದು ಸಾಬೀತಾಗಿತ್ತು. ಈ ಹಿನ್ನೆಲೆಯಲ್ಲಿ, ಸತ್ಯಂ ಕಂಪನಿಯು ತನ್ನ ಯಾವುದೇ ವ್ಯಾಪಾರ ವ್ಯವಹಾರಗಳೊಂದಿಗೆ ವಹಿವಾಟು ಮಾಡದಂತೆ ವಿಶ್ವಬ್ಯಾಂಕ್ 8 ವರ್ಷಗಳ ನಿಷೇಧ ವಿಧಿಸಿತ್ತು. ತಾನು ಅಂತಹ ಯಾವುದೇ ಲಂಚ ವ್ಯವಹಾರದಲ್ಲಿ ಭಾಗಿಯಾಗಿಲ್ಲವೆಂದು ಮತ್ತು ಇಂತಹ ನಿಷೇಧದಿಂದ ತನ್ನ ಕಂಪನಿಯ ಪ್ರತಿಷ್ಠೆ ಮತ್ತು ಗೌರವಕ್ಕೆ ಧಕ್ಕೆಯುಂಟಾಗಿದ್ದು ವಿಶ್ವಬ್ಯಾಂಕ್ ವಿರುದ್ಧ ನ್ಯಾಯಾಲಯದಲ್ಲಿ ಕಟ್ಲೆ ಹೂಡುವುದಾಗಿ ಕಂಪನಿ ಮುಖ್ಯಸ್ಥ ರಾಮಲಿಂಗರಾಜು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದರು.

ನಂತರದಲ್ಲಿ, ರಾಮಲಿಂಗರಾಜುರವರ ಮಗ ವ್ಯವಸ್ಥಾಪಕ ನಿರ್ದೇಶಕರಾಗಿರುವ ಮೈತಾಸ್ ಕಂಪನಿಯ ಷೇರುಗಳನ್ನು ಸತ್ಯಂ ಕಂಪನಿಗೆ ವರ್ಗಾಯಿಸಲು ಕ್ರಮ ಕೈಗೊಂಡಿದ್ದರು. ಇದಕ್ಕೆ ಕಂಪನಿಯ ಹೂಡಿಕೆದಾರರಿಂದ ಭಾರೀ ವಿರೋಧ ವ್ಯಕ್ತವಾಯಿತು. ಇದೇ ಕಾರಣಕ್ಕಾಗಿ ಕಂಪನಿಯ ಇಬ್ಬರು ನಿರ್ದೇಶಕರು ರಾಜೀನಾಮೆ ಸಲ್ಲಿಸಿದ್ದರು. ಈ ಘಟನೆ ಕುರಿತು ಷೇರು ಮತ್ತು ಹಣಕಾಸು ಮಾರುಕಟ್ಟೆ ನಿಯಂತ್ರಕ (ಸೆಬಿ) ತನಿಖೆ ನಡೆಸಲಾರಂಭಿಸಿತ್ತು.

ಬಂಡವಾಳ ಹೂಡಿಕಾ ಕಂಪನಿಯಿಂದ ದಡ ಸೇರಲು ಸತ್ಯಂ ಯತ್ನ:

ಸತ್ಯಂ ಕಂಪನಿಯು ಪಾತಾಳದಿಂದ ಮೇಲೆದ್ದು ದಡ ಸೇರಲು ಕೊರತೆಯಿರುವ ಬಂಡವಾಳವನ್ನು ತರುವ ಸಲುವಾಗಿ ಡಿಎಸ್‌ಪಿ ಮೆರಿಲ್ ಲಿಂಕ್ ಎಂಬ ಬಂಡವಾಳ ಹೂಡಿಕಾ ಕಂಪನಿಯನ್ನು ತನ್ನ ಮಾರ್ಗದರ್ಶನಕ್ಕಾಗಿ ನೇಮಿಸಿಕೊಂಡಿತು. ಡಿಎಸ್‌ಪಿ ಮೆರಿಲ್ ಲಿಂಕ್ ಕಂಪನಿಯ ಮಾತೃ ಕಂಪನಿಯು ಇತ್ತೀಚೆಗೆ ಅಮೇರಿಕಾದಲ್ಲಿ ದಿವಾಳಿಯಾಗಿ ಬ್ಯಾಂಕ್ ಆಫ್ ಅಮೇರಿಕಾದೊಂದಿಗೆ ವಿಲೀನವಾಯಿತೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸತ್ಯಂ ಕಂಪನಿಯ ಲೆಕ್ಕ ಪತ್ರಗಳೆಲ್ಲವನ್ನೂ ಪರಿಶೀಲಿಸಿದ ಡಿಎಸ್‌ಪಿ ಮೆರಿಲ್ ಲಿಂಕ್, ಕಂಪನಿಯ ಲೆಕ್ಕ ಪತ್ರಗಳಲ್ಲಿ ಗೋಲ್‌ಮಾಲ್ ನಡೆದಿದ್ದು, ಸಂಪೂರ್ಣ ತೇಪೆ ಹಾಕಿರುವುದನ್ನು ಗಮನಿಸಿತು. ಯಾವುದೇ ಬಂಡವಾಳ ತಂದು ಸತ್ಯಂನ್ನು ಸರಿಮಾಡಲು ತನಗಾಗದೆಂದು ಡಿಎಸ್‌ಪಿ ಮೆರಿಲ್ ಲಿಂಕ್ ಕಂಪನಿಯು ಸೆಬಿಗೆ ವರದಿ ಮಾಡಿ ತೆಪ್ಪಗಾಯಿತು. ಇದಾದ ನಂತರ ಸತ್ಯಂ ಅಧ್ಯಕ್ಷ ರಾಮಲಿಂಗರಾಜು ಮಾಡುವುದಕ್ಕೇನೂ ಬೇರೆ ಆಯ್ಕೆಗಳಿರಲಿಲ್ಲ.

ಸತ್ಯಂ ಕಂಪನಿಯ ಮುಖ್ಯಸ್ಥ ರಾಜೀನಾಮೆ:

ಹಲವಾರು ವರ್ಷಗಳಿಂದ ವಾಸ್ತವ ಲಾಭಾಂಶಕ್ಕಿಂತ ಹೆಚ್ಚಿನ ಲಾಭವನ್ನು ಕಂಪನಿಯ ಲೆಕ್ಕಪತ್ರಗಳಲ್ಲಿ ತೋರಿಸುತ್ತಾ ಬಂದಿದ್ದೇನೆಂದು ಮತ್ತು ಕಂಪನಿಯ ವ್ಯಾಪಾರ ಚಟುವಟಿಕೆಯನ್ನು ಇನ್ನಷ್ಟು ವಿಸ್ತರಿಸುವ ಸಲುವಾಗಿ ಹೂಡಿಕೆದಾರರು ಮತ್ತು ಗ್ರಾಹಕರನ್ನು ನಂಬಿಸಲು ಹೀಗೆ ಮಾಡಿದ್ದಾಗಿ ಸತ್ಯಂ ಕಂಪನಿಯ ಮುಖ್ಯಸ್ಥ ರಾಮಲಿಂಗ ರಾಜು ತಪ್ಪೊಪ್ಪಿಕೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ರಾಮಲಿಂಗ ರಾಜು ರಾಜಿನಾಮೆ ನೀಡಿದ ಎರಡು ದಿನಗಳ ಹಿಂದೆಯೇ ಕಂಪನಿಯ ಹಣಕಾಸು ಮುಖ್ಯಸ್ಥ ಕೂಡ ರಾಜೀನಾಮೆ ನೀಡಿ ಆಘಾತದ ಮೇಲೆ ಆಘಾತ ಉಂಟು ಮಾಡಿದ್ದಾರೆ.

ಬಂಡವಾಳಶಾಹಿ ಎಂಬ ಹುಲಿಯ ಬೆನ್ನೇರಿದಾಗ

ಅಷ್ಟು ಪ್ರಸಿದ್ದಿ ಮತ್ತು ಮನ್ನಣೆ ಗಳಿಸಿದ್ದ ಸತ್ಯಂ ಕಂಪನಿಯು ಅದ್ಹೇಗೆ ನೆಲ ಕಚ್ಚಿತೆಂದು ತಾವು ನಿರ್ದೇಶಕರ ಮಂಡಳಿಗೆ ಬರೆದಿರುವ ಪತ್ರದಲ್ಲಿ ಅಧ್ಯಕ್ಷ ರಾಮಲಿಂಗರಾಜು ತಿಳಿಸಿದ್ದಾರೆ. ಕಂಪನಿಯ ಬ್ಯಾಂಕ್ ಬ್ಯಾಲೆನ್ಸ್‌ನಲ್ಲಿ ಹೆಚ್ಚು ಹಣವಿದೆಯೆಂದು, ಕಂಪನಿಗೆ ಬರಬೇಕಿರುವ ಬಡ್ಡಿ ದೊಡ್ಡ ಮೊತ್ತದ್ದೆಂದು, ಸಾಲಗಾರರಿಂದ ಬರಬೇಕಿರುವ ಹಣ ಹೆಚ್ಚಿನದೆಂದು, ಹೀಗೆ ಸುಳ್ಳುಗಳ ಸರಮಾಲೆಯನ್ನೇ ಪೋಣಿಸುತ್ತಾ ಬರಲಾಗಿದೆ. ಅವರು ಪತ್ರದಲ್ಲಿ ದಾಖಲಿಸಿರುವ ಮುಖ್ಯಾಂಶಗಳು:

"ಕಂಪನಿಯ ವಾಸ್ತವ ಲಾಭ ಮತ್ತು ಬ್ಯಾಲೆನ್ಸ್ ಶೀಟ್‌ನಲ್ಲಿನ ನಡುವಿನ ಅಂತರ ಕಳೆದ ಹಲವಾರು ವರ್ಷಗಳ ಅವಧಿಯಲ್ಲಿ ಏರಿಸಿದ ಲಾಭದ ಸುಳ್ಳು ಲೆಕ್ಕದಿಂದ ಉಂಟಾಗಿದೆ. ನಿಜವಾದ ನಿರ್ವಹಣಾ ಲಾಭ ಮತ್ತು ಪುಸ್ತಕದಲ್ಲಿನ ದಾಖಲೆಯಲ್ಲಿರುವ ಈ ಅಂತರ, ವರ್ಷಾಂತರದಲ್ಲಿ ಬೆಳೆಯುತ್ತ ಹೋಗಿದೆ. ಕಂಪನಿಯ ವ್ಯವಹಾರಗಳು ಬೆಳೆಯುತ್ತ ಹೋದಂತೆ ಈ ಅಂತರವೂ ಊಹಿಸಲಾರದಷ್ಟು ಬೃಹದಾಕಾರ ತಾಳಿಬಿಟ್ಟಿದೆ.

ಜಯ

ಈ ಅಂತರ ತಗ್ಗಿಸಲು ಮಾಡಿದ ಯತ್ನಗಳೆಲ್ಲ ವಿಫಲವಾದವು. ಈ ಸುಳ್ಳು ಲೆಕ್ಕ ಬಹಿರಂಗಗೊಂಡರೆ ಕಂಪನಿ ಪ್ರಗತಿಗೆ ಕಷ್ಟ. ಸ್ಪರ್ಧಿಗಳು (ಇತರೆ ಕಂಪನಿಗಳು) ನಮ್ಮನ್ನು ಮೀರಿಸಿ ಬೆಳೆಯಬಹುದು. ಹೂಡಿಕೆದಾರರ ಮೇಲೂ ಪರಿಣಾಮವಾಗಬಹುದು ಎಂಬುದೇ ನನ್ನ ಕಾಳಜಿಯಾಗಿತ್ತು. ಇದಕ್ಕೆ ಕುಗ್ಗದೇ, ನಾನೇ ಏರಿದ ಹುಲಿಗೆ ಆಹುತಿಯಾಗದೆ ಕೆಳಗಿಳಿಯುವುದು ಹೇಗೆಂದು ತಿಳಿಯದೆ ಪರಿತಪಿಸಿದೆ. ಅಕ್ಷರಶಃ ಇದೊಂದು ರೀತಿ ಹುಲಿಯ ಮೇಲಿನ ಸವಾರಿಯಾಗಿತ್ತು.

ಮೈತಾಸ್ ಕಂಪನಿ ಸ್ವಾಧೀನ ಒಪ್ಪಂದ ಕೈಬಿಟ್ಟಿದ್ದೂ ಈ ಸುಳ್ಳನ್ನು, ಕಾಲ್ಪನಿಕ ಆಸ್ತಿಯನ್ನು ವಾಸ್ತವವಾಗಿಸುವ ಕಡೆಯ ಪ್ರಯತ್ನವಾಗಿತ್ತು. ನನ್ನ ಸಂಗಾತಿಗಳಾಗಲೀ, ನಾನಾಗಲೀ, ವ್ಯವಸ್ಥಾಪಕ ನಿರ್ದೇಶಕರಾಗಲೀ ಕಳೆದ ಎಂಟು ವರ್ಷಗಳಲ್ಲಿ ಯಾವ ಷೇರನ್ನೂ ಮಾರಾಟ ಮಾಡಿಲ್ಲ. ಕಂಪನಿಯಿಂದ ಒಂದೇ ಒಂದು ರೂಪಾಯಿಯನ್ನೂ ಪಡೆದಿಲ್ಲ; ಈ ಹೆಚ್ಚಿಸಿದ ಸುಳ್ಳು ಲೆಕ್ಕದಿಂದ ಲಾಭ ಮಾಡಿಕೊಂಡಿಲ್ಲ."

ವಿಶ್ವ ಆರ್ಥಿಕ ವ್ಯವಸ್ಥೆ ಬಿಕ್ಕಟ್ಟು ಮತ್ತು ವಂಚನೆಗಳ "ಡಬಲ್ ಇಂಪ್ಯಾಕ್ಟ್"

ಅಮೇರಿಕಾದ ಅಡಮಾನ ಸಾಲ ಬಿಕ್ಕಟ್ಟು ಮತ್ತು ಸಬ್ ಪ್ರೈಮ್ ಬಿಕ್ಕಟ್ಟುಗಳಿಂದ ಬಹುತೇಕ ಇಡೀ ವಿಶ್ವ ಆರ್ಥಿಕ ವ್ಯವಸ್ಥೆಯೇ ಬಿಕ್ಕಟ್ಟಿನಲ್ಲಿದೆ. ಭಾರತದಲ್ಲೂ ಸಹ ಷೇರುಪೇಟೆಯಲ್ಲಿ ರಾಕೆಟ್ ವೇಗದಲ್ಲಿ ಮೇಲೇರುತ್ತಿದ್ದ ಮಾಹಿತಿ ತಂತ್ರಜ್ಞಾನ (ಐಟಿ) ಕಂಪನಿಗಳ ಷೇರುಬೆಲೆಗಳು ಇದೇ ಕಾರಣದಿಂದಾಗಿ

[illegible]

ಕಟ್ಟಡ - ಇತರೆ ನಿರ್ಮಾಣ ಮಾಡುವ ಕಾರ್ಮಿಕರ ಬದುಕು ಅಭದ್ರತೆಯಲ್ಲಿದೆ. ಸಂಘಟನಾ ಪ್ರಜ್ಞೆಯ ಕೊರತೆ ಅವರನ್ನು ಹೆಚ್ಚು ಶೋಷಣೆಗೆ ಈಡುಮಾಡಿದೆ. ಅಂತಹವರನ್ನು ಸಂಘಟಿಸಲು ನಡೆದಿರುವ ಯತ್ನ ಇಲ್ಲಿ


ಅಭದ್ರತೆಯಲ್ಲಿ ಕಟ್ಟಡ ಕಾರ್ಮಿಕರು ಸಂಘಟಿಸುವುದರತ್ತ ಸಮ್ಮೇಳನ

ಬೆಂಗಳೂರಿನಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳು ನಡೆಯದೇ ಇರುವ ರಸ್ತೆಗಳು ಪ್ರದೇಶಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಕಟ್ಟಡಗಳ ನಿರ್ಮಾಣ, ಅಪಾರ್ಟ್‌ಮೆಂಟ್‌ಗಳ ನಿರ್ಮಾಣ, ದೊಡ್ಡ ದೊಡ್ಡ ಮೇಲ್ಸೇತುವೆಗಳ ನಿರ್ಮಾಣ, ಮೆಟ್ರೋ ರೈಲು ಸೇತುವೆ ಮುಂತಾದ ನಿರ್ಮಾಣ ಕೆಲಸಗಳು 50 ಕಿ.ಮೀ ಸುತ್ತಳತೆಯಲ್ಲಿ ನಡೆಯುತ್ತಿದ್ದು ಇಂದು ಕಟ್ಟಡ ನಿರ್ಮಾಣ ಕೈಗಾರಿಕೆ ಬೆಂಗಳೂರಿನಲ್ಲಿ ಪ್ರಧಾನವಾಗಿ ಕಾಣಬರುತ್ತದೆ.

ಬೆಂಗಳೂರಿನ ಈ ನಿರ್ಮಾಣ ಕೆಲಸಗಳಿಗೆ ಕಾವೇರಿ ನದಿಗೆ ಕೆ.ಆರ್.ಸಾಗರದಲ್ಲಿ ಆಣೆಕಟ್ಟು ಕಟ್ಟಿದಾಗಿನಿಂದ ದೊಡ್ಡ ಚಾಲನೆ ಎಂದು ಹೇಳಬಹುದೇನೋ! ಶಿಂಸಾದಲ್ಲಿನ ವಿದ್ಯುತ್ ಉತ್ಪಾದನೆಯನ್ನು ಕೆ.ಜಿ.ಎಫ್.ಗೆ ಸರಬರಾಜು ಮಾಡಲು ಆರಂಭವಾದ ಕೆಲವು ವರ್ಷಗಳಲ್ಲಿ ದೇಶಕ್ಕೆ ಸ್ವತಂತ್ರ ಬಂದ ನಂತರ ವಿದ್ಯುತ್ ಅಭಾವವಿಲ್ಲದ ಬೆಂಗಳೂರಿಗೆ ದೊಡ್ಡ ಸಾರ್ವಜನಿಕ ಕೈಗಾರಿಕೆಗಳಾದ ಬಿಹೆಚ್‌ಇಎಲ್, ಬಿಇಎಲ್, ಬಿಇಎಂಎಲ್, ಐಟಿಐ, ಹೆಚ್‌ಎಂಟಿ ಮುಂತಾದ ಕೈಗಾರಿಕೆಗಳು ಬರುತ್ತಿದ್ದಂತೆ ನಿರ್ಮಾಣ ಕೆಲಸಗಳು ತೀವ್ರಗೊಂಡು ನಂತರ ಐ.ಟಿ. ಕ್ಷೇತ್ರ ಬೆಂಗಳೂರಿನಲ್ಲಿ ನೆಲೆಯೂರಿದ ಮೇಲೆ ದೊಡ್ಡ ಫ್ಲಾಟ್‌ಗಳು, ಮಾಲ್‌ಗಳು, ಮೇಲ್ಸೇತುವೆಗಳ ನಿರ್ಮಾಣಗಳು ಅಸಂಖ್ಯಾತವಾಗಿ ಹೆಚ್ಚಿವೆ.

ಇಂದು ವಿಶ್ವದ ಆರ್ಥಿಕ ಮುಗ್ಗಟ್ಟಿನ ಭಾಗವಾಗಿ ರಿಯಲ್ ಎಸ್ಟೇಟ್ ಐ.ಟಿ. ಕ್ಷೇತ್ರ ಕೈಗಾರಿಕಾ ಕ್ಷೇತ್ರಗಳ ಹಿನ್ನಡೆಯಿಂದಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೈಗಾರಿಕೆಯ ಬೆಳವಣಿಗೆಗೆ ತಡೆಯುಂಟಾಗಿದೆ. ಸರ್ಕಾರದ ಬಡ್ಡಿ ಕಡಿಮೆ ಮಾಡುವ ಕ್ರಮಗಳು, ಮರಳು, ಕಬ್ಬಿಣ, ಸಿಮೆಂಟ್ ಮುಂತಾದ ವಸ್ತುಗಳ ಬೆಲೆಗಳು ಇಳಿದಿರುವುದರಿಂದ ಮತ್ತೆ ಚೇತರಿಸಿಕೊಂಡು ನಡೆಯುವ ಎಲ್ಲಾ ಸಾಧ್ಯತೆಗಳು ಕಾಣಬರುತ್ತಿದೆ.

ಎಂದು ಬೆಂಗಳೂರಿಗೆ ಸಾರ್ವಜನಿಕ ಕೈಗಾರಿಕೆಗಳು ಬರಲು ಆರಂಭಿಸಿದವೋ ಅಂದಿನಿಂದ ನಿರ್ಮಾಣ ಕೆಲಸಕ್ಕೆ ಬೇಕಾದ ಕಾರ್ಮಿಕರ ಬೇಡಿಕೆಯು ಹೆಚ್ಚಾಗಿ ಪಕ್ಕದ ತಮಿಳುನಾಡಿನಿಂದ ವಲಸೆ ಬಂದ ಕಾರ್ಮಿಕರು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ದುಡಿಯಲು ಆರಂಭಿಸಿದರು. 2000 ಇಸವಿ ನಂತರ ನಿರ್ಮಾಣ ಕೆಲಸಗಳ ವೇಗ ಹೆಚ್ಚಾಯಿತು ಮತ್ತು ಆಧುನಿಕ ರೀತಿಯ ಕಟ್ಟಡಗಳ ನಿರ್ಮಾಣದಲ್ಲಿ ಕಟ್ಟಡಗಳಿಗೆ ಟೈಲ್ಸ್, ಗ್ಲಾಸ್ ಮುಂತಾದವುಗಳನ್ನು ಅಳವಡಿಸುವ ಕಾರ್ಮಿಕರ ಬೇಡಿಕೆ ಹೆಚ್ಚಾಯಿತು. ಇದರಿಂದ ಇಂದು ಉತ್ತರ ಭಾರತದ ಜನ ದೊಡ್ಡ ರೀತಿಯಲ್ಲಿ ಕಟ್ಟಡ ಕೆಲಸದಲ್ಲಿ ತೊಡಗಿದ್ದಾರೆ. ಇಂದು ಕಟ್ಟಡ ನಿರ್ಮಾಣದ ಕೆಲಸದಲ್ಲಿ ಭಾರತದ ಎಲ್ಲಾ ರಾಜ್ಯಗಳ ಕಾರ್ಮಿಕ ಎಲ್ಲಾ ಭಾಷೆಗಳನ್ನು ಆಡುವ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.



ದಯನೀಯ ಸ್ಥಿತಿ

ಕಾರ್ಮಿಕರ ಸಾಮಾಜಿಕ ಪರಿಸ್ಥಿತಿ ತುಂಬಾ ದಯನೀಯವಾಗಿದೆ. ಅವರು ವಾಸಿಸುವ ಷೆಡ್‌ಗಳು ಕನಿಷ್ಠ ಮಾನವ ಅವಶ್ಯಕತೆಗಳನ್ನು ಹೊಂದಿರುವುದಿಲ್ಲ. ಕೂಲಿ ನೀಡುವುದರಲ್ಲಿಯೂ ದೊಡ್ಡ ರೀತಿಯ ವ್ಯತ್ಯಾಸವಿದೆ ಮತ್ತು ಕೆಲಸ ಎಲ್ಲ ಕಾಲದಲ್ಲಿಯೂ ನಡೆಯದೇ ಇರುವುದರಿಂದ ಮತ್ತು ಒಂದು ನಿರ್ಮಾಣದ ಕೆಲಸ ಪೂರ್ಣವಾದ ಮೇಲೆ ಬೇರೆ ಕಡೆ ವಲಸೆ ಹೋಗಬೇಕಾಗಿರುವುದರಿಂದ ಅಭದ್ರತೆಯಿಂದ ಕಾರ್ಮಿಕರು ಜೀವನವನ್ನು ನಡೆಸಬೇಕಾಗಿದೆ.

ದೊಡ್ಡ ರೀತಿಯು ಕಾರ್ಮಿಕರು ವಲಸೆ ಕಾರ್ಮಿಕರಾಗಿದ್ದು, ಉತ್ತರ ಭಾರತದ ಹಲವು ರಾಜ್ಯಗಳಿಂದ ಬಂದವರೇ ಇಂದು ಹೆಚ್ಚಾಗಿದ್ದಾರೆ. ಕರ್ನಾಟಕದ ಗುಲ್ಬರ್ಗ, ರಾಯಚೂರು, ಬಳ್ಳಾರಿಯಿಂದ ಬಂದವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಆಂಧ್ರದಿಂದ ಬಂದವರೂ ಇದ್ದಾರೆ. ತಮಿಳುನಾಡಿ ನಿಂದ ಬಂದವರು ದೊಡ್ಡ ಪ್ರಮಾಣದಲ್ಲಿ ಇದ್ದರೂ ಅವರು ಬೆಂಗಳೂರಿನವರೇ ಆಗಿ ಇಲ್ಲಿಯೇ ವಾಸವಾಗಿರುವುದನ್ನು ಕಾಣಬಹುದಾಗಿದೆ.

ಕಾರ್ಮಿಕರು ವಾಸಿಸುವ ಷೆಡ್‌ಗಳು ಕನಿಷ್ಠ ಮಾನವ ಸೌಲಭ್ಯಗಳಿಲ್ಲದ ಗುಡಿಸಲುಗಳಾಗಿವೆ. ದುಡಿಮೆಯಲ್ಲಿನ ಅಭದ್ರತೆ ಮತ್ತು ಸಂಘಟನಾ ಪ್ರಜ್ಞೆಯ ಕೊರತೆ ಇವರನ್ನು ಇನ್ನೂ ಹೆಚ್ಚಿನ ಕಷ್ಟಕ್ಕೆ ತಳ್ಳುತ್ತಿವೆ. ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಅವಿದ್ಯಾವಂತರಾಗಿದ್ದು ತಮ್ಮ ಮಕ್ಕಳನ್ನು ಶಾಲೆಗೆ ಕಳಿಹಿಸುವುದು ಬಹುತೇಕ ಕಡಿಮೆ ಇದೆ.

ಈ ಕಾರ್ಮಿಕರಲ್ಲಿ ಬಹುತೇಕರು ದಲಿತ, ಹಿಂದುಳಿದ ಜಾತಿಗಳಿಂದ ಬಂದವರೇ ಆಗಿರುತ್ತಾರೆ ಮತ್ತು ಸಮಾಜದ ಅತ್ಯಂತ ಕೆಳವರ್ಗಕ್ಕೆ ಸೇರಿದ ಜನರಾಗಿದ್ದಾರೆ. ಇವರ ಮೇಲೆ ಜಾತಿಯ, ಧರ್ಮದ, ಭಾಷೆಯ ಎಲ್ಲಾ ರೀತಿಯ ಪ್ರಭಾವಗಳು ಇದ್ದು ರಾಜಕಾರಣಿಗಳ ಜನಪ್ರದರ್ಶನಕ್ಕೆ ಸದಾ ಸಿಗುವ ವಿಭಾಗವಾಗಿದ್ದಾರೆ.

ಈ ಕಾರ್ಮಿಕರನ್ನು ಸಂಘಟಿಸಬೇಕೆಂದು 2003 ರಲ್ಲಿ ಬೆಂಗಳೂರಿನಲ್ಲಿ, ಮಂಗಳೂರಿನಲ್ಲಿ, ಉಡುಪಿಯಲ್ಲಿ ಸಿಐಟಿಯು ನಾಯಕತ್ವದಲ್ಲಿ ಕೆಲಸಗಳು ಆರಂಭವಾದವು. ಬೆಂಗಳೂರಿನಲ್ಲಿ 30.7.2003 ರಂದು ಬೆಂಗಳೂರು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘವನ್ನು ಸರ್ಕಾರದಲ್ಲಿ ನೊಂದಾಯಿಸಲಾಯಿತು. ನಂತರ ದಿಣ್ಣೂರು, ಈಜಿಪುರ, ಕೆ.ಆರ್.ಪುರ ಮುಂತಾದ ಪ್ರದೇಶಗಳಲ್ಲಿ ಕಾರ್ಮಿಕರನ್ನು ಸಂಘಟಿಸಲಾಯಿತು. ಕಾರ್ಮಿಕರಿಗೆ ಕೂಲಿ ಕೊಡದೇ ಮೋಸ ಮಾಡುತ್ತಿದ್ದ ಗುತ್ತಿಗೆದಾರರ ಮೇಲೆ ಹಾಗೂ ಅಫಘಾತ ಪರಿಹಾರಕ್ಕಾಗಿ ಹಲವಾರು ಹೋರಾಟಗಳನ್ನು ನಡೆಸಲಾಯಿತು. ಸಿಐಟಿಯು ರಾಜ್ಯಸಮಿತಿಯ ಮಾರ್ಗದರ್ಶನದಲ್ಲಿ 20.09.2004 ಕ್ಕೆ ರಾಜ್ಯ ಸರ್ಕಾರಕ್ಕೆ ಕೇಂದ್ರದ "ಕಟ್ಟಡ ಕಾರ್ಮಿಕರ ಕಾಯ್ದೆ"ಯ ಜಾರಿಗೆ ನಿಯಮಾವಳಿಗಳನ್ನು ರೂಪಿಸಲು ಮನವಿ ಮಾಡಲಾಯಿತು. ಆರು ತಿಂಗಳಾದರೂ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದುದರಿಂದ "ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು)ನ ಮೂಲಕ 15.07.2005 ರಂದು "ವಿಧಾನಸೌಧ ಚಲೋ" ನಡೆಸಿ ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಂತರ ಸರ್ಕಾರ ತ್ರಿಪಕ್ಷೀಯ ಸಮಿತಿ ರಚಿಸಿ 01.11.2006 ಕ್ಕೆ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ನಂಡಳಿ ರಚನೆಯಾಗಿ 2007ರ ಮಾರ್ಚ್ ತಿಂಗಳಿಂದ ಮಂಡಳಿಯಲ್ಲಿ ನೊಂದಣಿ ಕೆಲಸಗಳು ನಡೆಯುತ್ತಿದೆ. ಈಗ 48 ಸಾವಿರ ಕಾರ್ಮಿಕರು ಫಲಾನುಭಾವಿಗಳಾಗಿ ನೊಂದಣಿ ಮಾಡಿಕೊಂಡಿದ್ದಾರೆ.

ಸಿಐಟಿಯು ಮುತುವರ್ಜಿಯೊಂದಿಗೆ ಅಕ್ಟೋಬರ್ 2007 ರಿಂದ 4 ಜನ ಪೂರ್ಣಕಾಲಿಕ ಕಾರ್ಯಕರ್ತರನ್ನು ಕಾರ್ಮಿಕರನ್ನು ಸಂಘಟಿಸಲು ನಿಯೋಜಿಸಿದ ನಂತರ ಕಾರ್ಮಿಕರ ಮಧ್ಯೆ ನಿರಂತರವಾಗಿ ಸಂಘಟಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಕಟ್ಟಡ ಕಾರ್ಮಿಕರನ್ನು ಇತರೆ ಹಲವಾರು ಸಂಘ ಸಂಸ್ಥೆಗಳು ಸಂಘಟಿಸುತ್ತಿವೆ. ಆದರೆ ಸಿಐಟಿಯು ವಿನ ನಾಯಕತ್ವದ ಸಂಘ ಕಾರ್ಮಿಕರ ಹಿತ ಕಾಯುವಲ್ಲಿ ಮುಂಚೂಣಿಯಲ್ಲಿದೆ.

ಈ ವರ್ಷದಲ್ಲಿ ಸಂಘ ನಡೆಸಿದ ಹೋರಾಟಗಳು ಕಾರ್ಯಕ್ರಮಗಳು ಹಲವಾರು ಶಾಂತಿನಗರ, ಕಮಲಾನಗರ, ಪೀಣ್ಯ 2 ನೇಹಂತದಲ್ಲಿ ಸರ್ಕಾರದ ಗುರುತಿನ ಚೀಟಿ ವಿತರಣೆ ಕಾರ್ಯಕ್ರಮಗಳನ್ನು ನಡೆಸಲಾಗಿದೆ. 15.7.2008 ರಂದು ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆ ಬಳಿ ಐದು ಬೇಡಿಕೆಗಳಿಗಾಗಿ ಪ್ರತಿಭಟನೆ ನಡೆಸಲಾಯಿತು. ಈ ಹೋರಾಟ ಕಾರ್ಮಿಕ ಕಾಯ್ದೆ ಜಾರಿಯಾದ ನಂತರದ ಮೊದಲ ಹೋರಾಟವಾಗಿದ್ದು ಸರ್ಕಾರ ಕೆಲವು ಆದೇಶಗಳನ್ನು ರಾಜ್ಯವ್ಯಾಪಿ ಜಾರಿಗೆ ಸುತ್ತೋಲೆ ಹೊರಡಿಸಿತು. ರಾಜ್ಯಸಮಿತಿ ಕರೆಯ ಮೇರೆಗೆ 29.09.2008 ರಂದು ಕಾರ್ಮಿಕ ಭವನದ ಎದುರು ಬೇಡಿಕೆ ದಿನ ಆಚರಣೆ ಮಾಡಲಾಯಿತು. ನಂತರದಲ್ಲಿ ಮಂಡಳಿಯಲ್ಲಿ ನೊಂದಣಿ ಮಾಡಲು ಸಿಬ್ಬಂದಿಯನ್ನು ಸರ್ಕಾರ ನೇಮಿಸಿತ್ತು.

ಚದುರಿದಂತೆ ಕಳೆದ 6 ವರ್ಷಗಳಿಂದ ನಡೆದಿರುವ ಕಾರ್ಮಿಕರನ್ನು ಸಂಘಟಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಲು ದಿನಾಂಕ 28.12.2008ರ ಭಾನುವಾರ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಎನ್.ಜಿ.ಒ. ಹಾಲ್‌ನಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಬೆಂಗಳೂರು ಜಿಲ್ಲಾ ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಿ 7 ಬೇಡಿಕೆಗಳಿಗ್ಗಾಗಿ ಮುಂದೆ ಕಾರ್ಮಿಕರನ್ನು ಸಂಘಟಿಸಲು ಹೋರಾಟ ನಡೆಸಲು ತೀರ್ಮಾನಿಸಿದರು.

3 ವರ್ಷಗಳಲ್ಲಿ ಸದಸ್ಯತ್ವವನ್ನು ಕನಿಷ್ಠ 10 ಸಾವಿರ ಮಾಡುವುದು, ಕಲ್ಯಾಣ ಮಂಡಳಿಯಲ್ಲಿ ನೊಂದಣಿ ಮಾಡುವುದು ಮತ್ತು ವಾರ್ಷಿಕ ಚಂದಾ ಕಟ್ಟುವಂತೆ ಗಮನಹರಿಸುವುದು ಮತ್ತು ಎಲ್ಲರಿಗೂ ಸೌಲಭ್ಯ ಕೊಡಿಸಲು ಕೆಲಸ ಮಾಡುವುದು

ಕಲ್ಯಾಣ ಮಂಡಳಿಯಲ್ಲಿ ನೊಂದಾಯಿತರಾದ ಎಲ್ಲಾ ಕಾರ್ಮಿಕರ ಕುಟುಂಬಕ್ಕೆ ಬಿಪಿಎಲ್ ಕಾರ್ಡ್‌ಗಾಗಿ ಹೋರಾಟ ರೂಪಿಸುವುದು.

ವಲಸೆ ಕಾರ್ಮಿಕರನ್ನು ನೇಮಿಸಿಕೊಂಡಿರುವ ಎಲ್ಲಾ ನಿರ್ಮಾಣಗಾರರು ಕಾರ್ಮಿಕರಿಗೆ "ವಲಸೆ ಕಾರ್ಮಿಕ ಕಾಯ್ದೆ ಮತ್ತು ಕಟ್ಟಡ ಕಾರ್ಮಿಕ ಕಾಯ್ದೆಯ" ಎಲ್ಲಾ ಸೌಲಭ್ಯಗಳಿಗೆ ಒತ್ತಾಯಿಸುವುದು.

ನಿರ್ಮಾಣ ಕೆಲಸದಲ್ಲಿ ಅಫಘಾತಗಳನ್ನು ತಪ್ಪಿಸಲು ಸುರಕ್ಷತಾ ಕ್ರಮಗಳಿಗೆ ಒತ್ತಾಯಿಸು[illegible].

ಎಲ್ಲಾ ನಿರ್ಮಾಣಗಳಿಂದಲೂ ಮಂಡಳಿಗೆ ಸೆಸ್ (ಹೆಚ್ಚುವರಿ ಶುಲ್ಕ) ಸೇರಿಯಾಗಿ ವಸೂಲಿಯಾಗುವಂತೆ ಹೋರಾಟ ರೂಪಿಸುವುದು.

ಪಿಂಚಣಿಯನ್ನು 300 ರೂ.ನಿಂದ 1000 ರೂ.ಗೆ ಹೆಚ್ಚಿಸಲು ಒತ್ತಾಯಿಸುವುದು

ಸಮ್ಮೇಳನ

ಸಮ್ಮೇಳನವನ್ನು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ.ಎನ್.ವೀರಸ್ವಾಮಿ ಧ್ವಜಾರೋಹಣ ಮಾಡಿ ಉದ್ಘಾಟನೆ ಮಾಡಿದರು. ಸಿಐಟಿಯು ಬೆಂಗಳೂರು ಜಿಲ್ಲಾ ಉಪಾಧ್ಯಕ್ಷರುಗಳಾದ ಕಾಂ.ಗೋಪಾಲಗೌಡ, ಕಾಂ.ಮೀನಾಕ್ಷಿ ಸುಂದರಂ, ಪ್ರದಾನ ಕಾರ್ಯದರ್ಶಿಯಾದ ಕಾಂ.ಕೆ.ಎನ್. ಉಮೇಶ್ ಕಾರ್ಯದರ್ಶಿ ಕಾಂ.ಲೀಲಾವತಿ ಹಾಜರಿದ್ದು ಸಮ್ಮೇಳನ ಚರ್ಚೆಗೆ ಮಾರ್ಗದರ್ಶನ ನೀಡಿದರು.

ಅಧ್ಯಕ್ಷರು ಕಾಂ.ವೀರಮಣಿ ಉಪಾಧ್ಯಕ್ಷರಾಗಿ ಕಾಂ.ಗಣಪತಿ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಎಸ್.ಶಂಕರ್, ಸಂಘಟನಾ ಕಾರ್ಯದರ್ಶಿಯಾಗಿ ಕಾಂ.ಟಿ.ಎಂ.ರಾಮಕೃಷ್ಣ ಕಾರ್ಯದರ್ಶಿಗಳ[illegible] ಕಾಂ.ಜಯರಾಮ್, ಕಾಂ.ನೀಲಕಂಠನ್, ಖಜಾ[illegible] ಯಾಗಿ ಕಾಂ.ಪಾರ್ಥೀಬನ್‌ರನ್ನು ಒಳಗೊಂಡ 3[illegible] ಜನಗಳ ಹೊಸ ಸಮಿತಿ ಆಯ್ಕೆಯಾಯಿತು.

■ ಎಸ್.ಶಂಕರ್

ನೆಮ್ಮದಿಯ ನಾಳೆಗಾಗಿ ಯುವಜನ ಶಿಬಿರ

ಹೈನುಗಾರಿಕೆ, ರೇಷ್ಮೆಟಮೋಟೋ ಹೀಗೆ ಕೃಷಿ ...ದಲ್ಲಿ ಹೆಸರುವಾಸಿ ಕೋಲಾರ ಜಿಲ್ಲೆ. ಇದರ ಇನ್ನೊಂದು ಹೆಗ್ಗುರುತೆಂದರೆ ಜಾತಿ-ದಬ್ಬಾಳಿಕೆಯ ವಿರುದ್ಧ, ಭೂಮಾಲಕರ ಪಾಳೇಗಾರಿಕೆಯ ವಿರುದ್ಧದ ಪ್ರಗತಿಪರ ಚಳುವಳಿಗಳ ತವರೂರು. ಈ ಜಿಲ್ಲೆಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಜಿಲ್ಲಾ ಮಟ್ಟದ ಯುವಜನ ಶಿಬಿರವನ್ನು ನಡೆಸಿತು. ಬೆಂಗಳೂರಿನಿಂದ ಹೋಗುವಾಗ ಕೋಲಾರ ನಗರ ಸಮೀಪಿಸುತ್ತಿದ್ದಂತೆ ರೈತರ ಮಾರುಕಟ್ಟೆ ಕೇಂದ್ರ ಎದುರಾಗುತ್ತದೆ. ಈ ರೈತರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ದಾಟಿ ಎಡಕ್ಕೆ ತಿರುಗಿ ಬೆಟ್ಟದ ಸಾಲುಗಳ ಮೇಲೇರುವ ರಸ್ತೆಯೊಂದಿದೆ. ಈ ರಸ್ತೆಯಲ್ಲಿ 5-6 ಕಿ.ಮಿ. ಹೋಗುತ್ತಿದ್ದಂತೆಯೇ ರಸ್ತೆಯೂ ಸುತ್ತುತ್ತಾ ಬೆಟ್ಟದ ಮೇಲೇರಿ ಬಿಡುತ್ತೇವೆ. ಇಲ್ಲಿ ವಿಶಾಲವಾದ ಇಳಿಜಾರು ಬಯಲು ಪ್ರದೇಶ. ಹಲವಾರು ...ಳಿಂದ ಕೃಷಿಯಲ್ಲಿ ತೊಡಗಿಸಿಕೊಂಡು ಜೀವನ ನಡೆಸುವ ಅನ್ನದಾತರ ಕುಟುಂಬಗಳು. ಈ ಬೆಟ್ಟದ ಸಾಲುಗಳನ್ನು ಅಂತರಗಂಗೆಯೆಂದು ಕರೆಯುತ್ತಾರೆ. ಬೆಟ್ಟದ ಮೇಲಿಂದ ಸುಳಿಯಾಕಾರದಲ್ಲಿ ಗಂಗೆ ಯಾವಾಗಲೂ ಹೊರ ಹೊಮ್ಮುತ್ತಿದ್ದಾಳೆ. ಬೇಸಿಗೆ, ಬರಗಾಲದಲ್ಲೂ ನೀರುಣಿಸುತ್ತಿರುವ ಈ ಅಂತರಗಂಗೆಯ ಮಡಿಲಲ್ಲೇ ಶಿವಗಂಗೆಯೆಂಬ ಇನ್ನೊಂದು ಪ್ರದೇಶ. ಈ ಶಿವಗಂಗೆಯಲ್ಲಿರುವ ಕುಟುಂಬಗಳೊಂದಿಗೆ 'ಆದಿಮ ಸಾಂಸ್ಕೃತಿಕ ಕೇಂದ್ರ' ಮೈದಳೆದಿದೆ. ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕರಲ್ಲಿ ಒಬ್ಬರಾಗಿರುವ ಬಂಡಾಯ ಸಾಹಿತಿ ಕೋಟಗಾನಹಳ್ಳಿ ರಾಮಯ್ಯನವರ ಉಸ್ತುವಾರಿಯಲ್ಲಿ ಕಟ್ಟಿಕೊಂಡಿರುವ 'ಆದಿಮ ಸಾಂಸ್ಕೃತಿಕ ಕೇಂದ್ರ'ವಿದ್ದು, ಸುಂದರ ತಾಣವಾಗಿರುವ ಸರ್ವ ಜನರ ನೆಮ್ಮದಿಯನ್ನು ಸಾರ ಬಯಸುವ, ಕೋಲಾರದ ಕಾಶ್ಮೀರವೆಂದೇ ಪರಿಸರ ಪ್ರೇಮಿಗಳು ಕರೆಯುವ ಪ್ರಕೃತಿಯ ಸೊಬಗನ್ನು ಸಾರುವ ಪ್ರಶಾಂತಸ್ಥಳವಿದು. ಈ 'ಆದಿಮ ಸಾಂಸ್ಕೃತಿಕ ಕೇಂದ್ರ' ಸಾಮಾಜಿಕ ಪ್ರಜ್ಞೆ ಮೂಡಿಸುವ ನಾಟಕಗಳ ತರಬೇತಿ ಶಿಬಿರಗಳನ್ನು ನಡೆಸುವ ಕೇಂದ್ರವಾಗಿ ರೂಪುಗೊಂಡಿದೆ. ವಿಶೇಷವಾಗಿ ಪ್ರತಿ ತಿಂಗಳು ಹುಣ್ಣಿಮೆ ರಾತ್ರಿಯಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುಖಾಂತರ ಸಾಂಸ್ಕೃತಿಕ ಸಮಾಜಮುಖಿ ಸಂದೇಶವನ್ನು ಸಾರುತ್ತಿದೆ. ಬಂದವರಿಗೆಲ್ಲಾ ಗ್ರಾಮೀಣ ಸೊಗಡಿನ ಊಟೋಪಚಾರ. ಸಂಘ ಪರಿವಾರದ ನೇತೃತ್ವದ ಸರ್ಕಾರದಿಂದ ಇಂತಹ ಜನಮುಖಿ ಸಾಂಸ್ಕೃತಿಕ ತಾಣಗಳಿಗೆ ಹಣ ಸಹಕಾರವಿರಲಿ, ಬೆಳೆಯಲು ಬಿಡುವುದುಂಟೆ? ಎಂಬಂತೆ ಭಜರಂಗಿಗಳಿಂದ ಕಿರುಕುಳ ಪ್ರಾರಂಭವಾಗಿದೆ.

ಸೌಹಾರ್ದತೆ ಕೆಡಿಸುವ ಭಜರಂಗಿಗಳ ಯತ್ನ

ಇಲ್ಲಿನ ಸುಂದರ ಪರಿಸರವನ್ನು, ಸಾಮಾಜಿಕ ಸೌಹಾರ್ದತೆಯನ್ನು ಕೆಡಿಸುವ ಪ್ರಯತ್ನ ಭಜರಂಗಿಗಳಿಂದ ನಡೆದಿರುವುದು ಕಾಣಸಿಗುತ್ತವೆ. ರಸ್ತೆಯ ಎರಡು ಬದಿಗಳಲ್ಲಿ ಕೋಮುದ್ವೇಷ ಸೃಷ್ಟಿಸುವ ಘೋಷಣೆಗಳು, ಭಿತ್ತಿಚಿತ್ರಗಳು, ಕೇಸರಿಯ ಬಣ್ಣ, ನೈಸರ್ಗಿಕ ಸೊಬಗನ್ನು ಹಾಳುಗೆಡವಿದೆ. ನಾವೇನೂ ಕಡಿಮೆ ಇಲ್ಲವೆಂಬಂತೆ ಅಲ್ಪಸಂಖ್ಯಾತ ಮೂಲಭೂತವಾದಿ ಗಳ ಕೆಎಫ್‌ಡಿ ಸಂಘಟನೆಗಳ ನಾಮಫಲಕಗಳು ಕಣ್ಣಿಗೆ ರಾಚುತ್ತವೆ.

ಅಂತರಗಂಗೆಯು ಕೋಮು ಸೌಹಾರ್ದದ ಪರಂಪರೆಯ ಪ್ರತೀಕವಾಗಿದೆ. ಇರುವ ಒಂದೇ ಬಸ್ಸಿನಲ್ಲಿ ಒಂದೇ ಕುಟುಂಬದವರಂತೆ ಭಾನುವಾರ ಅಂತರಗಂಗೆಯಲ್ಲಿರುವ ಪವಿತ್ರ ಸ್ಥಳಗಳಿಗೆ ಹಿಂದೂ-ಮುಸ್ಲಿಂ ಬಾಂಧವರು ಬಂದು ಹೋಗುವುದನ್ನು ನಾವು ಕಣ್ಣಾರೆ ಕಂಡೆವು. ಈ ಐಕ್ಯತೆಯ ಭಾವೈಕ್ಯತೆಯ ಸೊಬಗನ್ನು ಸಹಿಸದ ಭಜರಂಗಿಗಳು ಅಶಾಂತಿಯನ್ನು ಸೃಷ್ಟಿಸಲು ಕೈಹಾಕಿದ್ದಾರೆ. ಈಕುರಿತು ಶಿಬಿರಾರ್ಥಿಗಳಿಗೆ ಭಯೋತ್ಪಾದನೆ, ಕೋಮುವಾದದ ಕುರಿತು ಉಪನ್ಯಾಸದಲ್ಲಿ ಹಿಂದೂ - ಮುಸ್ಲಿಂ ಐಕ್ಯತೆಯನ್ನು ಅಂತರಗಂಗೆಯಲ್ಲಿ ದೇವಾಲಯ-ದರ್ಗಾಗಳೆರಡನ್ನು ಒಂದೇ ಕುಟುಂಬದವರಂತೆ ನಡೆಸಿಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ರಾಜಕೀಯ ಲಾಭಕ್ಕಾಗಿ ರಕ್ತದೋಕುಳಿಯಾಡುವ ಕೋಮುವಾದಿ ಗಳ ಒಡೆದಾಳುವ ನೀತಿಯನ್ನು ಜನಶಕ್ತಿ ಸಂಪಾದಕರಾದ ಎಸ್.ವೈ.ಗುರುಶಾಂತ್ ವಿವರಿಸಿದರು.

ಜಗತ್ತಿನ ಪ್ರಥಮ ಶತ್ರು ಅಮೆರಿಕಾ ಸಾಮ್ರಾಜ್ಯಶಾಹಿಗಳ ಲಾಭಕೋರ ನೀತಿಗಳಿಂದ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ದುಡಿಯುವ ಬಡ ಜನತೆಯ ಬದುಕು ಅತಂತ್ರವಾಗಿರುವಾಗ ಬೆಲೆ ಏರಿಕೆ, ಪಡಿತರ ಅವ್ಯವಸ್ಥೆ, ನಿರುದ್ಯೋಗ ಬಡತನ, ದಾರಿದ್ರ್ಯ, ರೈತರ ಆತ್ಮಹತ್ಯೆ ಮುಂತಾದ ಜ್ವಲಂತ ಸಮಸ್ಯೆಗಳ ಮಡುವಿನಲ್ಲಿರುವ ಜನರ ಮೂಲ ಸಮಸ್ಯೆಗಳನ್ನು ಬಗೆಹರಿಸದೆ ಕೇಂದ್ರ - ರಾಜ್ಯ ಸರ್ಕಾರಗಳು ತಮ್ಮ ರಾಜಕೀಯ ಲಾಭಕ್ಕಾಗಿ ಕೋಮುವಾದ, ಭಯೋತ್ಪಾದನೆಯನ್ನು ಬೆಂಬಲಿಸುತ್ತಾ ಬಂದಿವೆ. ಹೀಗಾಗಿಯೇ ಅಮಾಯಕ ಮುಗ್ಧ ಜನರ ಪ್ರಾಣ- ಆಸ್ತಿ ನಾಶಗೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಕೋಮುವಾದ ಭಯೋತ್ಪಾದನೆಗಳ ಅಪಾಯಗಳನ್ನು ಅರಿಯಲು, ಪ್ರಸಕ್ತ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅರಿತು ಯುವ ಜನ ಸಂಘಟನೆಯನ್ನು ಬಲಪಡಿಸಲು ಆ ಮೂಲಕ ಶಾಂತಿ-ನೆಮ್ಮದಿಯ ನಾಳೆಗಳನ್ನು ಕಾಣಲು ಡಿವೈಎಫ್ಐ ಸಂಘಟನೆ ಪ್ರಶಾಂತ ಸ್ಥಳದಲ್ಲಿ ಶಾಂತಿಗಾಗಿ ಯುವಜನ ಶಿಬಿರವನ್ನು ಏರ್ಪಡಿಸಿತ್ತು.

■ ರಾಜಶೇಖರಮೂರ್ತಿ

......ಬಿಜೆಪಿಯ ಗೋಸುಂಬೆತನ

ಪುಟ 7 ರಿಂದ

ವ್ಯಾಪ್ತಿಯಲ್ಲಿ ಬರುವ ಉಳಿದೆರಡು ಶಾಸನಗಳಾದ ಕಾನೂನುಬಾಹಿರ ಚಟುವಟಿಕೆಗಳು(ತಡೆ) ಶಾಸನ ಮತ್ತು ಭಾರತೀಯ ದಂಡ ಸಂಹಿತೆಯ ಕೆಲವು ವಿಭಾಗಗಳನ್ನು ಪಟ್ಟಿ ಮಾಡಬೇಕು ಎಂದು ಸಲಹೆ ಮಾಡಲಾಯಿತು. ಈ ಎರಡನೇ ಪಟ್ಟಿಯಲ್ಲಿ ಬರುವ ಅಪರಾಧಗಳ ತನಿಖೆಯಲ್ಲಿ ಸಂಬಂಧಪಟ್ಟ ರಾಜ್ಯ ಸರಕಾರವನ್ನು ಜತೆಗೆ ಸೇರಿಸಿಕೊಳ್ಳಲು ಇದರಿಂದ ಅವಕಾಶವಾಗುತ್ತದೆ ಎಂಬುದು ಈ ತಿದ್ದುಪಡಿಯ ಉದ್ದೇಶ. ಆಗ ಭಾರತೀಯ ಸಂವಿಧಾನದ ಒಕ್ಕೂಟ ಸ್ವರೂಪವನ್ನು ಮತ್ತು ರಾಜ್ಯ ಸರಕಾರಗಳ ಹಕ್ಕುಗಳನ್ನು ಉಲ್ಲಂಘಿಸದೆಯೇ ಒಂದು ಅಖಿಲ ಭಾರತೀಯ ತನಿಖಾ ಸಂಸ್ಥೆಯನ್ನು ರಚಿಸುವ ಗುರಿಯನ್ನು ಈಡೇರಿಸಲು ಸಾಧ್ಯವಾಗುತ್ತದೆ.

ಪ್ರಮುಖ ವಿರೋಧ ಪಕ್ಷವೆನಿಸುವ ಬಿಜೆಪಿಯಾಗಲೀ ಅದರ ಎನ್‌ಡಿಎ ಮಿತ್ರರಾಗಲೀ ಸಂಸತ್ತಿನಲ್ಲಿ ಈ ಬಗ್ಗೆ ಮಾತಾಡಲಿಲ್ಲ, ಈ ನಿರ್ದಿಷ್ಟ ತಿದ್ದುಪಡಿಗಳನ್ನೂ ಬೆಂಬಲಿಸಲಿಲ್ಲ. ಆದರೆ ಜನವರಿ 6 ರಂದು ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಬಿಜೆಪಿಯ ಮತ್ತು ಅದರ ಎನ್‌ಡಿಎ ಮಿತ್ರಪಕ್ಷಗಳ ಮುಖ್ಯ ಮಂತ್ರಿಗಳು ರಾಜ್ಯಗಳ ಹಕ್ಕುಗಳಿಗೆ ಸಂಬಂಧಪಟ್ಟಂತೆ ಇವೇ ಆಕ್ಷೇಪಗಳನ್ನು ಎತ್ತಿದರು! ಸಂಸತ್ತಿನಲ್ಲಿ ಇವರ ರಾಷ್ಟ್ರೀಯ ಮುಖಂಡರಿಗೆ ರಾಜ್ಯಗಳ ಹಕ್ಕುಗಳನ್ನು ರಕ್ಷಿಸಬೇಕು ಎಂದು ಅನಿಸಲಿಲ್ಲವೇಕೋ? ತಾವು ಸದಾ ಜಪಿಸುತ್ತಿದ್ದ ಪೋಟ ಮಂತ್ರಕ್ಕೆ ಈ ರೀತಿಯಲ್ಲಾದರೂ ಪುರಸ್ಕಾರ ಸಿಕ್ಕಿತಲ್ಲಾ ಎಂಬುದೇ ಅವರಿಗೆ ಮುಖ್ಯವಾಗಿತ್ತೇ? ಬಿಜೆಪಿಗೆ ನಮ್ಮ ಸಂವಿಧಾನದ ಒಕ್ಕೂಟ ಸ್ವರೂಪದ ಬಗ್ಗೆ, ರಾಜ್ಯಗಳ ಹಕ್ಕುಗಳ ಬಗ್ಗೆ ಕಾಳಜಿ ಎಂಬುದು ಇದೆಯೇ ಎಂಬ ಪ್ರಶ್ನೆಯೂ ಮತ್ತೆ ಏಳುತ್ತದೆ.

'ಸತ್ಯಂ' ನಿಂದ ಪಂಗನಾಮ...

ಪುಟ 13 ರಿಂದ

...ದ್ಯಕ್ಕೆ ಕಲ್ಪನಾತೀತ ವೇಗದಲ್ಲಿ ನೆಲಕಚ್ಚುತ್ತಿವೆ. ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ಈಗಾಗಲೇ ಉದ್ಯೋಗವಕಾಶಗಳನ್ನು ಕಳೆದುಕೊಂಡು ತತ್ತರಿಸಿರುವಾಗಲೇ ಸತ್ಯಂ ಕಂಪನಿಯ ವಂಚನೆಯಿಂದಾಗಿ ಸಾವಿರಾರು ಉದ್ಯೋಗಗಳನ್ನು ಕಳೆದುಕೊಳ್ಳುವ ಆತಂಕ ...ದಗಿಬಂದಿದ್ದು, ಈ ಕ್ಷೇತ್ರದ ಉದ್ಯೋಗಿಗಳಿಗೆ ...ದೊಂದು ರೀತಿಯ "ಡಬಲ್ ಇಂಪ್ಯಾಕ್ಟ್" ...ಂತಾಗಿದೆ.

...ತ್ಯಂನಿಂದ ಹಣ ಎತ್ತ ಹರಿದಿರಬಹುದು?

ಸತ್ಯಂ ಕಂಪನಿಯು ಸೇರಿದಂತೆ ತನ್ನೆಲ್ಲ ...ವ್ಯವಹಾರಗಳ ಆದಾಯವನ್ನು ರಾಮಲಿಂಗ ರಾಜು ...ಬೃಹತ್ ಮಟ್ಟದಲ್ಲಿ ರಿಯಲ್ ಎಸ್ಟೇಟ್‌ನಲ್ಲಿ ...ತೊಡಗಿಸಿದ್ದಾರೆಂದು ರಿಯಲ್ ಎಸ್ಟೇಟ್ ಉದ್ಯಮದ ...ಮೂಲಗಳು ತಿಳಿಸುತ್ತವೆ. ಐಟಿ ದೊರೆಯ ಪಟ್ಟದಿಂದ ...ರಿಯಲ್ ಎಸ್ಟೇಟ್ ದೊರೆಯ ಪಟ್ಟವನ್ನೂ ಗಿಟ್ಟಿಸಲು ...ರಾಜು ಯತ್ನಿಸಿದ್ದು, ಭಾರತದ ಅತಿ ದೊಡ್ಡ 10 ...ರಿಯಲ್ ಎಸ್ಟೇಟ್ ಮಾಲೀಕರಲ್ಲಿ ಇವರ ...ಕುಟುಂಬವೂ ಒಂದೆಂದು ಹೇಳಲಾಗುತ್ತಿದೆ.

...ದೊಡ್ಡ ಬಂಡವಾಳಶಾಹಿಯಣ್ಣನ ಹಾದಿಯಲ್ಲಿ ...ಮುಗಾಲು?

ಪ್ರಸ್ತುತ, ಅಪರಿಪೂರ್ಣವಾದ ನಮ್ಮ ...ನಿಯಂತ್ರಣ ವ್ಯವಸ್ಥೆಯಲ್ಲಿ ಸತ್ಯಂ ಕಂಪನಿಯ ...ವಂಚನೆಯು ಪ್ರತ್ಯೇಕ ಪ್ರಕರಣವೇನೂ ಅಲ್ಲ. ...ದರಿಂದ, ಖಾಸಗಿ ಕಂಪನಿಗಳು, ಸರ್ಕಾರದ ಬೆಂಬಲ ...ಹೊಂದಿರುವ ಲೆಕ್ಕ ಪರಿಶೋಧಕರು ಮತ್ತು ಸ್ವತಂತ್ರ ನಿರ್ದೇಶಕರು ಒಂದಾಗಿ ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ಒತ್ತಿ ಹೇಳುತ್ತದೆ.

ಅಮೇರಿಕಾದಂತಹ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಬಂಡವಾಳಶಾಹಿಗಳು ಅನುಸರಿಸುತ್ತಿರುವ ಅತ್ಯಂತ ಭ್ರಷ್ಟ ಆಚರಣೆಗಳನ್ನು ಭಾರತದ ದೊಡ್ಡ ಬಂಡವಾಳಗಾರರು ಕೂಡ ಅನುಸರಿಸಲಾರಂಭಿಸಿರುವುದನ್ನು ಈ ವಂಚನೆ ಪ್ರಕರಣದಿಂದ ತಿಳಿಯಬಹುದು. 2001ರಲ್ಲಿ ಅಮೇರಿಕಾದ ಎನ್ರಾನ್ ಕಂಪನಿಯು ಲಾಭದಾಸೆಗಾಗಿ ತನ್ನ ಷೇರು ಬೆಲೆಗಳನ್ನು ಮತ್ತು ಕಂಪನಿಯ ಮಾರುಕಟ್ಟೆ ಮೌಲ್ಯವನ್ನು ಮೋಸಗಾರಿಕೆ ಚಟುವಟಿಕೆಗಳಿಂದ ಹೆಚ್ಚಿಸಿಕೊಂಡಿತ್ತು. ಈ ಕಂಪನಿಯ ಹಿಂದಿನ ಮುಖ್ಯಸ್ಥ ಸೆರೆಮನೆಯಲ್ಲಿ ಇನ್ನೂ 24ವರ್ಷಗಳ ಸಜೆಯನ್ನು ಅನುಭವಿಸುತ್ತಿದ್ದರೆ, ಎನ್ರಾನ್ ಕಂಪನಿಯ ಲೆಕ್ಕಪರಿಶೋಧನೆ ನಡೆಸುತ್ತಿದ್ದ ಆರ್ಥರ್ ಆಂಡರ್ಸನ್ ಕಂಪನಿಯನ್ನು ಸಂಪೂರ್ಣವಾಗಿ ನಿಷೇಧಿಸಿ ಮುಚ್ಚಿಸಲಾಯಿತು.

2004ರಲ್ಲಿ ಸಮಾಧಿಯಾದ ಗ್ಲೋಬಲ್ ಟ್ರಸ್ಟ್ ಬ್ಯಾಂಕಿಗೆ ಲೆಕ್ಕ ಪರಿಶೋಧನೆ ಮಾಡುತ್ತಿದ್ದ ಮೆ: ಪ್ರೈಜ್ ವಾಟರ್‌ಹೌಸ್ ಮತ್ತು ಕೂಪರ್ (ಪಿಡಬ್ಲ್ಯೂಸಿ) ಕಂಪನಿಯೇ ಸತ್ಯಂ ಕಂಪನಿಗೂ ಲೆಕ್ಕ ಪರಿಶೋಧನೆ ಮಾಡುತ್ತಿತ್ತು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಇದೇ ರೀತಿಯ ಸುಳ್ಳು ಲೆಕ್ಕದ ಕೆಟ್ಟ ಚಾಳಿಯಿಂದ ಮುಳುಗಿ ಹೋದ ಗೋಬಲ್ ಟ್ರಸ್ಟ್ ಬ್ಯಾಂಕನ್ನು ಆಗ ಕೊಂಡುಕೊಂಡು ಉಳಿಸಿದ್ದು ಸಾರ್ವಜನಿಕ ಕಂಪನಿಯೇ.

ಮುಂದೇನು?

ಕಂಪನಿ ವ್ಯವಹಾರಗಳ ಸಚಿವಾಲಯವು ಸತ್ಯಂ ಕಂಪನಿಯ ನಿರ್ದೇಶಕರ ಮಂಡಳಿಯನ್ನು ಬರಖಾಸ್ತುಗೊಳಿಸಿ ಹೊಸ ನಿರ್ದೇಶಕರ ಮಂಡಳಿಯನ್ನು ನೇಮಿಸಿದೆ. ಇನ್ನೂ ಮುಂದುವರೆದು, ಸರ್ಕಾರವು ಸತ್ಯಂ ಅಧ್ಯಕ್ಷನ ಮೇಲೆ ಸ್ವಯಂ ದಾವೆ ಹೂಡುವುದರ ಜೊತೆಗೆ ಕಂಪನಿಯ ಎಲ್ಲ ನಿರ್ದೇಶಕರು, ಪಿಡಬ್ಲ್ಯೂಸಿ ಕಂಪನಿಯ ಲೆಕ್ಕ ಪರಿಶೋಧಕರ ವಿರುದ್ಧವೂ ಸಹ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕು.

ಪಿಡಬ್ಲ್ಯೂಸಿ ಕಂಪನಿಯು ಲೆಕ್ಕ ಪರಿಶೋಧನೆ ಮಾಡಿರುವ ಕಂಪನಿಗಳ ಎಲ್ಲ ಲೆಕ್ಕ ಪರಿಶೋಧನೆಗಳನ್ನು ಸ್ವತಂತ್ರವಾಗಿ ಮತ್ತೊಮ್ಮೆ ಸರ್ಕಾರ ಪರಿಶೋಧಿಸಿದಲ್ಲಿ ಸುಳ್ಳು ಲೆಕ್ಕದಿಂದ ಕೂಡಿದ ಕಾರ್ಪೋರೇಟ್ ದುರಾಡಳಿತ ನಿರ್ವಹಣೆಯ ಆಗರವನ್ನೇ ಬಿಚ್ಚಿಡಬಹುದು. ಏಕೆಂದರೆ, ಪಿಡಬ್ಲ್ಯೂಸಿ ಕಂಪನಿಯ ಭಾರತದ ಗ್ರಾಹಕರ ಪಟ್ಟಿಯ 50 ದೊಡ್ಡ ಕಂಪನಿಗಳಲ್ಲಿ ಜಿಎಂಆರ್, ಲ್ಯಾಂಕೋ, ಯುನೈಟೆಡ್ ಬ್ರಿವರೀಸ್, ರಿಲಯನ್ಸ್ ಪವರ್, ಸಿಂಪ್ಲೆಕ್ಸ್, ಮ್ಯಾಕ್ಸ್ ಇಂಡಿಯಾ, ಇತ್ಯಾದಿಗಳು ಸೇರಿವೆ. ಆದ್ದರಿಂದ ಪಿಡಬ್ಲ್ಯೂಸಿಯನ್ನು ಕಪ್ಪುಪಟ್ಟಿಗೆ ಸೇರಿಸಿ, ಅದರ ಮತ್ತು ಇತರೆ ಬಹುರಾಷ್ಟ್ರೀಯ ಕಂಪನಿಗಳ ಲೆಕ್ಕಪರಿಶೋಧಕರ ಏಕಸ್ವಾಮ್ಯತೆಯನ್ನು ಸರ್ಕಾರ ನಿರ್ಬಂಧಿಸಬೇಕು.

ಈ ಹಿನ್ನೆಲೆಯಲ್ಲಿ, ಷೇರುಪೇಟೆಯಲ್ಲಿ ನೊಂದಣಿಯಾಗಿರುವ ಖಾಸಗಿ ಕಂಪನಿಗಳನ್ನು ನಿರ್ಬಂಧಿಸಿ ಮತ್ತು ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಸರ್ಕಾರ ತಕ್ಷಣವೇ ರಾಷ್ಟ್ರೀಯ ಲೆಕ್ಕಪರಿಶೋಧನಾ ಮಂಡಳಿಯನ್ನು ರಚಿಸಲು ಕ್ರಮ ಕೈಗೊಳ್ಳಬೇಕು.

ಜಗದಗಲ

ಶರತ್‌ಚಂದ್ರ

ಸಾಮ್ರಾಜ್ಯಶಾಹಿ ಮತ್ತು ಮೂಲಭೂತವಾದಕ್ಕೆ ಬುದ್ಧಿ ಕಲಿಸಿದ ಬಾಂಗ್ಲಾದೇಶದ ಜನ

ಬಾಂಗ್ಲಾದೇಶದ ಜನ ಇತಿಹಾಸ ಸೃಷ್ಟಿಸಿದ್ದಾರೆ. ಸುಮಾರು ಎರಡು ವರ್ಷಗಳ ಮಿಲಿಟರಿ ಆಡಳಿತದ ನಂತರ ಬಹಳ ಸಾರಿ ಮುಂದೂಡಲಾದ ಚುನಾವಣೆಯಲ್ಲಿ ಶೇಖ ಹಸೀನಾ ನಾಯಕತ್ವದ ಮಹಾಕೂಟಕ್ಕೆ ಭಾರೀ ಬಹುಮತ ಕೊಟ್ಟು ಆರಿಸಿದ್ದಾರೆ. ಹಿಂದಿನ ಪ್ರಧಾನಿ ಬೇಗಂ ಖಲೀದಾ ಜೀಯಾ ನಾಯಕತ್ವದ ಕೂಟಕ್ಕೆ ಹಿಂದೆಂದೂ ಕಾಣದ ಪ್ರಮಾಣದ ಸೋಲು ಉಣ್ಣಿಸಿ ಮುಖಭಂಗ ಮಾಡಿದ್ದಾರೆ. ಒಟ್ಟು 299 ಸೀಟುಗಳಲ್ಲಿ ಶೇಖ ಹಸೀನಾರ ಅವಾಮಿ ಲೀಗ್ 230 ಸೀಟುಗಳನ್ನು ಗೆದ್ದು ಜಯಭೇರಿ ಬಾರಿಸಿದೆ. ಅವಾಮಿ ಲೀಗ್ ನ ಕೂಟದ ಪಕ್ಷಗಳು 32 ಸೀಟು ಗಳಿಸಿ ಕೂಟಕ್ಕೆ 299 ರಲ್ಲಿ 262 ಸೀಟುಗಳ ಭಾರೀ ಬಹುಮತ ಸಿಕ್ಕಿದೆ. ಅವಾಮೀ ಲೀಗ್ ಒಂದೇ ಗಳಿಸಿದ ಸೀಟುಗಳಿಂದಲೇ ಸಂವಿಧಾನದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುವ ಬಲ ಸಿಕ್ಕಿದೆ. ಅವಾಮಿ ಲೀಗ್ ಜಯ ತೀರಾ ಅನಿರೀಕ್ಷಿತ ಅಲ್ಲದಿದ್ದರೂ, ಜಯದ ಅಗಾಧತೆ ಎಲ್ಲರನ್ನೂ ದಂಗುಬಡಿಸಿದೆ. ಅದೇ ರೀತಿ ಖಲೀದಾ ಜೀಯಾ ನಾಯಕತ್ವದ ಕೂಟದ ಪರಾಭವದ ಅಗಾಧತೆ ಕೂಡಾ. ಹಿಂದೆ ಸರ್ಕಾರದಲ್ಲಿದ್ದ ಖಲೀದಾ ಜೀಯಾರ ಬಾಂಗ್ಲಾದೇಶ ನ್ಯಾಶನಲ್ ಪಾರ್ಟಿ ಕೇವಲ 27 ಸೀಟುಗಳನ್ನು ಅವರ ಕೂಟದ ಇತರ ಪಕ್ಷಗಳು ಕೇವಲ 3 ಸೀಟುಗಳನ್ನು ಗಳಿಸಿದೆ. ಖಲೀದಾ ಜೀಯಾರ ಹಿಂದಿನ ಸಚಿವ ಸಂಪುಟದ ಎಲ್ಲಾ ಸಚಿವರು ಮತ್ತು ಸ್ಪೀಕರ್ ಪರಾಭವ ಹೊಂದಿದ್ದಾರೆ. ಕಳೆದ ಪಾರ್ಲಿಮೆಂಟಿನಲ್ಲಿ 17 ಸೀಟು ಗಳಿಸಿದ್ದ ಮೂಲಭೂತವಾದಿ ಜಮಾತೇ ಇಸ್ಲಾಮಿ ಕೇವಲ 2 ಸೀಟುಗಳಿಗೆ ಇಳಿದಿದೆ.

ನ್ಯಾಯಯುತ ಚುನಾವಣೆ

ಬಾಂಗ್ಲಾದೇಶದ ಚುನಾವಣೆಯ ಫಲಿತಾಂಶ ಹಲವು ವಿಶಿಷ್ಟತೆಗಳನ್ನು ಹೊಂದಿದೆ. ಎರಡು ವರ್ಷಗಳ ಮಧ್ಯಂತರ (ನಿಜವಾಗಿಯೂ ಸಾಮ್ರಾಜ್ಯಶಾಹಿ ಬೆಂಬಲಿತ ಮಿಲಿಟರಿ) ಆಡಳಿತದ ನಂತರ ಚುನಾವಣೆ ಶಾಂತಿಯುತವಾಗಿ ಮುಕ್ತ ನ್ಯಾಯಯುತವಾಗಿ ನಡೆಯಿತು. ಅಂತರ್ರಾಷ್ಟ್ರೀಯ ವೀಕ್ಷಕರು ಈ ಬಗ್ಗೆ ಧೃಢಪಡಿಸಿದ್ದಾರೆ. ಅದೂ 2007 ಜನವರಿಯಲ್ಲಿ ಆಗಬೇಕಾಗಿದ್ದ ಚುನಾವಣೆಗಳು ಭಾರೀ ಹಿಂಸಾಚಾರದ ನಂತರ ಮುಂದೂಡಲ್ಪಟ್ಟ ಹಿನ್ನೆಲೆಯಲ್ಲಿ. ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿದ್ದ ರೆಕಾರ್ಡ್ ಮತದಾನ (ಶೇ. 75) ಶಾಂತಿಯುತವಾಗಿ ಆಯಿತು. ಇತ್ತೀಚಿಗೆ ದಕ್ಷಿಣ ಏಶ್ಯಾದ ಯಾವ ದೇಶದಲ್ಲೂ ಮುಕ್ತ ನ್ಯಾಯಯುತ ಚುನಾವಣೆಗಳಲ್ಲಿ ಇಂತಹ ಭಾರೀ ಬಹುಮತ ಇತ್ತೀಚಿನ ವರ್ಷಗಳಲ್ಲಿ (ಏಕೆ ದಶಕಗಳಲ್ಲೇ) ಇಲ್ಲ.

ಮುಖ್ಯವಾಗಿ ಪ್ರಜಾಪ್ರಭುತ್ವ ಭದ್ರವಾಗಿ ಬೇರು ಬಿಡದಂತೆ ಪಾಕಿಸ್ತಾನದಲ್ಲಿ ಅನುಸರಿಸಿದ ತಂತ್ರವನ್ನು, ಬಾಂಗ್ಲಾದೇಶದಲ್ಲೂ ಜಾರಿ ಮಾಡಲು ಯತ್ನಿಸಿದ ಸಾಮ್ರಾಜ್ಯಶಾಹಿಯ ಹುನ್ನಾರವನ್ನು ಜನ ಹಟ ಹಿಡಿದು ಸೋಲಿಸಿದ್ದಾರೆ. ಪ್ರಮುಖ ಪಕ್ಷಗಳು ಕಿತ್ತಾಡುವಂತೆ ಮಾಡುವುದು, ಕಿತ್ತಾಟ ತಾರಕಕ್ಕೆ ಹೋದಾಗ ಮಿಲಿಟರಿ ಆಡಳಿತ ತರುವುದು, ಅಧಿಕಾರಕ್ಕೆ ಬಂದ ಪಕ್ಷಗಳು ಯಾವುದೇ ಜನ-ಪರ ಕೆಲಸ ಮಾಡದಂತೆ ಮಾಡುವುದು, ಮಿಲಿಟರಿ ಆಡಳಿತ ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳನ್ನು ಬಳಸಿ ಜನರ ಪ್ರಶ್ನೆಗಳನ್ನು ಮೂಲೆಗೆ ತಳ್ಳಿ ಧಾರ್ಮಿಕ ಪ್ರಶ್ನೆಗಳ ಸುತ್ತ ಹಿಂಸಾಚಾರ ಹರಡುವುದು, ಮೂಲಭೂತವಾದಿ ಶಕ್ತಿಗಳನ್ನು ಬಳಸಿ ಪ್ರಮುಖ



ಶೇಖ್ ಹಸೀನಾ

ಪಕ್ಷಗಳ ಜನಬೆಂಬಲ ಕಡಿಮೆ ಮಾಡುವುದು - ಇತ್ಯಾದಿ ಈ ಹುನ್ನಾರದ ಕೆಲವು ಅಂಶಗಳಾಗಿದ್ದವು.

2007 ಜನವರಿಯಲ್ಲಿ ಬಂದ ಮಧ್ಯಂತರ ಆಡಳಿತ ಎರಡು ಪ್ರಮುಖ ಪಕ್ಷಗಳ ನಾಯಕಿಯರ ನಡುವೆ ('ಬೇಗಂಗಳ ಕಿತ್ತಾಟ' ಎಂದು ಕುಪ್ರಸಿದ್ಧವಾದ) ಕಿತ್ತಾಟ ಬಳಸಿ ಆ ಎರಡು ಪಕ್ಷಗಳನ್ನು ಮುಗಿಸಿ ಬಿಡಲು ಪ್ರಯತ್ನಿಸಿತು. ಭ್ರಷ್ಟಾಚಾರದ ವಿರುದ್ಧ ಹೋರಾಟ ಮತ್ತು ಸುಧಾರಣೆ' ಹೆಸರಲ್ಲಿ ಈ ಎರಡು ನಾಯಕಿಯರು 'ಸ್ವಯಂ ಇಚ್ಛೆಯಿಂದ ದೇಶಾಂತರ ಕಳಿಸುವ ಪ್ರಯತ್ನ ನಡೆಯಿತು. ಅದಕ್ಕೆ ಅವರು ಬಗ್ಗದಾಗ ಆ ಪಕ್ಷಗಳ 'ನಾಯಕತ್ವದ ಬದಲಾವಣೆ'ಗೆ ಪ್ರಯತ್ನ ನಡೆಯಿತು. ಅದೂ ಸಾಧ್ಯವಾಗದಾಗ ಎರಡೂ ನಾಯಕಿಯರನ್ನು ಭ್ರಷ್ಟಾಚಾರದ ಆಪಾದನೆ ಮೇಲೆ ಜೈಲಿಗೆ ಕಳಿಸಲಾಯಿತು. ಇಷ್ಟೆಲ್ಲಾ ಪ್ರಯತ್ನದ ನಂತರವೂ ಮಧ್ಯಂತರ ಆಡಳಿತದ ಹೆಸರಲ್ಲಿ ಸಾಮ್ರ್ಯಾಜ್ಯಶಾಹಿಯ ನೇರ ಆಡಳಿತವನ್ನು ಜನ ಮನ್ನಿಸದಾಗ, ಚುನಾವಣೆ ನಡೆಸುವುದು ಅನಿವಾರ್ಯವಾಯಿತು. ಆ ಮೇಲೂ ಎರಡು ಪಕ್ಷಗಳಲ್ಲಿ ಒಂದು ಚುನಾವಣೆ ಬಹಿಷ್ಕರಿಸಬಹುದು. ಚುನಾವಣೆಗಳಲ್ಲಿ ಭಾರೀ ಹಿಂಸಾಚಾರ ಆಗಬಹುದು. ಚುನಾವಣೆ ಫಲಿತಾಂಶ ಅತಂತ್ರ ಪಾರ್ಲಿಮೆಂಟು ತರಬಹುದು. ಅದನ್ನು ಬಳಸಿ ಮಧ್ಯಂತರ ಆಡಳಿತ ಮುಂದುವರೆಸಬಹುದು. ಈ ಎಲ್ಲಾ ಲೆಕ್ಕಚಾರ ತಲೆಕೆಳಗಾಗುವಂತೆ ಜನ ಮತ್ತು ಪಕ್ಷಗಳು ವರ್ತಿಸಿವೆ. ಅಷ್ಟರ ಮಟ್ಟಿಗೆ ಪ್ರಜಾಪ್ರಭುತ್ವ ಬೇರು ಬಿಟ್ಟಿದೆ. ಖಲೀದಾ ಜೀಯಾ ಅವರ ದುರಾಡಳಿತ ಮತ್ತು ಈ ಹುನ್ನಾರ ಸೋಲಿಸುವ ಜನರ ಛಲವೇ ಅವಾಮಿ ಲೀಗ್ ನ ಈ ನಿರ್ಣಾಯಕ ಮತ್ತು ಪ್ರಚಂಡ ಜಯದ ಹಿಂದಿರುವ ಪ್ರಮುಖ ಕಾರಣ ಇದ್ದಂತೆ ಕಾಣುತ್ತದೆ.

2001 ರಲ್ಲಿ ಮೂರನೇ ಎರಡು ಬಹುಮತ ಪಡೆದು ಅಧಿಕಾರಕ್ಕೆ ಬಂದ ಖಲೀದಾ ಜೀಯಾ ಸಕಾರ ದೇಶದ ಚರಿತ್ರೆಯಲ್ಲೇ ಅತ್ಯಂತ ಭ್ರಷ್ಟ, ಅದಕ್ಷ ಮತ್ತು ಅಧಿಕಾರದಾಹಿ ಆಡಳಿತ ಕೊಟ್ಟಿತ್ತು. ಜನತೆಯ ಅತೃಪ್ತಿ ಬೇರೆಡೆಗೆ ತಿರುಗಿಸಲು ಮೂಲಭೂತವಾದಿ ಜಮಾತೇ ಇಸ್ಲಾಮಿಯನ್ನು ಬಳಸಿಕೊಂಡಿತು. ಈ ಅವಕಾಶ ಬಳಸಿ ಮೂಲಭೂತವಾದ ಭೂತಾಕಾರವಾಗಿ ಬೆಳೆಯಿತು. ಚುನಾವಣೆ ಹತ್ತಿರ ಬಂದಂತೆ ಅವಾಮಿ ಲೀಗ್ ಸವಾಲು ಎದುರಿಸುವ ಧೈರ್ಯ ಇಲ್ಲದೆ ಹಿಂಸಾಚಾರ ಹರಿಯ ಬಿಡಲಾಯಿತು. ಅವಾಮಿ ಲೀಗ್ ಸಭೆಗಳ ಮೇಲೆ ಸರಣಿ ಬಾಂಬ್ ದಾಳಿಗಳ ಮೂಲಕ ಮೂಲಭೂತವಾದಿಗಳೂ ಜನರ ಆಕ್ರೋಶಕ್ಕೆ ಗುರಿಯಾದರು. ಖಲೀದಾ ಜೀಯಾ ಅಧಿಕಾರದಲ್ಲಿ ಹೇಗಾದರೂ ಮುಂದುವರೆಯಲು ಸಾಮ್ರ್ಯಾಜ್ಯಶಾಹಿ ಜತೆ ಸಹ ಶಾಮೀಲಾದರು. ಸಾಮ್ರ್ಯಾಜ್ಯಶಾಹಿ ಮತ್ತು ಮೂಲಭೂತವಾದಿಗಳನ್ನು ಸೋಲಿಸಲು ಛಲ ತೊಟ್ಟ ಜನ, ಅವರ ಜತೆ ಶಾಮೀಲಾಗಿದ್ದ ಖಲೀದಾ ಜೀಯಾ ಕೂಟಕ್ಕೆ ತಕ್ಕ ಪಾಠ ಕಲಿಸಿದರು.

ಬಾಂಗ್ಲಾದೇಶದ ಜನತೆಯ ಈ ತೀರ್ಪು ಆ ದೇಶದ ಜಾತ್ಯತೀತ ಪ್ರಜಾಪ್ರಭುತ್ವಕ್ಕೆ ಮಾತ್ರವಲ್ಲ, ದಕ್ಷಿಣ ಏಶ್ಯಾಕ್ಕೇ ಜನತೆಗೆ ಹರ್ಷದಾಯಕ ಉತ್ತಮ ಬೆಳವಣಿಗೆ. ಜನತೆಯ ಈ ತೀರ್ಪಿನ ಸಾರವನ್ನು ಹಸೀನಾರ ಅವಾಮೀ ಲೀಗ್ ಅರ್ಥಮಾಡಿಕೊಂಡು, ಸಾಮ್ರ್ಯಾಜ್ಯಶಾಹಿ ಮತ್ತು ಮೂಲಭೂತವಾದಿಗಳಿಗೆ ಯಾವುದೇ ಅವಕಾಶ ಕೊಡದೆ ಜನರ ನಿಜವಾದ ಪ್ರಶ್ನೆಗಳತ್ತ ಗಮನ ಹರಿಸುವುದು ಎಂದು ಆಶಿಸಬೇಕಾಗಿದೆ.

ಹಿರಿಯ ಆಸ್ಟ್ರೇಲಿಯನ್ ಕಮ್ಯುನಿಸ್ಟ್ ನಾಯಕ ಪೀಟರ್ ಸೈಮನ್ ಇನ್ನಿಲ್ಲ

ಆಸ್ಟ್ರೇಲಿಯನ್ ಸೋಶಲಿಸ್ಟ್ ಮತ್ತು (ಹೆಸರು ಬದಲಾಯಿಸಿದ ನಂತರ)' ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ 36 ವರ್ಷಗಳ ದೀರ್ಘಕಾಲ ಸೇವೆ ಸಲ್ಲಿಸಿದ ಪೀಟರ್ ಸೈಮನ್ ಇನ್ನಿಲ್ಲ. 1950 ರ ದಶಕದಲ್ಲಿ ಅಡಿಲೇಡ್ ಸಮುದ್ರಯಾನ ಕಾರ್ಮಿಕರ ಚಳುವಳಿಯ ಮೂಲಕ ದುಡಿಯುವ ಜನತೆಯ ಚಳುವಳಿ ಮತ್ತು ಕಮ್ಯುನಿಸ್ಟ್ ಪಕ್ಷದಲ್ಲಿ ತೊಡಗಿಸಿಕೊಂಡ ಪೀಟರ್ ಆ ಪಕ್ಷದ ಹಿರಿಯ ನಾಯಕ ಬೆಳೆದರು. ಅದಕ್ಕಿಂತ ಮೊದಲು ಅವರು ಆಸ್ಟ್ರೇಲಿಯನ್ ವಾಯುಸೈನ್ಯದಲ್ಲಿ ಸೇರಿ ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿ ಫ್ಯಾಸಿಸ್ಟ್-ವಿರೋಧಿ ಸಮರವನ್ನು ಹತ್ತಿರದಿಂದ ಕಂಡವರಾಗಿದ್ದರು.

1930 ರ ಮಹಾಕುಸಿತ; ಎರಡನೇ ಮಹಾಯುದ್ಧ; ಆಸ್ಟ್ರೇಲಿಯನ್ ಕಮ್ಯುನಿಸ್ಟ್ ಪಕ್ಷದ ನಿಷೇಧ; ಕಮ್ಯುನಿಸ್ಟ್ ಪಕ್ಷದ ವಿಸರ್ಜನೆಗೆ ಜನಮತ ಸಂಗ್ರಹ; ಕೋರಿಯಾ ವಿಯೆಟ್ನಾಂ ಇರಾಕ್ ಅಫ್ಘಾನಿಸ್ತಾನ ಯುದ್ಧಗಳಲ್ಲಿ ಆಸ್ಟ್ರೇಲಿಯ ಭಾಗವಹಿಸುವುದರ ವಿರುದ್ಧ ಚಳುವಳಿ - ಮುಂತಾದ ಪಕ್ಷದ ಚಾರಿತ್ರಿಕ ಘಟ್ಟಗಳಲ್ಲಿ ಪೀಟರ್ ಸೈಮನ್ ಪ್ರಮುಖ ಪಾತ್ರ ವಹಿಸಿದರು. ಆ ದೇಶದ ಹತ್ತು ಪ್ರಧಾನಿಗಳ ದುಡಿಯುವ ಜನರ ವಿರುದ್ಧ ನೀತಿಗಳ ವಿ... ಹೋರಾಟದ ನಾಯಕತ್ವ ಕೊಟ್ಟ ಸೈಮನ್ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಂ... ಸಹ ಪ್ರಸಿದ್ಧರಾಗಿದ್ದರು. ಆಸ್ಟ್ರೇಲಿಯನ್ನರಿಗೆ ಸಮಾಜವಾದಿ ಭವಿಷ್ಯ ಗೆಲ್ಲುವ ಹೋರಾಟದಲ್ಲಿ ಸೈಮನ್ನರ ಪಾತ್ರ ಮರೆಯಲಾಗದ್ದು.

ರಶ್ಯಾ-ಉಕ್ರೇನ್ ಗ್ಯಾಸ್ ವಿವಾದ

ರಶ್ಯಾ-ಉಕ್ರೇನ್ ಗಳ ನಡುವೆ ಗ್ಯಾಸ್ ಪೂರೈಕೆ ಬಗ್ಗೆ ತೀವ್ರ ವಿವಾದ ತಲೆದೋರಿದ್ದು ರಶ್ಯಾ ಗ್ಯಾಸ್ ಪೂರೈಕೆ ನಿಲ್ಲಿಸಿದೆ. ರಶ್ಯನ್ ಗ್ಯಾಸ್ ಪೂರೈಕೆಗೆ ಉಕ್ರೇನ್ ಹಣ ಪಾವತಿ ಬಾಕಿ, ಯುರೋಪಿಗೆ ಉಕ್ರೇನ್ ಮೂಲಕ ಪೂರೈಕೆಯಲ್ಲಿ ಕಳ್ಳತನ, 2009 ರ ಕಾಂಟ್ರಾಕ್ಟ್ ಆಖೈರು ಆಗದಿರುವುದು - ಮುಂತಾದವು ವಿವಾದಿತ ವಿಷಯಗಳು. ಯುರೋಪಿಗೆ ಉಕ್ರೇನ್ ಮೂಲಕ ಶೆ. 80 ಗ್ಯಾಸ್ ಪೂರೈಕೆ ಆಗುತ್ತಿದ್ದು, ಇದರಿಂದ ಅಲ್ಲಿ ಹಾಹಾಕಾರ ಎದ್ದಿದೆ. ಯುರೋಪಿಗೆ ಉಕ್ರೇನ್ ಮೂಲಕ ಪೂರೈಕೆಯಲ್ಲಿ ಕಳ್ಳತನದ ಸಮಸ್ಯೆಗೆ ತೃಪ್ತಿಕರ ಪರಿಹಾರ ದೊರಕದೆ ಗ್ಯಾಸ್ ಪೂರೈಕೆ ಪುನರಾರಂಭ ಮಾಡುವುದಿಲ್ಲ. ಬದಲಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ರಶ್ಯನ್ ಅಧ್ಯಕ್ಷ ಮೆಡ್ವೆಡೆವ್ ಹೇಳಿದ್ದಾರೆ. ಯುರೋಪಿಯ... ದೇಶಗಳು ಸಹ ಈ ವಿವಾದದ ತೃಪ್ತಿಕರ ಪರಿಹಾ... ಉಕ್ರೇನ್ ಮೇಲೆ ಒತ್ತಡ ಹೇರಬೇಕು ಎಂ... ಕೇಳಿಕೊಂಡಿದ್ದಾರೆ. ಯುರೋಪಿಯನ್ ದೇಶ... ತಮ್ಮ ಅಗತ್ಯದ ಶೇ. 40 ರಷ್ಟನ್ನು ರಶ... ಗಾರ ?ಸ್‌ಪ್ರೊಮ್ ಕಂಪನಿಯಿಂದ ಕೊಳ್ಳುತ್ತಿ... ಅದರಲ್ಲೂ ಮಧ್ಯ ಮತ್ತು ಪೂರ್ವ ಯುರೋ... ದೇಶಗಳ ಅವಲಂಬನೆ ಇನ್ನೂ ಹೆಚ್ಚು. ... ಬೈಲೋರಶ್ಯದ ಮೂಲಕ ಬದಲಿ ವ್ಯವ... ಪ್ರಯತ್ನಿಸುತ್ತಿದೆ. ಈ ನಡುವೆ ಯುರೋಪಿ... ದೇಶಗಳು ಉಕ್ರೇನಿನ ಮೇಲೆ ವಿವಾದ ಬಗೆಹರಿ... ಒತ್ತಡ ಹೇರುತ್ತಿವೆ.

ಚುಚ್ಚುಮದ್ದು

ಕುರ್ಚಿ ಕಯಾಲಿ

• "ನಾನು ಸಚಿವನಾಗಬೇಕೆಂದು ಅಪಾರ ಕಾರ್ಯಕರ್ತರು, ಬೆಂಬಲಿಗರ ಅಭಿಲಾಷೆ. ಅಲ್ಲದೆ ಹಿಂದುಳಿದ ವರ್ಗದವರಿಗೆ ಸಚಿವ ಸಂಪುಟದಲ್ಲಿ ಆದ್ಯತೆ ನೀಡಬೇಕು ಎಂಬ ಒತ್ತಾಯವೂ ಇದೆ."

- ನರಸಿಂಹ ಸ್ವಾಮಿ

ನೂತನ ಬಿಜೆಪಿ ಶಾಸಕ, ದೊಡ್ಡಬಳ್ಳಾಪುರ

► *ಅಂದರೆ ದೊಡ್ಡ ಕುರ್ಚಿಗಾಗಿ ವರಾತ ಶುರು ಅಲ್ವಾ....*

★

ನಿಷೇಧ ಕಾಯ್ದೆ ತನ್ನಿ

• "ಬಿಜೆಪಿ ಸರ್ಕಾರ ಆದ್ಯತೆ ಮೇರೆಗೆ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯಿದೆಯನ್ನು ಜಾರಿಗೆ ತರಬೇಕು"

-ಎಸ್.ಎಲ್.ಭೈರಪ್ಪ, ಕಾದಂಬರಿಕಾರ

► *ಹೇಗೂ ಸರ್ಕಾರಕ್ಕೆ ಬಹುಮತ ಬಂದಿದೆ. ಒದು ಕೈ ನೋಡೋಣ ಅಂತಾನ.*

★

ಇಲ್ಲದಕ್ಕೆ ದಾಖಲೆ!

• "ಏಸುಕ್ರಿಸ್ತ ಇದ್ದನೆ? ಇಲ್ಲವೇ? ಎಂಬುದು ಈಗ ಜಿಜ್ಞಾಸೆಯ ವಿಷಯವಾಗಿದೆ. ಏಸು ಎಂಬುವನು ಇರಲೇ ಇಲ್ಲ ಎಂಬುದಕ್ಕೂ ಹಲವರು ಸಾಕಷ್ಟು ದಾಖಲೆಗಳನ್ನು ಈಗಾಗಲೇ ಕಲೆ ಹಾಕಿದ್ದಾರೆ"

- ಎಸ್.ಎಲ್.ಭೈರಪ್ಪ, ಕಾದಂಬರಿಕಾರ

► *ಯಾರು ಸಂಶೋಧಕರು? ಚಿದಾನಂದಮೂರ್ತಿಯವರಾ?*

★

ಕಣ್ಣೀರೇ ಕಾರಣ

• "ಮಧುಗಿರಿ ಕ್ಷೇತ್ರದಲ್ಲಿ ಉಪ ಚುನಾವಣೆಗಳಲ್ಲಿ ತಮ್ಮ ಸೋಲಿಗೆ ದೇವೇಗೌಡರ ಮೊಸಳೆ ಕಣ್ಣೀರು ಕಾರಣ.."

- ಸಿ.ಚನ್ನಿಗಪ್ಪ,

ಮಧುಗಿರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

► *ಅಂದರೆ ನಿಮ್ಮ ಎಣ್ಣೆ ಕೆಲಸ ಮಾಡಲಿಲ್ಲವಾ?*

★

ಜಾಸ್ತಿ ಕೇಳ್ತಿದ್ದಾರಾ?

• "ಭರವಸೆ ನೀಡಿದಂತೆ ದಾಳಿಕೋರರನ್ನು ನಿರ್ಣಾಯಕವಾಗಿ ಶಿಕ್ಷಿಸಲು ಕೇಂದ್ರ ಸರ್ಕಾರ ವಿಫಲವಾಗಿದ್ದು ಸರ್ಕಾರಕ್ಕೆ ನಾವು ನೀಡುರುವ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕಾದೀತು"

- ಯುಪಿಎ ಕುರಿತು **ಅಮರಸಿಂಗ್,**

ಸಮಾಜವಾದಿ ಪಕ್ಷದ ಪ್ರಧಾನಕಾರ್ಯದರ್ಶಿ

► ಕಾಂಗ್ರೆಸ್ ಜಾಸ್ತಿಲೋಕಸಭಾ ಸೀಟು ಕೇಳ್ತಾ ಇದೆ ಅಲ್ವಾ?

★

ಬ್ರಾಹ್ಮಣರ ಪಕ್ಷ

• "ಬಿಜೆಪಿ ಸರ್ಕಾರ ಹನ್ನೊಂದು ಮಂದಿ ಬ್ರಾಹ್ಮಣರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿದೆ. ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗಲೂ ಬ್ರಾಹ್ಮಣರಿಗೆ ಇಷ್ಟೊಂದು ಕ್ಯಾಬಿನೆಟ್ ಸ್ಥಾನಗಳು ಲಭ್ಯವಾಗಿರಲಿಲ್ಲ. ತಮ್ಮ ಸ್ವಂತ ಪ್ರತಿಭೆಯಿಂದ ಅವರು ಸ್ಥಾನ ಪಡೆದಿದ್ದಾರೆ. ಹೀಗೆ ಬಿಜೆಪಿ ಬ್ರಾಹ್ಮಣರ ಪಕ್ಷ ಎಂಬುದು ನಿಜ. ರಾಜ್ಯದ 36 ಸಚಿವರಲ್ಲಿ 11 ಮಂದಿ ಬ್ರಾಹ್ಮಣರಿಗೆ ಕ್ಯಾಬಿನೆಟ್ ಸ್ಥಾನಮಾನ ಕಲ್ಪಿಸಲಾಗಿದೆ. ಬ್ರಾಹ್ಮಣರಲ್ಲಿ ಅಧಿಕಾರ ಪಡೆಯುವ ಶಕ್ತಿ, ಯುಕ್ತಿ, ಛಲ ಇದೆ. ಅವರ ಮಾರ್ಗದರ್ಶನ ಸರ್ಕಾರಕ್ಕೆ ಬೇಕು."

- ರಾಮಚಂದ್ರಗೌಡ,

ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ

► 'ಅಧಿಕಾರ ಪಡೆಯುವ' ಶಕ್ತಿ, ಯುಕ್ತಿ, ಛಲ ಇಲ್ಲದ ದಲಿತರು, ಹಿಂದುಳಿದವರಿಂದ ಬರೀ ಓಟು ಸಿಕ್ಕರೆ ಸಾಕಲ್ಲವೇ?

★

ಪ್ರಬುದ್ಧತೆ

• 'ಅಂತಹ ಭೀಕರ ದಾಳಿಯಲ್ಲಿ ನನ್ನ ಪತಿ ಹತರಾಗಿದ್ದರೂ ಯಾವುದೇ ಧರ್ಮವು ಮುಗ್ಧರನ್ನು ಹತ್ಯೆ ನಡೆಸುವುದಕ್ಕೆ ಬೋಧಿಸುವುದಿಲ್ಲ ಎಂಬ ದೃಢ ವಿಶ್ವಾಸವನ್ನು ನಾನು ಹೊಂದಿದ್ದೇನೆ. ನಾವು ಪ್ರತಿಯೊಬ್ಬರೂ ಪರಸ್ಪರ ಸಹೋದರತ್ವವನ್ನು ಪ್ರದರ್ಶಿಸಬೇಕಾಗಿದೆ"

- ಕವಿತಾ ಕರ್ಕರೆ, ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಹತರಾದ ಹೇಮಂತ್ ಕರ್ಕರೆ ಪತ್ನಿ.

► ಮೋದಿ, ಠಾಕ್ರೆ, ಮುತಾಲಿಕ್, ತೊಗಾಡಿಯಾ ಇದನ್ನೊಮ್ಮೆ ಕೇಳಬಾರದೆ?

ಇದ್ದದ್ದು ಇದ್ದಾಂಗ

ಭಯೋತ್ಪಾದನೆ V/s ಧೀರತನ?!

"ಬಿಜೆಪಿ ಪಕ್ಷ ಅಥವಾ ಆರೆಸ್ಸೆಸ್‌ನಿಂದ ಯಾವುದೇ ರೀತಿಯ ಅಭಿಯಾನಗಳಿಗೆ ತಮ್ಮ ವಿರೋಧವಿಲ್ಲ. ಆದರೆ ಸರ್ಕಾರಿ ಯಂತ್ರವನ್ನು ಉಪಯೋಗಿಸುವಾಗ ಮುಂಬೈಯಲ್ಲಿ ನಡೆದ ಘಟನೆ ಮಾತ್ರ ಭಯೋತ್ಪಾದನೆ, ಮಾಲೆಗಾಂವ್ ಸ್ಫೋಟದ ರೂವಾರಿಗಳಾದ ಸಾಧ್ವಿ ಪ್ರಜ್ಞಾಸಿಂಗ್, ಪುರೋಹಿತ್ ಹಾಗೂ ಇನ್ನಿತರರು ಧೀರರು ಎಂಬ ನೆಲೆಯಲ್ಲಿ 'ಜನಜಾಗೃತಿ' ಹಮ್ಮಿಕೊಳ್ಳಲು ಅವಕಾಶ ನೀಡಲಾಗದು"


- ಜಿ.ಎನ್.ನಾಗರಾಜ್

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ಕಾಸರಗೋಡು : ಮಾಫಿಯಾ ಗೂಂಡಾಗಳಿಗೆ ಅಬ್ದುಲ್ ಸತ್ತಾರ್ ಬಲಿ

ದಿನಾಂಕ 21.12.2008ನೇ ಆದಿತ್ಯವಾರ ಾಸರಗೋಡಿನ ಬೋವಿಕ್ಕನ ಎಂಬ ್ರದೇಶಗಳಲ್ಲಿ ಜರುಗಿದ ಡಿವೈಎಫ್ಐನ ಜಿಲ್ಲಾ ಮ್ಮೇಳನದ ರ್‍ಯಾಲಿಯಲ್ಲಿ ಭಾಗವಹಿಸಿ ಅನಂತರ ...ೂರಿನ ಉಳ್ಳಾಲದಲ್ಲಿ ನಡೆದ ಗೆಳೆಯನ ...ದೂ ಕೊಲೆಯಲ್ಲಿ ಸಾವು ಉಂಟಾದುದು) ...ಂತ್ಯ ಸಂಸ್ಕಾರವನ್ನು ಮುಗಿಸಿ ರಾತ್ರಿ 11.30 ರ ...ತ್ತಿಗೆ ಮನೆಗೆ ಮರಳುತ್ತಿದ್ದ ಅಬ್ದುಲ್ ...ತ್ತಾರ್‌ನನ್ನು ಹೊಂಚುಹಾಕಿ ಕುಳಿತಿದ್ದ ಸುಪಾರಿ ...ಂತಕರ ತಂಡ ಹರಿತವಾದ ಆಯುಧಗಳಿಂದ ...ಳಿ ನಡೆಸಿ ಪರಾರಿಯಾಯಿತು. ಗಂಭೀರ ...ಯದೊಂದಿಗೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಗೆ ...ೇರಿಸಿ ಅದೂ ಎಲ್ಲಾ ರೀತಿಯ ವೈದ್ಯಕೀಯ ...ರವುಗಳನ್ನು ನೀಡಲಾಯಿತಾದರೂ ...ಂತಿಮವಾಗಿ ಒಂದು ವಾರದ ಜೀವನ್ಮರಣದ ...ೋರಾಟದಲ್ಲಿ ಅಬ್ದುಲ್ ಸತ್ತಾರ್ ಕೊನೆಗೂ ...ವಿಗೆ ಶರಣಾದರು. ಅಬ್ದುಲ್ ಸತ್ತಾರ್ ...ವೈಎಫ್ಐನ ಉದಯೋನ್ಮುಖಿ ಯುವ ...ತಾರ.

ಕೋಮುವಾದಿಗಳ ವಿರುದ್ಧ, ಉಗ್ರವಾದದ ...ರುದ್ಧ ಹಾಗೂ ಸಮಾಜ ಬಾಹಿರ ದುಷ್ಟಶಕ್ತಿಗಳ ...ರುದ್ಧ ಸದಾ ಜೀವದ ಹಂಗು ತೊರೆದು ತಾನು ...ಬಿದ ತತ್ವ ಸಿದ್ಧಾಂತಗಳಿಗೆ ಬದ್ಧನಾಗಿ ಪ್ರವಾಹದ ...ದ್ಧ ಈಜಾಡುವ ಅಚಲವಾದ ದೃಢ ...ರ್ಧಾರದ ಸತ್ತಾರ್‌ಗೆ ಮರಣ ಕಾಲಕ್ಕೆ 33 ವರ್ಷ ...ಯ. ಆತ ಎಳೆಯ ಪ್ರಾಯದ ಅಂದರೆ 5.5 ...ರುಷದ ಮತ್ತು ಮೂರು ವರ್ಷದ ಮಕ್ಕಳು ಹಾಗೂ ಹೆಂಡತಿಯನ್ನು ಅಗಲಿದ್ದಾರೆ. ಸ್ಥಳೀಯ ಉಪ್ಪಳ ಕರ್ನಾಟಕಕ್ಕೆ ಗಾಂಜಾ ಮೊದಲಾದ ಅಮಲು ಪದಾರ್ಥಗಳ ಕಳ್ಳ ದಂಧೆಯ ಸಾಗಾಟದ ತವರೂರು. ಇಂತಹ ಮಾಫಿಯಾಗಳ ಅಟ್ಟಹಾಸದ ವಿರುದ್ಧ ದಿಟ್ಟ ನೇರ ನಡೆ ನುಡಿಯಿಂದ ಪ್ರತಿಭಟಿಸಿ



ಬಗ್ಗುಬಡಿಯಲು ಸಡ್ಡು ಹೊಡೆದುದಕ್ಕೆ ಸತ್ತಾರ್ ಬಲಿಯಾಗಬೇಕಾಯಿತು. ಇಂತಹ ಅಪಾಯದ ಮುನ್ಸೂಚನೆ ಇದ್ದರೂ ತಾನು ನಂಬಿದ ಆದರ್ಶಗಳೊಂದಿಗೆ ಸತ್ತಾರ್ ರಾಜಿ ಮಾಡದ ವ್ಯಕ್ತಿ. ತನ್ನ ರಾಜಕೀಯ ಸಾಮಾಜಿಕ ಜೀವನದ ಪ್ರಾರಂಭದ ಕೆಲ ವರುಷಗಳಲ್ಲಿ ಜನತಾದಳದೊಂದಿಗೆ ಗುರುತಿಸಿಕೊಂಡಿದ್ದ ಸತ್ತಾರ್ ಅನಂತರ ಡಿವೈಎಫ್ಐನ ತತ್ವ ಸಿದ್ಧಾಂತಗಳಿಂದ ಆಕರ್ಷಿತನಾಗಿ ಅರ್ಪಣಾ ಮನೋಭಾವದಿಂದ ಸಂಘಟನೆಯೇ ತನ್ನ ಉಸಿರಾಗಿಸಿಕೊಂಡು ಹಂತಹಂತವಾಗಿ ಸಂಘಟನೆಯ ಉನ್ನತ ಜವಾಬ್ದಾರಿಗಳಿಗೆ ಆಯ್ಕೆಯಾಗುತ್ತಾ ಹೋದರು. ಸ್ಥಳೀಯ ಡಿವೈಎಫ್ಐ ಘಟಕದ ಅಧ್ಯಕ್ಷರಲ್ಲದೆ ಮಂಜೇಶ್ವರ ಬ್ಲಾಕ್ ಸಮಿತಿಯ ಸದಸ್ಯರೂ ಆಗಿದ್ದರು.

ಸಿಪಿಐ(ಎಂ) ಬೆಂಬಲದೊಂದಿಗೆ ಗ್ರಾಮ ಪಂಚಾಯತ್‌ಗೆ ಸ್ಪರ್ಧಿಸಿ ಅತ್ಯಧಿಕ ಮತಗಳ ಅಂತರದಿಂದ ಚುನಾಯಿತರಾದ ಅಬ್ದುಲ್ ಸತ್ತಾರ್ ಪಂಚಾಯತ್‌ನ ಅಭಿವೃದ್ಧಿ ಕ್ರಮಗಳಿಗೆ ಹೊಸ ಕಣ್ನೋಟ ನೀಡಿದರು.

28.12.08 ರಂದು ಆದಿತ್ಯವಾರ ಬೆಳಿಗ್ಗೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಿತು. ಅದಾದ ಮೇಲೆ ಶವವನ್ನು ಪಕ್ಷದ ಮಂಜೇಶ್ವರ ಏರಿಯಾ ಸಮಿತಿ ಕಚೇರಿ ಎ.ಕೆ.ಜಿ ಮಂದಿರಕ್ಕೆ ತರಲಾಯಿತು. ಅಲ್ಲಿ ಸಾವಿರಾರು ಜನರು ಸೇರಿ ಅಂತಿಮ ನಮನ ಸಲ್ಲಿಸಿದರು. ಮುಂದೆ ಅವರು ಕಾರ್ಯಕ್ಷೇತ್ರವಾದ ಉಪ್ಪಳ ಪೇಟೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ಇಟ್ಟಾಗ ಅಲ್ಲಿ ಜನ ಸಾಗರವೇ ನೆರೆಯಿತು.

ಸಿಪಿಐ(ಎಂ) ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಕೆ.ಪಿ.ಸತೀಶ್ಚಂದ್ರನ್, ಸ್ಥಳೀಯ ಶಾಸಕ ಸಿ.ಎಚ್.ಕುಂಞಂಬು ಪಕ್ಷದ ಮಂಜೇಶ್ವರ ಬ್ಲಾಕ್ ಕಾರ್ಯದರ್ಶಿ ಕೆ.ಆರ್.ಜಯಾನಂದ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಾಬು ಅಬ್ರಹಾಂ ಮೊದಲಾದವರು ಘಟನೆ ನಡೆದ ಮೊದಲಿನಿಂದಲೂ ಪ್ರಾರಂಭಗೊಂಡು ಅಂತ್ಯಸಂಸ್ಕಾರದತನಕ ಎಲ್ಲಾ ರೀತಿಯ ನೆರವು ನೀಡಿದರು.

ಮುಖ್ಯಮಂತ್ರಿ ಭೇಟಿ

ದಿನಾಂಕ 5.1.2009 ರಂದು ಕೇರಳದ ಮುಖ್ಯಮಂತ್ರಿ ಎ.ಎಸ್.ಅಚ್ಯುತಾನಂದನ್ ಅಬ್ದುಲ್ ಸತ್ತಾರ್‌ರವರ ಮನೆಗೆ ಭೇಟಿ ನೀಡಿದರು. ಘಟನೆ ಪ್ರತಿಭಟಿಸಿ ಮಂಜೇಶ್ವರ ಬ್ಲಾಕ್ ಮಟ್ಟದಲ್ಲಿ ಸಾಮೂಹಿಕ ಹರತಾಳ ಯಶಸ್ವಿಯಾಗಿ ನಡೆಯಿತು. ಸ್ಥಳೀಯ ಡಿವೈಎಫ್ಐ ನೇತೃತ್ವದಲ್ಲಿ ದಿನಾಂಕ 14 ರಂದು ಮಾಫಿಯಾ ಕೃತ್ಯದ ವಿರುದ್ಧ ಪಂಚಾಯತ್ ಮಟ್ಟದಲ್ಲಿ ಕಾಲ್ನಡಿಗೆ ಜಾಥಾ ನಡೆಯಲಿದೆ.

ಜನವರಿ 10, 11, 12 ರಂದು ಮೂರು ದಿನಗಳ ಕಾಲ 'ಅಬ್ದುಲ್ ಸತ್ತಾರ್ ಕುಟುಂಬ ನಿಧಿ ಸಂಗ್ರಹಣಾ ದಿನಾಚರಣೆ' ನಡೆಯಲಿದೆ.

ದಿನಾಂಕ 17 ರಂದು ಉಪ್ಪಳದಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದ್ದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಇ.ಪಿ.ಜಯರಾಜನ್ ಭಾಗವಹಿಸಲಿದ್ದು ಸಾವಿರಾರು ಸಂಖ್ಯೆಯಲ್ಲಿ ಜನ ಭಾಗವಹಿಸುವ ನಿರೀಕ್ಷೆಯಿದೆ.

ಅಬ್ದುಲ್ ಸತ್ತಾರ್‌ರವರ ಹುತಾತ್ಮತೆಯನ್ನು ಜನಮನದಲ್ಲಿ ಚಿರಸ್ಥಾಯಿಯಾಗಿಸಲು ಎಲ್ಲಾ ರೀತಿಯಿಂದಲೂ ಕಾರ್ಯಕರ್ತರು ದುಡಿಯುತ್ತಿದ್ದಾರೆ.

■ **ಕೃಷ್ಣಪ್ಪ ಕೊಂಚಾಡಿ**

2008 ವಿದಾಯ - ಸ್ವಾಗತ 2009

ಯುದ್ಧ ಹಡಗಿನ ಎದುರು ಕವಿಗೋಷ್ಠಿ

ಪ್ರಭುತ್ವ ಪಳಗಿಸಿದ ಕಾವ್ಯಕ್ಕಿಂತ, ಪ್ರಭುತ್ವವನ್ನು ಪ್ರತಿಭಟಿಸುವ ಕಾವ್ಯ ಇಂದಿನ ಅಗತ್ಯ

ಇತ್ತೀಚಿಗೆ ಕಾರವಾರದಲ್ಲಿ ಚಿಂತನ ಉತ್ತರ ಕನ್ನಡ ಹಳೆಯ ವರ್ಷಕ್ಕೆ ವಿದಾಯ ಹೇಳುವ ಹೊಸ ವರ್ಷವನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ವಿಶಿಷ್ಟವಾಗಿ ಹಮ್ಮಿಕೊಂಡಿತು. ಕಡಲದಂಡೆಯಲ್ಲಿರುವ 'ಚಾಪೆಲ್' ಯುದ್ಧ ನೌಕೆಯ ಪಕ್ಕದಲ್ಲಿ ನಡೆದ 'ಕವಿಗೋಷ್ಠಿ ಮಾತುಕತೆ' ಕಾರ್ಯಕ್ರಮ ಯುದ್ಧೋನ್ಮಾದದ ಹಡಗಿಗೆ (2008 ಕ್ಕೆ) ಕಾವ್ಯೋನ್ಮಾದವನ್ನು ಉಣಬಡಿಸಿತು. ಹಳೆಯ ವರ್ಷದ ಕೋಮುವಾದಿ ಹಿಂಸಾಚಾರ, ಭಯೋತ್ಪಾದನೆ, ಜಾತಿ ಅಸ್ಪೃಶ್ಯತೆ ಆಚರಣೆ, ಸಾಮ್ರಾಜ್ಯಶಾಹಿ ದಾಳಿಯನ್ನು ತಿರಸ್ಕರಿಸಿ, ದೇಶದಲ್ಲಿ ಸೌಹಾರ್ದತೆ, ಸಮಾನತೆ, ಜನತಾ ಪ್ರಜಾಪ್ರಭುತ್ವದ ಸ್ಥಾಪನೆಯ ಅಗತ್ಯತೆಯನ್ನು ಸೇರಿದ ಕವಿಗಳು, ಚಿಂತಕರು, ಕಲಾವಿದರು ತಮ್ಮ ಮಾತು ಕವಿತೆಯ ಮೂಲಕ ಪ್ರತಿಪಾದಿಸಿದರು. ಡಿಸೆಂಬರ್ 31 ರಂದು ಸೂರ್ಯ ಮುಳುಗುವ ಮುನ್ನ ಪ್ರಾರಂಭವಾದ ಕಾರ್ಯಕ್ರಮ ಹೊಸ ವರ್ಷದ ಆಶಯಗೀತೆಯಾಗಿತ್ತು.



ಕಡಲತಡಿಯ ಮೇಲೆ ಕಾವ್ಯದ ಮೊರೆತಕ್ಕೆ ಕಿವಿಯಾದವರು

ಬದುಕು ಕಟ್ಟುವ ಸಾಹಿತ್ಯ...

ಹಿರಿಯ ಕವಿ, ಆಕಾಶವಾಣಿ ನಿಲಯ ನಿರ್ದೇಶಕರಾದ ಡಾ.ವಸಂತಕುಮಾರ ಪೆರ್ಲ ಮಾತನಾಡಿ ಸಾಹಿತ್ಯ ಮೊದಲಿನಿಂದಲೂ ಹಿಂಸೆಯನ್ನು ಪ್ರತಿರೋಧಿಸುತ್ತಾ ಬಂದಿದೆ. ಸಾಹಿತಿಗಳು ವಿಚಾರವಾದಿಗಳು ಹಿಂಸೆಯ ವಿರುದ್ಧ ಯುದ್ಧೋನ್ಮಾದದ ವಿರುದ್ಧ ಸಾಹಿತ್ಯದ ಮೂಲಕ ಜನರನ್ನು ಎಚ್ಚರಿಸುವ ಕೆಲಸ ಮಾಡಬೇಕು. ಸಾಹಿತ್ಯ ಯಾವಾಗಲೂ ಜನಸಾಮಾನ್ಯರ ದೈನಂದಿನ ಬದುಕಿಗೆ ಸ್ಪಂದಿಸಬೇಕು. ಅಂತಹ ಬದುಕು ಕಟ್ಟುವ ಸಾಹಿತ್ಯ ನಮಗಿಂದು ಬೇಕಾಗಿದೆ. ಅದು ಇಂತಹ ಸಣ್ಣ ಸಣ್ಣ ಕಾರ್ಯಕ್ರಮಗಳಿಂದ ಸಾಧ್ಯ. ಮುಂದಿನ ವರ್ಷ ಇದು ಇನ್ನೂ ಹೆಚ್ಚಾಗಬೇಕಾಗಿದೆ ಎಂದರು.

ಕವಿ ವಿಷ್ಣು ನಾಯ್ಕ ಮಾತನಾಡಿ, ಕೃಷ್ಣ, ದುಶ್ಯಾಸನಾದಿಯಾಗಿ, ಆಡಳಿತ, ವಿರೋಧ ಪಕ್ಷಗಳೆಲ್ಲಾ ಸೇರಿ 'ಹೆಣ್ಣನ್ನು ಬೆತ್ತಲಾಗಿಸಿದ್ದಾರೆ' ಎಂದು ವಿಷಾದ ವ್ಯಕ್ತಪಡಿಸಿದರು.

ಹಿರಿಯ ನಾಟಕಕಾರ ವ್ಯಾಸ ದೇಶಪಾಂಡೆ ಮಾತನಾಡಿ 'ಜಗತ್ತನ್ನು ನಿಯಂತ್ರಿಸುತ್ತಿರುವ ಶಕ್ತಿಗಳು (ಸಾಮ್ರಾಜ್ಯಶಾಹಿ) ಅವಧಿಗೊಮ್ಮೆ ಯುದ್ಧದ ವಾತಾವರಣ ನಿರ್ಮಿಸುತ್ತಿದ್ದಾರೆ. ಅದನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದರು.

ನಿವೃತ್ತ ಪ್ರಾಧ್ಯಾಪಕರಾದ ಸುಮತಿ ನಾಯಕ ಮಾತನಾಡಿ ಕವಿಗಳು ಭಾವ ಪ್ರಧಾನವಾಗಿ ಕವಿತೆ ರಚನೆಯಿಂದಾಚೆ ವಿಚಾರ ಪ್ರಧಾನವಾಗಿ ಬರೆಯುತ್ತಿದ್ದು, ಅದು ಇಂದಿನ ಅಗತ್ಯ ಕೂಡ ಆಗಿದೆ ಎಂದರು.



ಸಮಾರೋಪ ಮಾತನಾಡಿದ ಚಿಂತನದ ಜಿಲ್ಲಾ ಸಂಚಾಲಕ ವಿಠ್ಠಲ ಭಂಡಾರಿ "ಕೋಮು ಜಾತಿ, ಭಾಷೆ, ಹೆಂಡ, ಹಣ ಇತ್ಯಾದಿ ಅಮಲಿನಲ್ಲಿ 2008 ಕಳೆದುಹೋಗಿದೆ. ಅಮಲಿನಿಂದ ಮುಕ್ತವಾದ ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ಗಟ್ಟಿಗೊಳಿಸುವಲ್ಲಿ ಲೇಖಕರು, ಕಲಾವಿದರು ಕಾರ್ಯೋನ್ಮುಖರಾಗಬೇಕು. ಹಲವು ಬಾರಿ ಸಾಹಿತ್ಯವನ್ನು ಪ್ರಭುತ್ವ ಶೋಕೇಸ್ ಸಾಹಿತ್ಯವನ್ನಾಗಿಸಿದೆ. ಬುದ್ಧನ ಕಾಲದಲ್ಲಿ, ವಚನ ಸಾಹಿತ್ಯದ ಕಾಲದಲ್ಲಿ, ಬಂಡಾಯ ಸಾಹಿತ್ಯದ ಕಾಲದಲ್ಲಿ ಹೀಗೆ ಶೋಕೇಸ್‌ನಿಂದ ಇಳಿದು ಬಂದು ಪ್ರಭುತ್ವದಿಂದ ದೂರಾಗಿ ಅದಕ್ಕೆ ಸೆಡ್ಡು ಹೊಡೆದು ನಿಂತಿತ್ತು. ಆಗೆಲ್ಲಾ ಸಾಹಿತ್ಯದಲ್ಲಿ ಎಲ್ಲರ ನೋವು ಮಡುಗಟ್ಟಿತ್ತು. ಸಾಹಿತ್ಯದಲ್ಲಿ ಜೀವಂತಿಕೆ ಇತ್ತು. ಆದರೆ ಈ ಕಾಲದಲ್ಲಿ ಲೇಖಕರು ಪ್ರಭುತ್ವದ ಜೊತೆ ಸ್ನೇಹ ಬೆಳೆಸುತ್ತಿದ್ದಾರೆ. ಒಂದಾಗುತ್ತಿದ್ದಾರೆ. ನೋಬೆಲ್, ಬುಕರ್ ಇತ್ಯಾದಿ ಪ್ರಶಸ್ತಿಗಾಗಿ ಸಾಹಿತ್ಯ ರಚಿಸುವ ಹಂತ ತಲುಪಿದ್ದಾರೆ. ವ್ಯವಸ್ಥೆಯ ಭಾಗವಾಗುತ್ತಿದ್ದಾರೆ. ಪ್ರಭುತ್ವ ಸೃಷ್ಟಿಸುತ್ತಿರುವ ಹಿಂಸೆ ಕ್ರೌರ್ಯವನ್ನು ವಿರೋಧಿಸಿದರೆ ಅವಕಾಶ ವಂಚಿತರಾಗುವ ಭಯ ಕಾಡುತ್ತಿದೆ.

ಪರ್ಯಾಯದ ದಿಟ್ಟತನ

ಆದರೆ ಕಾವ್ಯ ಪ್ರಭುತ್ವದ ಆಮಿಷಗಳನ್ನು ತಿರಸ್ಕರಿಸಿ, ಹೊಸ ಪರ್ಯಾಯ ಕಟ್ಟಬೇಕಾಗಿದೆ. ಪ್ರಭುತ್ವ ಪಳಗಿಸಿದ ಸಾಹಿತ್ಯಕ್ಕಿಂತ ಪ್ರಭುತ್ವವನ್ನು ಪ್ರತಿಭಟಿಸುವ ಸಾಹಿತ್ಯ ಇಂದಿನ ಅಗತ್ಯವಾಗಿದೆ. ಕೋಮುವಾದ, ಮೂಲಭೂತವಾದ, ಹಿಂಸೆ, ಅಸ್ಪೃಶ್ಯತೆ, ಲಿಂಗಬೇಧಗಳು ಸೃಷ್ಟಿಸಿರುವ ಹಿಂಸೆಯೇ ಮರೆಯುತ್ತಿರುವ ಈ ಕಾಲದಲ್ಲಿ ಸಾಹಿತ್ಯ, ಸಾಹಿತಿಗಳು ಪರ್ಯಾಯ ಸೃಷ್ಟಿಸುವ ದಿಟ್ಟತನವನ್ನು 2009 ರಲ್ಲಿ ತೋರಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷ್ಣನಾಯಕ ಹಿಚ್ಕಡ, ಡಾ.ವಸಂತಕುಮಾರ ಪೆರ್ಲ ಪ್ರೊ.ಶ್ರೀಧರ ನಾಯಕ, ಪ್ರೊ.ಫಾಲ್ಗುಣ ಗೌಡ, ಮಂಜುವಾಣಿ, ನಾಗರಾಜ ಮುಖಾರಿ, ಎಸ್.ಅರುಂಧತಿ, ಮಾಧವಿ ಭಂಡಾರಿ ಕೆರೆಕೋಣ, ಕೃಷ್ಣಾನಂದ ಬಾಂದೇಕರ್, ಯಮುನಾ ಗಾಂವ್ಕಾರ್, ವೈಭವ ಬಾಡ್ಕರ್, ಜಿ.ಡಿ.ಪಾಲೇಕರ್ ಮುಂತಾದವರು ಕವನ ವಾಚಿಸಿದರು. ಮಾಜಿ ಸಚಿವ ಪ್ರಭಾಕರ ರಾ... ನಿವೃತ್ತ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ವೈ.ಪ್ರಭು, ಪ್ರಾಚಾರ್ಯರಾದ ವಿಜಯಲಕ್ಷ್ಮಿ ನಾಯಕ, ಮಹೇಶ ಗೋಳಿಕಟ್ಟೆಯವರು, ಡಿ.ರಾಮಪ್ಪ, ಡಾ.ಆರ್.ಜಿ., ಗುಂದಿ, ರಾಮಾ ನಾಯ್ಕ (ಸಾಹಿತ್ಯ ಪರಿಷತ್) ರಮೇಶ್ ಭಂಡಾರಿ ಮುಂತಾದ ಗಣ್ಯರು ಹಾಜರಿದ್ದರು.

■ **ಯಮುನಾ ಗಾಂವ್ಕಾ...**
ಕಾರವಾ...

ಕವಿತೆ

ಮತಾಂತರದ ನೆ...

ಮತಾಂತರದ ನೆಪವಮಾಡಿ
ತೆಗೆಯುತಿಹರು ತಂಟೆ
ಮತಾಂಧರಿಗೆ ಇದನು ಬಿಟ್ಟು
ಬೇರೆ ಕೆಲಸವುಂಟೆ ॥ 1 ॥

ಕೆಡವಿ ಕೆಡಿಸಿ ಕೇಕೆ ಹಾಕೋ
ಶೋಕಿಲಾಲರವರು
ಕೂಡಿ ಬದುಕು ಬೆಸೆಯೋ ಬಗೆಯು
ಗೊತ್ತೇಯಿಲ್ಲ ಚೂರು ॥ 2 ॥

ಹಿಂದು ಒಂದು ಬಂಧು ಎಂದು
ಪಠಿಸುತಿಹರು ಮಂತ್ರ
ಅಂಧಾಭಿಮಾನವ ಬಿತ್ತಿ
ಮನಸು ಒಡೆಯೋ ತಂತ್ರ ॥ 3 ॥

ಒಡಲ ಹಸಿವು ತೃಷೆಯ ಬಾಧೆ
ನೀಗದದಾವುದು ಧರ್ಮ
ಪಡೆಯಲೂಟ ಮಾಡಬೇಕು
ಹಲವು ಹತ್ತು ಕರ್ಮ ॥ 4॥

ನಡಿಯೋದೃಢದಿ ಮನುಜ ಮತವ
ಎತ್ತಿ ಹಿಡಿದು ಮುಂದೆ
ಒಡೆವ ಜನರ ಕೊಡವಿ ಆಚೆ
ದುಡಿವ ಜನನಾವೊಂದೆ ॥ 5 ॥

■ **ನರಸಿಂಹಪ್ಪ**, ಸಿಂಧನೂ...

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12, 18th Cross, S.R.Nagar, BANGALORE - 560 027 Karnataka (State) and Published at BANGALORE No 12,18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor : S.Y.GURUSHANTH